ಜನವರಿ 5, 2025
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1966
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## 21 ವರ್ಷದ ಬ್ಯೂಟಿಗಾಗಿ ಬಟ್ಟೆ ಬಿಚ್ಚಿದ ಅಂಕಲ್!

ನಕಲಿ ಪೊಲೀಸ್‌ಗೆ ದುಡ್ಡು ಕಳ್ಕೊಂಡ ಪಾಪರ್!





## ವಿಧವೆಗಾಗಿ ಪ್ರಾಣ ಸ್ನೇಹಿತನನ್ನೇ ಮುಗಿಸಿದರು!

## ಹೆಂಡತಿಯನ್ನೇ ಕೊಂದ ಸಂಶಯ ಪಿಶಾಚಿ!






## ಅವಾಚ್ಯ ಶಬ್ದದಿಂದ ನಿಂದಿಸಿದ ಗೆಳೆಯನನ್ನು ಕೊಂದರು!

## ಪ್ರೇಯಸಿಯ ಕೊಲೆಗೆ ಸ್ಕೆಚ್ ಹಾಕಿದ ಪಾಗಲ್!



# ಇನ್ಸೂರೆನ್ಸ್ ಹಣಕ್ಕಾಗಿ ಅಪ್ಪನ ಕೊಂದ ಪಾಪಿ ಮಗ!


ಕೊಲೆಯಾದ ಅಣ್ಣಪ್ಪ

**ಅಪ್ಪನ ಹೆಸರಲ್ಲಿ 12 ಲಕ್ಷ ಇನ್ಸೂರೆನ್ಸ್ ಮಾಡಿಸಿದ್ದ ಮಗನೊಬ್ಬ ಬಳಿಕ ಅಪ್ಪನ ಕೊಂದು ಅಪಘಾತದ ನಾಟಕವಾಡಿದರೆ ಸುಮಾರು ಮೂವತ್ತು ಲಕ್ಷ ಹಣ ಕಬಳಿಸಬಹುದು ಎಂಬ ವಿಕೃತ ಬಯಕೆಯಿಂದ ಅಪ್ಪನಿಗೆ ಮಹೂರ್ತ ಫಿಕ್ಸ್ ಮಾಡಿದ ಘಟನೆಯೊಂದು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಕೊಪ್ಪ ಗ್ರಾಮದ ಗೋಸಾವಿ ಕಾಲೋನಿಯಲ್ಲಿ ನಡೆದಿದೆ. ಈ ಘಟನೆಯ ಬಳಿಕ ಇಂತಹ ಪಾಪಿ ಮಗನೂ ಇರುತ್ತಾನಾ? ಎಂದು ಜನ ಪ್ರಶ್ನೆ ಕೇಳಿಕೊಳ್ಳುತ್ತಿದ್ದಾರೆ.**



ಆರೋಪಿ ಪಾಂಡು

**ಮೈಸೂರು**

✍ಬಿ.ಎಂ. ಲವಕುಮಾರ್

ಸಾಮಾನ್ಯವಾಗಿ ತಾವೇನಾದರೂ ಆಕಸ್ಮಿಕವಾಗಿ ಮರಣಹೊಂದಿದರೆ ಮಕ್ಕಳಿಗೆ ಅನುಕೂಲವಾಗಲಿ ಎಂಬ ಕಾರಣಕ್ಕಾಗಿ ಪೋಷಕರು ಇನ್ಸೂರೆನ್ಸ್ ಮಾಡಿಸುತ್ತಾರೆ. ಆದರೆ ಇಲ್ಲಿ ಮಗನೇ ಅಪ್ಪನ ಹೆಸರಲ್ಲಿ ಇನ್ಸೂರೆನ್ಸ್ ಮಾಡಿಸಿ ಅಪ್ಪನನ್ನೇ ಮುಗಿಸಲು ಮುಂದಾಗಿರುವುದು ನಿಜಕ್ಕೂ ಬೇಸರದ ಸಂಗತಿಯಾಗಿದೆ. ಸಾಮಾನ್ಯವಾಗಿ ಹೆತ್ತವರು ಇನ್ಸೂರೆನ್ಸ್ ಮಾಡಿಸಿ ತಾನು ಸತ್ತು ಹೋದರೆ ಇನ್ಸೂರೆನ್ಸ್ ಹಣವನ್ನು ಹಂಚಿಕೊಂಡು ಮಕ್ಕಳು ಸುಖವಾಗಿರಲಿ ಎಂಬ ಕಾರಣಕ್ಕಾಗಿ ಇನ್ಸೂರೆನ್ಸ್ ಮಾಡಿಸುತ್ತಾರೆ. ಆದರೆ ಇಲ್ಲಿ ಆಗಿದ್ದೇ ಬೇರೆ.

ಈ ಘಟನೆಯ ಬಳಿಕ ಇಡೀ ಗೋಸಾವಿ ಕಾಲೋನಿಯ ಜನ ಆತಂಕಗೊಂಡಿದ್ದಾರೆ. ಹಣಕ್ಕಾಗಿ ಹೀಗೂ ಮಾಡುತ್ತಾರಾ? ಎಂದು ಪ್ರಶ್ನಿಸುತ್ತಿದ್ದಾರಾ? ನಮ್ಮ ಕಣ್ಣೆದುರು ಓಡಾಡಿ ಬೆಳೆದ ಹುಡುಗ ಅಪ್ಪನನ್ನು ಚೆನ್ನಾಗಿ ನೋಡಿಕೊಳ್ಳುತ್ತಾನೆಂದುಕೊಂಡರೆ ಆತನೇ ಕೊಲೆ ಮಾಡುತ್ತಾನೆ ಎಂಬುದನ್ನು ಯಾರೂ ಊಹಿಸಲು ಸಾಧ್ಯವಿಲ್ಲ. ಹೀಗಾಗಿಯೇ ಜನ ಭಯಗೊಂಡಿದ್ದಾರೆ. ಅಯ್ಯೋ ಎಂತಹ ಕಾಲ ಬಂತಪ್ಪಾ ಎಂದು ಕೈಕೈ ಹಿಸುಕಿಕೊಳ್ಳುತ್ತಿದ್ದಾರೆ. ಹಣಕ್ಕಾಗಿ ಜನ್ಮಕೊಟ್ಟ ತಂದೆಯನ್ನೇ ಕೊಲೆ ಮಾಡಿ ಅಪಘಾತದ ನಾಟಕವಾಡುತ್ತಾರೆ ಎಂದರೆ ಮುಂದೇನು? ಇದು ಕಲಿಯುಗದಲ್ಲಿ ಏನು ಬೇಕಾದರೂ ನಡೆಯಬಹುದು ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ.


ಅಣ್ಣಪ್ಪನ ಮೃತದೇಹ

ಅಪ್ಪನಿಗೆ ಯಾವುದೇ ರೀತಿಯ ಚಿಕ್ಕ ಅನುಮಾನವೂ ಬಾರದಂತೆ ಮಗ ತನ್ನ ಕೆಲಸ ಮಾಡಿ ಮುಗಿಸಿದ್ದಾನೆ. ಆದರೆ ಹಾಲು ಕುಡಿದವರೇ ಬದುಕೋದಿಲ್ಲ ಹೀಗಿರುವಾಗ ವಿಷ ಕುಡಿದವರು ಬದುಕುತ್ತಾರಾ? ಎಂಬ ಮಾತಿದೆ. ಅದರಂತೆ ಅಪ್ಪನ ಮುಗಿಸಿದರೆ ಅಪ್ಪನ ಹೆಸರಿನ ಇನ್ಸೂರೆನ್ಸ್ ಹಣದಿಂದ ಲೈಫ್‌ನಲ್ಲಿ ಜಾಲಿಯಾಗಿರಬಹುದೆಂದು ನಂಬಿದ ಆತ ಅಪ್ಪನನ್ನು ಕೊಂದು ಅಪಘಾತದ ನಾಟಕವಾಡಿದ್ದ ಆದರೆ ಅಪಘಾತ ಯಾವುದು? ಕೊಲೆ ಯಾವುದು ಎಂಬುದು ಗೊತ್ತಾಗದಷ್ಟು ಪೊಲೀಸರೇನು ದಡ್ಡರೇ? ಹಾಗಾದರೆ ಮುಂದೇನಾಯಿತು? ಇಲ್ಲಿದೆ ಕ್ರೈಮ್ ಸ್ಟೋರಿಯ ಅಸಲಿಯತ್ತು.



ಮೈಸೂರು ಜಿಲ್ಲೆಯ ಘಟನೆ ಪಿರಿಯಾಪಟ್ಟಣ ತಾಲೂಕಿನ ಕೊಪ್ಪ ಗ್ರಾಮದ ಗೋಸಾವಿ ಕಾಲೋನಿ ನಿವಾಸಿ ಅಣ್ಣಪ್ಪ(60) ಎಂಬಾತನೇ ತನ್ನ ಪಾಪಿ ಮಗ ಪಾಂಡು(27)ನ ದುರಾಸೆಗೆ ಬಲಿಯಾದ ದುರ್ದೈವಿ. ಕೊಲೆಯಾದ ಅಣ್ಣಪ್ಪ ಮದುವೆಯಾಗಿ ಮೊದಲ ಹೆಂಡತಿ ಸಾವನ್ನಪ್ಪಿದ್ದು ಆಕೆಗೆ ಎರಡು ಗಂಡು ಮಕ್ಕಳಿದ್ದು ಮೊದಲನೆಯವನು ಧರ್ಮ ಎರಡನೆಯವನು ಪಾಂಡು. ಆದರೆ ಮೊದಲ ಹೆಂಡತಿ ಸಾವನ್ನಪ್ಪಿದ ಬಳಿಕ ಅಣ್ಣಪ್ಪ ಎರಡನೇ ಮದುವೆಯಾಗಿದ್ದನು. ಆದರೆ ಎರಡನೇ ಹೆಂಡತಿ ದೂರದಲ್ಲಿದ್ದಳು. ಆಕೆಯೊಂದಿಗೆ ಅಣ್ಣಪ್ಪ ಇರದೆ ಆಗೊಮ್ಮೆ ಈಗೊಮ್ಮೆ ಹೋಗಿ ಬರುತ್ತಿದ್ದನು. ಸದಾ ಹಿರಿಯ ಹೆಂಡತಿ ಮಕ್ಕಳ ಜತೆಯಲ್ಲಿ ಪಿರಿಯಾಪಟ್ಟಣ ತಾಲೂಕಿನ ಕೊಪ್ಪ ಗ್ರಾಮದ ಗೋಸಾವಿ ಕಾಲೋನಿಯಲ್ಲೇ ಉಳಿದುಕೊಳ್ಳುತ್ತಿದ್ದನು.

ಈತ ಜೀವನೋಪಾಯಕ್ಕಾಗಿ ಸ್ಟೌವ್ ರಿಪೇರಿ, ಟ್ಯಾಂಕ್, ಪ್ಲಾಸ್ಟಿಕ್ ರಿಪೇರಿ ಹೀಗೆ ಸಿಕ್ಕ, ಸಿಕ್ಕ ಕೆಲಸಗಳನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದನು. ಈ ನಡುವೆ ಮೊದಲನೇ ಹೆಂಡತಿಯ ಕಿರಿಯ ಮಗ ಪಾಂಡು ಖತರ್ ನಾಕ್ ಆಗಿದ್ದು ಈತ ಕಾರು ಓಡಿಸಿಕೊಂಡು ಫೈನಾನ್ಸ್ ಮಾಡಿಕೊಂಡು ಜಾಲಿಯಾಗಿದ್ದನು. ದುಡ್ಡಿನ ಹಿಂದೆ ಬಿದ್ದಿದ್ದ ಈತನಿಗೆ ಹಣ ಮಾಡುವುದೊಂದೇ ಗುರಿಯಾಗಿತ್ತು. ದುಡ್ಡು ಮಾಡಲು ಹೊರಟವನ ತಲೆಯಲ್ಲಿ ಬರೀ ಕ್ರಿಮಿನಲ್ ಐಡಿಯಾಗಳೇ ಓಡಾಡಿದ್ದವು. ಈ ನಡುವೆ ಸಾಲಗಳು ಹೆಚ್ಚಾಗಿದ್ದವು. ಹೀಗಾಗಿ ಸಾಲಗಾರರ ಕಾಟದ ನಡುವೆ ಬದುಕುವುದು ಕಷ್ಟವಾಗಿತ್ತು. ಹಣದ ಅಗತ್ಯತೆಯಿತ್ತು ಹೀಗಿರುವಾಗಲೇ ಖತರ್ನಾಕ್ ಐಡಿಯಾ ಬಂದಿತ್ತು. ಅದರಂತೆ ಅಪ್ಪ ಅಣ್ಣಪ್ಪನ ಹೆಸರಲ್ಲಿ 12 ಲಕ್ಷ ಇನ್ಸೂರೆನ್ಸ್ ಮಾಡಿಸಿದ್ದನು. ಆದರೆ ಇದರ ಹಿಂದಿನ ಕರಾಮತ್ತು ವೃದ್ಧ ಅಣ್ಣಪ್ಪನಿಗೂ ಗೊತ್ತಾಗಿರಲಿಲ್ಲ. ಅಪ್ಪ ಸತ್ತರೆ 30 ಲಕ್ಷ ಇನ್ಸೂರೆನ್ಸ್ ಹಣ ಬರುತ್ತದೆ ಎಂಬುದು ಅವನ ಆಲೋಚನೆಯಾಗಿತ್ತು.

ಈ ನಡುವೆ ಅಪ್ಪನ ಹೆಸರಲ್ಲಿದ್ದ ಇನ್ಸೂರೆನ್ಸ್‌ಗೆ ಹಣ ಕಟ್ಟಿಕೊಂಡು ಬಂದಿದ್ದ ಮಗ ಪಾಂಡುವಿನ ಆಲೋಚನೆಯೇ ಬೇರೆಯಾಗಿತ್ತು. ಸಮಯ ನೋಡಿಕೊಂಡು ಅಪ್ಪ ಅಣ್ಣಪ್ಪನನ್ನು ಮುಗಿಸಿ ಅಪಘಾತದ ನಾಟಕವಾಗಿ ಪೊಲೀಸರಿಗೆ ದೂರು ನೀಡಿದರೆ ಮಾಡಿಸಿರುವ ಇನ್ಸೂರೆನ್ಸ್ ಹಣ ಡಬಲ್ ಬರುತ್ತದೆ. ಅದರಲ್ಲಿ ನೆಮ್ಮದಿಯಾಗಿ, ಜಾಲಿಯಾಗಿ ಬದುಕಬಹುದೆಂದು ಕನಸು ಕಾಣುತ್ತಿದ್ದನು. ಅಷ್ಟೇ ಅಲ್ಲದೆ ಆ ಕನಸು ನನಸು ಮಾಡಲು ಹೊಂಚು ಹಾಕುತ್ತಿದ್ದನು. ಇದೆಲ್ಲದರ ನಡುವೆ ಸಮಯ ಸಾಧಿಸುತ್ತಲೇ ಬಂದಿದ್ದ ಮಗ ಪಾಂಡುವಿಗೆ ಅಪ್ಪನನ್ನು ಮುಗಿಸಲು ಸೂಕ್ತ ಸಮಯ ಒದಗಿ ಬಂದಿರಲಿಲ್ಲ, ಆದರೆ ಇನ್ನು ಹೀಗೆಯೇ ಸಮಯವನ್ನು ಮುಂದೂಡಿಕೊಂಡು ಹೋದರೆ ಕಷ್ಟವಾಗಲಿದ್ದು ಹೇಗಾದರು ಮಾಡಿ ತನ್ನ ಕೆಲಸ ಮುಗಿಸಬೇಕು. ಇಲ್ಲಾಂದ್ರೆ ಕಷ್ಟವಾಗುತ್ತದೆ ಎಂದು ಆಲೋಚನೆ ಮಾಡಿದ್ದನು.



ಕೃತ್ಯ ನಡೆದ ಸ್ಥಳ

ಅವತ್ತು ಡಿಸೆಂಬರ್ 25 ಬುಧವಾರ ಇವತ್ತು ಏನೇ ಆಗಲಿ ಅಪ್ಪನನ್ನು ಮುಗಿಸಲೇ ಬೇಕೆಂದು ಮಗ ಪಾಂಡು ತೀರ್ಮಾನ ಮಾಡಿ ಬಿಟ್ಟಿದ್ದನು. ಅದರಂತೆ ಅಪ್ಪನ ಬಳಿಗೆ ಬಂದು ನೀನು ಟಿಬೆಟ್ ಕಾಲೋನಿಗೆ ಹೋಗು ಅಲ್ಲಿ ಟ್ಯಾಂಕ್ ರಿಪೇರಿ ಮಾಡುವ ಕೆಲಸವಿದೆಯಂತೆ ಎಂದು ಹೇಳಿದ್ದಾನೆ. ಮಗ ಪಾಂಡುವಿನ ಮಾತು ಕೇಳಿದ ಅಪ್ಪ ಅಣ್ಣಪ್ಪ ಕೆಲಸ ಮಾಡಿದರೆ ಅಷ್ಟು ಇಷ್ಟು ಹಣ ಸಿಗುತ್ತದೆಯಲ್ಲ ಎಂದು ಖುಷಿಯಲ್ಲಿ ಹೊರಟಿದ್ದಾನೆ. ಅಪ್ಪ ಮನೆಯಿಂದ ಹೊರಟಿರುವುದು ಗೊತ್ತಾಗುತ್ತಿದ್ದಂತೆಯೇ ಮಗ ಪಾಂಡು ಖುಷಿಪಟ್ಟಿದ್ದಾನೆ. ಅಪ್ಪ ಅಣ್ಣಪ್ಪ ಹೋದ ಸ್ವಲ್ಪ ಹೊತ್ತಿನಲ್ಲಿ ಕಾರಿನ ಅವರನ್ನು ಹಿಂಬಾಲಿಸಿದ ಮಗ ಪಾಂಡು ದಾರಿ ಮಧ್ಯೆ ನಿರ್ಜನ ಪ್ರದೇಶದಲ್ಲಿ ಅಣ್ಣಪ್ಪ ಅವರ ತಲೆಗೆ ದೊಣ್ಣೆಯಿಂದ ಬಲವಾಗಿ ಹೊಡೆದಿದ್ದಾನೆ. ತೀವ್ರಗಾಯಗೊಂಡ ಅಣ್ಣಪ್ಪ ಸ್ಥಳದಲ್ಲೇ ಬಿದ್ದು ಮೃತಪಟ್ಟಿದ್ದಾರೆ. ಇದಾದ ಬಳಿಕ ಆರೋಪಿ ಪಾಂಡು, ಶವವನ್ನು ತನ್ನ ಕಾರಿನಲ್ಲಿ ಬಿಎಂ ರಸ್ತೆಯ ಮಂಚದೇವನಹಳ್ಳಿ ಬಿದಿರು ವನ ಸಮೀಪ ಬಿಸಾಡಿದ್ದಾನೆ. ಬಳಿಕ ಪೊಲೀಸ್ ಠಾಣೆಗೆ ಹೋಗಿ ತನ್ನ ತಂದೆಗೆ ಅಪರಿಚಿತ ವಾಹನ ಡಿಕ್ಕಿಯಾಗಿ ಮೃತಪಟ್ಟಿದ್ದಾರೆ ಎಂದು ದೂರು ದಾಖಲಿಸಿದ್ದಾನೆ.

ಪಾಂಡು ನೀಡಿದ ದೂರು ಸ್ವೀಕರಿಸಿದ ಬೈಲುಕುಪ್ಪೆ ಪೊಲೀಸರು, ಎಫ್ಐಆರ್ ದಾಖಲಿಸಿದರು. ಬಳಿಕ ಸಬ್ ಇನ್ಸ್‌ಪೆಕ್ಟರ್

☞12


ಪೊಲೀಸ್ ಕಸ್ಟಡಿಯಲ್ಲಿ ಆರೋಪಿ ಪಾಂಡು



# 21 ವರ್ಷದ ಬ್ಯೂಟಿಗಾಗಿ ಬಟ್ಟೆ ಬಿಚ್ಚಿದ ಅಂಕಲ್! ನಕಲಿ ಪೊಲೀಸ್‌ಗೆ ದುಡ್ಡು ಕಳ್ಕೊಂಡ ಪಾಪರ್!!


ಆರೋಪಿ ನಯನಾ

ಪರಿಚಿತ ಸಿವಿಲ್ ಗುತ್ತಿಗೆದಾರನಿಗೆ ಟೀ ಕುಡಿಯಲು ಮನೆಗೆ ಕರೆದು ಹನಿಟ್ರ್ಯಾಪ್ ಮಾಡಿ ನಗದು, ಚಿನ್ನಾಭರಣ ದೋಚಿದ್ದ ಪ್ರಕರಣದಲ್ಲಿ ಮೂವರು ಆರೋಪಿಗಳನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತುಂಗಾನಗರದ ಸಂತೋಷ್ (28), ಅಜಯ್ (25) ಮತ್ತು ಜಯರಾಜ್ (30) ಬಂಧಿತರು. ಪ್ರಕರಣದಲ್ಲಿ ನಯನಾ ಸೇರಿ ನಾಲ್ವರು ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರಿಗಾಗಿ ಶೋಧ ಕಾರ್ಯ ನಡೆಯುತ್ತಿದೆ. ಆರೋಪಿಗಳು ಡಿ.9ರಂದು ಮಾಗಡಿ ರಸ್ತೆ ತುಂಗಾನಗರದ ಮನೆಯೊಂದರಲ್ಲಿ ಉಲ್ಲಾಳ ವಿನಾಯಕ ಲೇಔಟ್ ನಿವಾಸಿ ರಂಗನಾಥ (57) ಎಂಬುವವರನ್ನು ಬೆದರಿಸಿ ನಗದು ಹಾಗೂ ಚಿನ್ನಾಭರಣ ಸುಲಿಗೆ ಮಾಡಿದ್ದರು ಎಂದು ಪೊಲೀಸರು ಮಾಹಿತಿ ನೀಡಿದರು.

**ಏನಿದು ಪ್ರಕರಣ?**

ಸಿವಿಲ್ ಗುತ್ತಿಗೆದಾರ ರಂಗನಾಥ್‌ಗೆ ಕಳೆದ 6 ತಿಂಗಳ ಹಿಂದೆ ಶಿವು ಎಂಬ ಸ್ನೇಹಿತನ ಮೂಲಕ ನಯನಾ ಪರಿಚಯವಾಗಿದೆ. ಬಳಿಕ ಈ ನಯನಾ ತನ್ನ ಮಗುವಿಗೆ ಹುಷಾರಿಲ್ಲ ಆಸ್ಪತ್ರೆಗೆ ತೋರಿಸಬೇಕು ಎಂದು ರಂಗನಾಥ ಬಳಿ ಫೋನ್ ಪೇ ಮೂಲಕ ಎರಡು ಬಾರಿ 5 ಸಾವಿರ ರೂ. ಹಾಗೂ ಮತ್ತೊಮ್ಮೆ 4 ಸಾವಿರ ರೂ. ಪಡೆದುಕೊಂಡಿದ್ದಳು.

ಬಳಿಕ ಪ್ರತಿದಿನ ರಂಗನಾಥಗೆ ಕರೆ ಮಾಡಿ ಮನೆಗೆ ಬನ್ನಿ ಎಂದು ಕರೆಯುತ್ತಿದ್ದಳು. ಆದರೆ, ರಂಗನಾಥ ಹೋಗಿರಲಿಲ್ಲ. ಇತ್ತೀಚೆಗೆ ಒಂದು ದಿನ ರಾತ್ರಿ ರಂಗನಾಥಗೆ ಕರೆ ಮಾಡಿ ಮನೆಗೆ ಬರುವಂತೆ ಕರೆದಿದ್ದಾಳೆ. ಬರುವುದಾಗಿ ಹೇಳಿದ್ದ ರಂಗನಾಥ ಬಳಿಕ ಹೋಗಿಲ್ಲ. ಈ ನಡುವೆ ರಂಗನಾಥ ನೆಲಗದರನಹಳ್ಳಿಯಲ್ಲಿರುವ ಅಳಿಯನ ಮನೆ ನವೀಕರಣ ಕೆಲಸ ಕೈಗೆತ್ತಿಕೊಂಡಿದ್ದರು. ಹೀಗಾಗಿ ರಂಗನಾಥ ಡಿ.9ರಂದು ಬೆಳಗ್ಗೆ ಮಾಗಡಿ ರಸ್ತೆಯ ತುಂಗಾ ನಗರದ ಮಾರ್ಗವಾಗಿ ನೆಲಗದರನಹಳ್ಳಿ ಕಡೆಗೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾರೆ.


ಆರೋಪಿಗಳಾದ ಸಂತೋಷ್, ಅಜಯ್ ಹಾಗೂ ಜಯರಾಜ್

ಅದೇ ವೇಳೆ ತುಂಗಾನಗರ ಕ್ರಾಸ್‌ನ ಬಳಿ ದ್ವಿಚಕ್ರ ವಾಹನದಲ್ಲಿ ಹಿಂದಿನಿಂದ ಬಂದ ನಯನಾ, ಸಾರ್ ಎಂದು ಕೂಗಿದ್ದಾಳೆ. ಈ ವೇಳೆ ರಂಗನಾಥ ದ್ವಿಚಕ್ರ ವಾಹನ ನಿಲ್ಲಿಸಿದ್ದಾರೆ. ಬಳಿಕ ನಯನಾ, ನಮ್ಮ ಮನೆ ಇಲ್ಲೇ ಪಕ್ಕದಲ್ಲಿದೆ. ಟೀ ಕುಡಿದು ಹೋಗಿ ಎಂದು ಆಹ್ವಾನಿಸಿದ್ದಾಳೆ. ಅದಕ್ಕೆ ಒಪ್ಪಿದ ರಂಗನಾಥ ಆಕೆಯ ಮನೆಗೆ ತೆರಳಿದ್ದಾರೆ. ಬಳಿಕ ಇಬ್ಬರು ಕುಳಿತು ಮಾತುಕತೆಯಲ್ಲಿ ತೊಡಗಿದ್ದಾರೆ.

**ಕ್ರೈಂ ಪೊಲೀಸರ ಸೋಗಿನಲ್ಲಿ ದಾಳಿ**

ಅದೇ ವೇಳೆ ಮೂವರು ಆರೋಪಿಗಳು ಕ್ರೈಂ ಪೊಲೀಸರ ಸೋಗಿನಲ್ಲಿ ಮನೆಗೆ ನುಗ್ಗಿದ್ದಾರೆ. ಈ ವೇಳೆ ನೀವು ಮನೆಯಲ್ಲಿ ವ್ಯಭಿಚಾರ ಮಾಡುತ್ತಿದ್ದೀರಾ, ಕೆಳಗೆ ಜೀಪಿನಲ್ಲಿ ಮೇಡಂ ಇದ್ದಾರೆ ಎಂದು ರಂಗನಾಥ್ ಮೇಲೆ ಹಲ್ಲೆ ಮಾಡಿದ್ದಾರೆ. ಬಳಿಕ ರಂಗನಾಥ್ ಬಟ್ಟೆ ಬಿಚ್ಚಿಸಿ ಮೊಬೈಲ್‌ನಲ್ಲಿ ಫೋಟೋ ತೆಗೆದಿದ್ದಾರೆ. 2 ಲಕ್ಷ ರೂ. ಕೊಟ್ಟರೆ ಇಲ್ಲೇ ಬಿಟ್ಟು ಹೋಗುತ್ತೇವೆ. ಇಲ್ಲವಾದರೆ, ನೀನು ಇವಳೊಂದಿಗೆ ಅಕ್ರಮ ಸಂಬಂಧ ಹೊಂದಿರುವೆ ಎಂದು ನಿನ್ನ ಹೆಂಡತಿ ಮತ್ತು ಮಕ್ಕಳಿಗೆ ತಿಳಿಸುತ್ತೇವೆ ಎಂದು ಹೆದರಿಸಿದ್ದಾರೆ ಎಂದು ರಂಗನಾಥ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಇದರಿಂದ ಹೆದರಿದ ರಂಗನಾಥ್, ಕೊರಳಲ್ಲಿದ್ದ ಚಿನ್ನದ ಸರ, ಜೇಬಿನಲ್ಲಿದ್ದ 29 ಸಾವಿರ ರೂ. ನಗದು ಹಾಗೂ ಮೊಬೈಲ್, 2 ಚಿನ್ನದ ಉಂಗುರ ಕಿತ್ತುಕೊಂಡಿದ್ದಾರೆ. ಬಳಿಕ ಮತ್ತೊಬ್ಬ ಫೋನ್ ಪೇ ಮೂಲಕ 26 ಸಾವಿರ ರೂ. ತನ್ನ ಖಾತೆಗೆ ವರ್ಗಾಯಿಸಿಕೊಂಡಿದ್ದಾನೆ. ಬಳಿಕ ಆಟೋ ಹತ್ತಿ ಪರಾರಿಯಾಗಿದ್ದರು ಎಂದು ಪೊಲೀಸರು ಹೇಳಿದರು.

**ಮಗು ಜತೆ ಮನೆಗೆ ಬರುವುದಾಗಿ ಬೆದರಿಕೆ**

ಈ ವೇಳೆ ನಯನಾ ಸಹ ದ್ವಿಚಕ್ರ ವಾಹನದಲ್ಲಿ ಆ ಆಟೋ ಹಿಂಬಾಲಿಸಿದ್ದಾಳೆ. ಅಲ್ಲದೆ, ಕೆಲ ಹೊತ್ತಿನ ಬಳಿಕ ರಂಗನಾಥ್‌ಗೆ ಕರೆ ಮಾಡಿ, ಆರೋಪಿಗಳು ನಾಪತ್ತೆಯಾದರು ಎಂದಿದ್ದಾಳೆ. ಆಗ ರಂಗನಾಥ, ಘಟನೆ ಸಂಬಂಧ ಪೊಲೀಸ್ ಠಾಣೆಗೆ ದೂರು ನೀಡೋಣ ಬಾ ಎಂದು ಕರೆದಿದ್ದಾರೆ. ಆಗ ನಯನಾ, ಪೊಲೀಸ್ ದೂರು ನೀಡಿದರೆ, ನನ್ನ ಮಗುವನ್ನು ನಿನ್ನ ಮನೆಗೆ ಕರೆತಂದು ನನಗೂ ನಿನಗೂ ಸಂಬಂಧವಿದೆ ಎಂದು ಹೇಳುವುದಾಗಿ ಹೆದರಿಸಿದ್ದಾಳೆ. ಅದರಿಂದ ಭಯಗೊಂಡ ರಂಗನಾಥ ಮನೆಗೆ ತೆರಳಿದ್ದಾರೆ. ಬಳಿಕ ವಕೀಲರೊಂದಿಗೆ ಚರ್ಚಿಸಿ ಬ್ಯಾಡರಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ ಎಂದು ಪೊಲೀಸರು ಹೇಳಿದರು.

ಸದ್ಯ ಸಂತೋಷ್, ಅಜಯ್, ಜಯರಾಜ್ ಎಂಬುವವರನ್ನ ಪೊಲೀಸ್ ಬಂಧಿಸಿದ್ದು, ಎಸ್ಕೇಪ್ ಆಗಿರುವ ಯುವತಿ ನಯನಾಗಾಗಿ ಹುಡುಕಾಟ ನಡೆಸಲಾಗುತ್ತಿದೆ. ಬ್ಯಾಡರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸ್ನೇಹಿತರಿಂದ ಗರ್ಲ್ ಫ್ರೆಂಡ್ ಎಕ್ಸ್‌ಚೇಂಜ್ ದಂಧೆ! ಒಪ್ಪದಿದ್ದ ಗೆಳತಿ ಮೇಲೆ ಮಾನಗೇಡಿ ಕೃತ್ಯ!!

**ಬರ್ತ್‌ಡೇ ಬರಲಿ, ನ್ಯೂ ಇಯರ್ ಬರಲಿ ಪಾರ್ಟಿ ಮಾಡೋ ಕ್ರೇಜ್ ಯುವಕರಲ್ಲಿ ಹೆಚ್ಚಾಗಿದೆ. ಆದರೆ ಇತ್ತೀಚೆಗೆ ಈ ಪಾರ್ಟಿ ಹೆಸರಲ್ಲೂ ನಡೀತಿದೆ ವಂಚನೆ. ಸ್ನೇಹ ಮಾಡೋದು ಸಹಜ. ಇತ್ತೀಚೆಗೆ ಈ ಸ್ನೇಹ ಅನ್ನೋದು ಕೇವಲ ಅಗತ್ಯಕ್ಕಾಗಿ ಬದಲಾಗಿದೆ. ಇದೀಗ ಪಾರ್ಟಿ ಹೆಸರಲ್ಲಿ ಪರಸ್ಪರ ಗರ್ಲ್ ಫ್ರೆಂಡ್ ಎಕ್ಸ್‌ಚೇಂಜ್ ಮಾಡಿಕೊಂಡ ಆರೋಪವೊಂದು ಬೆಳಕಿಗೆ ಬಂದಿದೆ. ಸ್ವಿಂಗರ್ಸ್ ಅನ್ನೋ ಹೆಸರಿನಲ್ಲಿ ಬೆಂಗಳೂರಿನಲ್ಲೇ ನಡೀತಿದೆ ಭಾರೀ ದೊಡ್ಡ ದಂಧೆ.**





ಸಾಮಾನ್ಯವಾಗಿ ಸ್ನೇಹಿತರು, ಪ್ರಿಯಕರ ಅಂದಾಗ ಸುತ್ತಾಡೋದು, ಪಾರ್ಟಿ ಮಾಡೋದು ಸಹಜ. ಆದರೆ ಸದ್ಯ ಬೆಂಗಳೂರಿನಲ್ಲಿ ಈ ಪಾರ್ಟಿ ತಮ್ಮ ತಮ್ಮ ಗರ್ಲ್‌ಫ್ರೆಂಡ್‌ಗಳನ್ನೇ ಎಕ್ಸ್‌ಚೇಂಜ್ ಮಾಡೋ ಮಟ್ಟಿಗೆ ತಲುಪಿದೆ. ಇಲ್ಲೊಬ್ಬಳು ಯುವತಿಯನ್ನ ಸ್ನೇಹಿತ ಜೊತೆಗೆ ಸಹಕರಿಸುವಂತೆ ಬಲವಂತವಾಗಿ ಒತ್ತಾಯಿಸಿದ್ದಾರೆ, ಒಪ್ಪದಿದ್ದ ಕಾರಣಕ್ಕೆ ಸ್ನೇಹಿತರ ಜೊತೆ ಸೇರಿ ಅತ್ಯಾಚಾರ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಪರಿಚಯಸ್ಥ ಯುವತಿಯನ್ನು ಸ್ನೇಹಿತನೊಬ್ಬ ತನ್ನ ಇತರ ಫ್ರೆಂಡ್ಸ್ ಜೊತೆ ಸೇರಿಕೊಂಡು ಅತ್ಯಾಚಾರ ಮಾಡಿರುವ ಪ್ರಕರಣ ಇದೀಗ ಬೆಳಕಿಗೆ ಬಂದಿದ್ದು, ಸದ್ಯ ಕರಾಳ ದಂಧೆ ನಡೆಸುತ್ತಿದ್ದ ಆರೋಪಿಗಳಾದ ಹರೀಶ್ ಮತ್ತು ಹೇಮಂತ್ ಎಂಬುವರನ್ನು ಪೊಲೀಸರು ಅರೆಸ್ಟ್ ಮಾಡಿದ್ದಾರೆ ಎನ್ನಲಾಗಿದೆ. ಸಂತ್ರಸ್ತೆ ಸಿಸಿಬಿಗೆ ನೀಡಿದ ದೂರಿನನ್ವಯ ಆರೋಪಿಗಳನ್ನು ಇದೀಗ ಬಂಧಿಸಲಾಗಿದೆ ಎಂದು ವರದಿಯಾಗಿದೆ.

**ಅಸಲಿ ಕಥೆ ಏನು?**

ಅಸಲಿಗೆ ಹರೀಶ್ ಎಂಬಾತ ಈ ನೊಂದ ಯುವತಿಯನ್ನು ಪರಿಚಯ ಮಾಡಿಕೊಂಡಿದ್ದ. ಆರಂಭದಲ್ಲಿ ಆಕೆ ಮತ್ತು ಹರೀಶ್ ಜೋಡಿಹಕ್ಕಿಯಂತೆ ಎಲ್ಲಾ ಕಡೆ ಸುತ್ತಾಡಿದ್ದಲ್ಲದೇ, ಆತ ಲೈಂಗಿಕವಾಗಿಯೂ ಬಳಸಿಕೊಂಡಿದ್ದಾನೆ ಎನ್ನಲಾಗಿದೆ. ಅಷ್ಟೇ ಅಲ್ಲದೇ ಬರಬರುತ್ತಾ ಹರೀಶ್ ತನ್ನ ಅಸಲು ಮುಖ ತೋರಿಸಿದ್ದಾನೆ.

ವಾಟ್ಸಾಪ್ ಗ್ರೂಪ್ ಒಂದನ್ನು ಸ್ವಿಂಗರ್ಸ್ ಟೀಂ ಎಂದು ಮಾಡಿಕೊಂಡಿತ್ತು. ಇದರಲ್ಲಿ ಹರೀಶ್ ಕೂಡಾ ಇದ್ದ ಎನ್ನಲಾಗಿದೆ. ಇನ್ನು ಈ ಗ್ರೂಪ್ ಬೆಂಗಳೂರು ಹೊರವಲಯದಲ್ಲಿ ಪಾರ್ಟಿ ಆಯೋಜನೆ ಮಾಡುತ್ತಿತ್ತು. ಈ ಪಾರ್ಟಿಯಲ್ಲಿ ಹರೀಶ್ ಮತ್ತು ಹೇಮಂತ್ ಇಬ್ಬರೂ ಬರುತ್ತಿದ್ದರು. ಅಲ್ಲದೆ ಹುಡುಗಿಯರನ್ನು ಕರೆದುಕೊಂಡು ಬಂದು ಇಲ್ಲಿ ಪರಸ್ಪರ ಎಕ್ಸ್‌ಚೇಂಜ್ ಮಾಡಿಕೊಳ್ಳುತ್ತಿದ್ದರು ಎನ್ನಲಾಗಿದೆ. ಇಲ್ಲಿ ಗರ್ಲ್‌ಫ್ರೆಂಡ್ ಎಕ್ಸ್‌ಚೇಂಜ್, ಪಾರ್ಟಿಗೆ ಮಾತ್ರ ಸೀಮಿತವಾಗಿರಲಿಲ್ಲ, ಬದಲಿಗೆ ಒಬ್ಬನ ಗರ್ಲ್‌ಫ್ರೆಂಡ್ ಇಲ್ಲಿ ಮತ್ತೊಬ್ಬನ ಜೊತೆ ಬೆಡ್ ಶೇರ್ ಮಾಡಬೇಕಿತ್ತು.

ಇದೇ ರೀತಿ ಹರೀಶ್ ಎಂಬಾತ ತನ್ನ ಸ್ನೇಹಿತೆಯನ್ನ ಇನ್ನೊಬ್ಬನೊಂದಿಗೆ ಸಹಕರಿಸುವಂತೆ ಹೇಳಿದ್ದಾನೆ ಎಂದು ಹೇಳಲಾಗಿದೆ. ಆದರೆ ಇದನ್ನು ನಿರಾಕರಿಸಿದ ಯುವತಿಯನ್ನ, ತನ್ನ ಸ್ನೇಹಿತೆ ಅಂತಾನೂ ನೋಡದೆ ಬೇರೆ ಸ್ನೇಹಿತರೊಂದಿಗೆ ಸೇರಿ ಅತ್ಯಾಚಾರ ಮಾಡಿದ್ದಾನೆಂದು ಯುವತಿ ಆರೋಪಿಸಿದ್ದಾಳೆ ಎನ್ನಲಾಗಿದೆ.

ಇನ್ನು ಈ ವಿಷಯದಿಂದ ಬೇಸತ್ತ ಯುವತಿ ಸಿಸಿಬಿಗೆ ದೂರು ನೀಡಿದ್ದಾಳೆ. ತಕ್ಷಣ ಎಚ್ಚೆತ್ತ ಪೊಲೀಸರು ಹರೀಶ್ ಮತ್ತು ಹೇಮಂತ್ ಎಂಬ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಸದ್ಯ ಆರೋಪಿಗಳನ್ನು ತನಿಖೆ ನಡೆಸುತ್ತಿದ್ದು, ಈ ವೇಳೆ ಮೊಬೈಲ್‌ನಲ್ಲಿ ಹತ್ತಾರು ಯುವತಿಯರ ಬೆತ್ತಲೆ ಫೋಟೊ ಪತ್ತೆಯಾಗಿದೆ ಎನ್ನಲಾಗಿದೆ. ಅಲ್ಲದೇ ಹುಡುಗಿಯರು ಏಕಾಂತದಲ್ಲಿದ್ದ ವಿಡಿಯೋ ಮಾಡಿಟ್ಟುಕೊಂಡು, ಅದನ್ನೇ ತೋರಿಸಿ ಬ್ಲ್ಯಾಕ್‌ಮೇಲ್ ಮಾಡ್ತಿರೋದಾಗಿಯು ತಿಳಿದುಬಂದಿದೆ.



ಗಂಡನಿಂದ ಹತಳಾದ ರೇಣುಕಾ

**ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ರಾಘವೇಂದ್ರ ಬಡಾವಣೆಯಲ್ಲಿ ಹೆಂಡತಿ ಮೇಲೆ ಸಂಶಯಗೊಂಡು ಗಂಡನೇ ತನ್ನ ಹೆಂಡ್ತೀನ ಕಂದ್ಲಿಯಿಂದ ಕಡಿದು ಕೊಂದ ದುರ್ಘಟನೆ ನಡೆದಿದೆ. ಇತ್ತೀಚೆಗಂತೂ ಶಿವಮೊಗ್ಗ, ಭದ್ರಾವತಿ, ಶಿಕಾರಿಪುರಗಳಲ್ಲಿ ಕೊಲೆ ಪ್ರಕರಣಗಳು ಎರ‍್ರಾಬಿರ‍್ರಿ ಆಗುತ್ತಿವೆ.**

# ಹೆಂಡತಿ ಮೇಲೆ ಸಂಶಯಗೊಂಡು ಕಂದ್ಲಿಯಿಂದ ಕಡಿದು ಕೊಂದ ಗಂಡ!

**ಶಿವಮೊಗ್ಗ**

✍ ಸಂತೋಷಕುಮಾರ

ಹಾಗೇ ತೀರಾ ಇತ್ತೀಚೆಗೆ ಶಿಕಾರಿಪುರದಲ್ಲೂ ಹೀಗೇ ಆಗಿದೆ. ಅವನ ಹೆಸರು ನಾಗರಾಜ ಬಸಪ್ಪ(49). ಈತ ವ್ಯವಸಾಯ ಮಾಡಿಕೊಂಡಿದ್ದು ಹಾಗೇ ಅದರ ಜೊತೇಲೇ ಪ್ಯಾಸಂಜರ್ ಆಟೋ ಓಡಿಸಿಕೊಂಡಿದ್ದ. ಇವನ ಹೆಂಡತಿ



ಎಸ್ಪಿ ಮಿಥುನ್‌ಕುಮಾರ್



ಹೆಚ್ಚುವರಿ ಎಸ್ಪಿ ಅನಿಲ್‌ಕುಮಾರ್



ಡಿವೈಎಸ್ಪಿ ಕೇಶವ

ರೇಣುಕಾ ಶಿಕಾರಿಪುರದ ಬಿ.ಸಿ.ಎಂ. ಹಾಸ್ಟೆಲ್‌ನಲ್ಲಿ ಅಡುಗೆ ಕೆಲಸ ಮಾಡಿಕೊಂಡಿದ್ದು, ಇತ್ತೀಚೆಗೆ ರೇಣುಕಾಗೆ ಶಿರಾಳಕೊಪ್ಪಕ್ಕೆ ವರ್ಗವಾಗಿದ್ದು ರೇಣುಕಾ ಪ್ರತಿನಿತ್ಯ ಬೆಳಿಗ್ಗೆ 9 ಘಂಟೆಗೆ ಹೋಗಿ ಶಿರಾಳಕೊಪ್ಪದ ಹಾಸ್ಟೆಲ್‌ನಲ್ಲಿ ಅಡುಗೆ ಕೆಲಸ ಮುಗಿಸಿ ಸಾಯಂಕಾಲ 6 ಘಂಟೆ ಹೊತ್ತಿಗೆ ಶಿಕಾರಿಪುರ ರಾಘವೇಂದ್ರ ಬಡಾವಣೆಯಲ್ಲಿರೋ ತನ್ನ ಮನೆಗೆ ಬರುತ್ತಿದ್ದಳು. ಇವರಿಗೆ ಮೂವರು ಮಕ್ಕಳು ಅರುಣ, ಅಕ್ಷತಾ, ಲಾವಣ್ಯ. ಹೀಗೆ ಸಂಸಾರವೇನೋ ಚೆನ್ನಾಗೇ ನಡೆದಿತ್ತು.

ಆದರೆ ನಾಗರಾಜನ ಹೆಂಡತಿ ಶಿಕಾರಿಪುರ ಬಿಟ್ಟು ಶಿರಾಳಕೊಪ್ಪಕ್ಕೆ ಹೋಗುತ್ತಿದ್ದಂತೆ ಸಾಯಂಕಾಲ ಶಿರಾಳಕೊಪ್ಪದಿಂದ ಬರೋಕೆ ಬಸ್ಸಿನ ಸಮಸ್ಯೆ ಆಗುತ್ತಿದ್ದರಿಂದ ದಿನಕಳೆದಂತೆ ನಾಗರಾಜನಿಗೆ ತನ್ನ ಹೆಂಡ್ತಿ ಇಷ್ಟೆಲ್ಲಾ ಲೇಟಾಗಿ ಮನೆಗೆ ಬರ‍್ತಿದ್ದಾಳೆ ಅವಳಿಗೇನಾದ್ರೂ ಶಿರಾಳಕೊಪ್ಪ ಅಥವಾ ಶಿಕಾರಿಪುರದಲ್ಲಿ ಯಾವನಾದ್ರೂ ಗಂಟುಬಿದ್ದಿರಬಹುದು ಅನ್ನೋ ಹುಳ ತಲೆ ಸೇರಿಬಿಟ್ಟಿದೆ. ಆ ಹುಳ ದಿನಗಳೆದಂತೆ ನಾಗರಾಜನ ತಲೆಯನ್ನ ಸರಿಯಾಗೇ ಕೊರೀತಾ ಇದೆ. ಅನುಮಾನ ಅನ್ನೋ ಹುಚ್ಚು ಮನೆ ಅನುಮಾನದ ಹುತ್ತವಾಗಿ ಘೋರವಾಗಿ ಬೆಳೆದು ನಿಂತು ನಾಗರಾಜ ದಿನಾಲೂ ತನ್ನ ಹೆಂಡತಿ ರೇಣುಕಾಳೊಂದಿಗೆ ಜಗಳ ಮಾಡೋ ಹಾಗೆ ಮಾಡ್ತಿದೆ. ಪ್ರತಿನಿತ್ಯ ಗಂಡಹೆಂಡ್ತಿ ಇಬ್ಬರಲ್ಲೂ ಜಗಳಾನೇ.


ಮಕ್ಕಳಿಗಂತೂ ಅಪ್ಪ ಅಮ್ಮನ ಈ ಜಗಳ ತುಂಬಾನೇ ಭಯ ಹುಟ್ಟಿಸಿದೆ. ಅವರಿವರು ಬಂದು ಸಮಾಧಾನ, ಸಂಧಾನ ಮಾಡಿದ್ರೂ ಏನೂ ಪ್ರಯೋಜನವಾಗಿಲ್ಲ. ಆಗ ನಾಗರಾಜ ತನ್ನ ಹೆಂಡ್ತಿ ರೇಣುಕಾಗೆ ಇವತ್ತಲ್ಲಾ ನಾಳೆ ನಿನಗೂ ನಿನ್ನ ಇಟ್ಕಂಡವನ್ಗೂ ಸರಿಯಾದ ಗತಿಕಾಣಿಸ್ತೇನೆ, ಕಡದೇ ಬಿಟ್ತೇನೇಂತಾ ಛಾಲೆಂಜ್ ಬೇರೆ ಮಾಡಿದ್ದಾನೆ. ಆಗಲೇ ರೇಣುಕಾ ಸ್ವಲ್ಪ ಎಚ್ಚರಿಕೆಯಿಂದಿದ್ರಾಗ್ತಿತ್ತೇನೋ ಆದರೆ ಈ ದುಷ್ಟ ವಿಚಾರದ ಅರಿವೇ ಇಲ್ಲದ ರೇಣುಕಾ ನಿಶ್ಚಿಂತೆಯಿಂದ ಇದ್ದಳು.

ಅಂದು 10/12/2024 ಮಂಗಳವಾರ ಸಂಜೆ 7.30ರ ಹೊತ್ತಿಗೆ ಅರುಣ ಪೇಟೆಗೆ ಹೋದವನು ರಾತ್ರೆ 9ರ ಹೊತ್ತಿಗೆ ಮನೆಗೆ ಬಂದು ತನ್ನ ತಾಯಿ ರೇಣುಕಾ ಸಹೋದರಿಯರಾದ ಅಕ್ಷತಾ, ಲಾವಣ್ಯ ಊಟ ಮಾಡಿ ಇನ್ನೇನು ಮಲಗ್ಬೇಕೂಂತಿದ್ದಾಗಲೇ ತಂದೆ ನಾಗರಾಜ ಆಟೋ ತೆಗೆದುಕೊಂಡು ಮನೆಗೆ ಬಂದಿದ್ದಾನೆ. ಆಗ ಅಂದಾಜು ರಾತ್ರಿ 11 ಘಂಟೆಯಾಗಿದೆ. ನಾಗರಾಜನದ್ದೂ ಊಟ ಆದ್ಮೇಲೆ , ರೇಣುಕಾ, ಅಕ್ಷತಾ, ಅರುಣ ಮನೆಯ ಹಾಲ್‌ನಲ್ಲೇ ಚಾಪೆ ಹಾಕಿ ಮಲಗಿದ್ದಾರೆ. ಆದರೆ ನಾಗರಾಜ ತನ್ನ ಮಗಳು ಲಾವಣ್ಯನ ಕರೆದುಕೊಂಡು ಮನೆಯ ಪ್ರವೇಶದಲ್ಲಿರೋ ಮೊದಲ ಕೋಣೆಯಲ್ಲಿ ಮಲಗಿದ್ದಾರೆ. ಎಲ್ರೂ ಬೇರೆ ಬೇರೆ ಯೋಚನೆ ಮಾಡುತ್ತಾ ಮಲಗಿದರೆ ನಾಗರಾಜನ ಯೋಚನನೇ ಬೇರೆಯಾಗಿತ್ತು. ನಾಗರಾಜ ಒಬ್ಬನಿಗೆ ಬಿಟ್ಟು ಉಳಿದವರೆಲ್ಲರಿಗೂ ಗಾಢವಾದ ನಿದ್ದೆ ಬಂದಿದೆ.

ರಾತ್ರಿ ಕಳೆದು ಹಗಲು ಮೂಡುತ್ತಾ ಇದೆ. 11/12/2024 ಬೆಳಗಿನ ಜಾವದ ಹೊತ್ತಿಗೆ ಮಲಗಿದ್ದ ಅರುಣನ ಕಾಲನ್ನ ಯಾರೋ ತುಳಿದಂತಾಗಿ ಅರುಣ ನಿಗೆ ಎಚ್ಚರವಾಗಿ ನಿದ್ದೆಗಣ್ಣಲ್ಲೇ ಕಣ್ಣು ಹೊಸಕಿಕೊಂಡು ನೋಡಿದ್ದಾನೆ. ತನ್ನ ತಂದೆ ನಾಗರಾಜ ಕೈಯಲ್ಲಿ ಕಂದ್ಲಿ ಹಿಡಿದುಕೊಂಡು ತನ್ನ ತಾಯಿ ಕಡೇನೇ ನೋಡುತ್ತಿದ್ದಾನೆ. ಇನ್ನೇನು ಅರುಣ ಏಳ್ಬೇಕು ಅನ್ನುವಷ್ಟರಲ್ಲಿ ನಾಗರಾಜ ತನ್ನ ಕೈನಲ್ಲಿರೋ ಕಂದ್ಲೀನ ತನ್ನ ಪತ್ನಿ ರೇಣುಕಾಳ ಕಡೆ ಬೀಸಿ ಹೊಡೆದಿದ್ದಾನೆ. ಆದರೆ ರೇಣುಕಾ ಬೆಡ್‌ಸೀಟ್‌ನ ಮುಖಕ್ಕೆ ಸರಿಯಾಗಿಯೇ ಹೊದ್ದುಕೊಂಡು ಮಲಗಿದ್ದರಿಂದ ಆ ಏಟು ರೇಣುಕಾಗೆ ತಾಗಲೇ ಇಲ್ಲಾ. ತಕ್ಷಣ ಎಚ್ಚರಗೊಂಡ ರೇಣುಕಾ ಜೋರಾಗಿ ಕಿರುಚಿಕೊಂಡಿದ್ದಾಳೆ. ಅಷ್ಟೇ ಅಲ್ಲ ತಪ್ಪಿಸಿಕೊಳ್ಳುವ ಸಲುವಾಗಿ ಬೇಗ ಎದ್ದಿದ್ದಾಳೆ. ಆಗ ನಾಗರಾಜ ಇವತ್ತು ನಿನ್ನ ಬಿಡಲ್ಲಾ ಕಡದೇಬಿಡ್ತೀನಿ ಅಂತಾ ಆವಾಜ್ ಹಾಕಿದ್ದಾನೆ, ಅಷ್ಟರಲ್ಲಿ ಮಲಗಿದ್ದ ಲಾವಣ್ಯ , ಅಕ್ಷತಾ ಇಬ್ಬರಿಗೂ ಎಚ್ಚರವಾಗಿ ಗಟ್ಟಿಯಾಗಿ ಕಿರುಚಿಕೊಂಡಿದ್ದಾರೆ. ಮತ್ತೆ ನಾಗರಾಜ ಜೋರಾಗಿ ರೇಣುಕಾಗೆ ಇವತ್ತು ಮಾತ್ರ ನಿನ್ನ ಉಳಿಸೋಲ್ಲಾ ಬೇರೆಯವರೊಂದಿಗೆ ಸಂಬಂಧ ಇಟ್ಕೊಳ್ತೀಯಾಂತಾ ಮತ್ತದೇ ಕಂದ್ಲಿಯಿಂದ ಹೊಡೆದಿದ್ದಾನೆ. ತಕ್ಷಣ ತಪ್ಪಿಸಲು ಹೋದ ಅರುಣ ನೆತ್ತಿಗೆ ಆ ಕತ್ತಿ ತಾಗಿ ಗಾಯವಾಗಿ ಕೆಳಕ್ಕೆ ಬಿದ್ದಿದ್ದಾನೆ. ತನ್ನ ಮಗನಿಗೆ ಕಂದ್ಲಿ ತಾಗಿ ಗಾಯವಾಗಿದ್ದನ್ನ ನೋಡಿ ರೇಣುಕಾ ಮನೆಯಿಂದ ಹೊರ ಓಡಿದ್ದಾಳೆ, ಆದ್ರೂ ಬೆನ್ನು ಬಿಡದ ಬೇತಾಳದಂತೆ ನಾಗರಾಜ ಬುಸುಗುಡುತ್ತಾ ನಿನ್ನ ಈವತ್ತು ಬಿಡಲ್ಲ ಕಣೇ ನಂಗೆ ಮೋಸ ಮಾಡ್ತೀಯಾ ನಿನ್ ಕಡ್ದೇಬಿಡ್ತೀನಿ ಅಂತಾ ಬೆನ್ನಟ್ಟಿದ್ದಾನೆ. ಅನಪ ಹಿಂದೆ ಅರುಣ ಕೂಡಾ ತಪ್ಪಿಸೋಕೆ ಓಡಿ ಹೋಗಿದ್ದಾನೆ. ರೇಣುಕಾ ಓಡುತ್ತಿದ್ದಂತೆ ಆಯತಪ್ಪಿ ರಾಘವೇಂದ್ರ ಬಡಾವಣೆಯ ಗೋಣಿ ಶಿವಣ್ಣ ಮನೆಯ ಮುಂಭಾಗದ ರಸ್ತೆಯ ಮೇಲೆ ಬಿದ್ದಿದ್ದಾರೆ, ತಕ್ಷಣ ತೀರಾ ರೊಚ್ಚಿನಲ್ಲಿದ್ದ ನಾಗರಾಜ ಕಂದ್ಲಿಯಿಂದಾ ರೇಣುಕಾಳ ಮುಖದ ಮೇಲೆ ಸರಿಯಾಗೇ ಬೀಸಿ ಹೊಡೆದಿದ್ದಾನೆ. ಆ ಕೂಡಲೇ ಮಗ ಅರುಣ ಜೋರಾಗಿ ಕೂಗಿಕೊಂಡಿದ್ದಾನೆ. ಈ ಬೆಳ್ಳಂ ಬೆಳಿಗ್ಗೆ ಇದೆಂಥಾ ಕಿರುಚಾಟಾ ಅಂತ ಆ ಏರಿಯಾದ ಜನರೆಲ್ಲಾ ತಮ್ಮನೆಯ ಬಾಗಿಲುಗಳನ್ನು ತೆಕ್ಕೊಂಡು ಧಾವಿಸಿ ಬಂದಿದ್ದನ್ನ ನೋಡಿ ನಾಗರಾಜ ಕಂದ್ಲಿಯನ್ನ ಅಲ್ಲೇ ಬಿಸಾಡಿ ಓಡಿಹೋಗಿದ್ದಾನೆ. ತಕ್ಷಣ ಅರುಣ ಮತ್ತವನ ತಂಗಿಯರು, ಸ್ಥಳೀಯರು ರೇಣುಕಾ ಬಿದ್ದಲ್ಲಿ ಹೋಗಿ ನೋಡಿದಾಗ ರೇಣುಕಾ ರಕ್ತದ ಮಡುವಿನಲ್ಲೇ ಕೊನೆಯುಸಿರೆಳೆದಿದ್ದಾರೆ, ಅರುಣನ ತಲೆಯಿಂದ ರಕ್ತ ಸೋರುತ್ತಿದ್ದದ್ದನ್ನ ಕಂಡ ಆ ಏರಿಯಾದ ಬಾಳಿಕಾಯಿ ಸಿದ್ದು ಅರುಣನನ್ನ ಶಿಕಾರಿಪುರ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ.



ಗಾಯಗೊಂಡ ಅರುಣ



ಆರೋಪಿ ನಾಗರಾಜ

ಸುದ್ದಿ ತಿಳಿದ ತಕ್ಷಣ ಶಿವಮೊಗ್ಗ ಎಸ್ಪಿ ಮಿಥುನ ಕುಮಾರ, ಹೆಚ್ಚುವರಿ ಎಸ್ಪಿ ಅನಿಲ್‌ಕುಮಾರ್ ಭೂಮರಡ್ಡಿ ಶಿಕಾರಿಪುರ ಡಿವೈಎಸ್ಪಿ ಕೇಶವ ಕೆ.ಈ., ಶಿಕಾರಿಪುರ ಸಿಪಿಐ ರುದ್ರಗೌಡ ಆರ್. ಪಾಟೀಲ, ಆಗಿನ ಪಿಎಸ್‌ಐ ಎಸ್.ಕೆ. ಪೊಲೀಸ್ ಗೌಡರ ಹಾಗೂ ಸಿಬ್ಬಂದಿಗಳು ಸ್ಥಳಕ್ಕೆ ಧಾವಿಸಿ ಮುಂದಿನ ಕ್ರಮ ಕೈಗೊಂಡು ಹಿರಿಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ತಪಿಸಿಕೊಂಡಿದ್ದ ಆರೋಪಿ ನಾಗರಾಜನನ್ನು ಬಂಧಿಸುವಷ್ಟರಲ್ಲಿ ಆರೋಪಿ ನಾಗರಾಜ ಸ್ವತಃ ಶಿಕಾರಿಪುರ ಶಹರ ಪೊಲೀಸ್ ಠಾಣೆಗೆ ಬಂದು ಶರಣಾಗಿದ್ದಾನೆ. ಈಗ ಸದ್ಯ ಸಿಪಿಐ ರುದ್ರಗೌಡ ಪಾಟೀಲ ಅನುಪಸ್ಥಿತಿಯಲ್ಲಿ ಶಿಕಾರಿಪುರ ಟೌನ್ ಸಿಪಿಐ ರುದ್ರೇಶ ಮುಂದಿನ ತನಿಖೆ ನಡಿಸಿದ್ದಾರೆ.



ಸಿಪಿಐ ರುದ್ರಗೌಡ ಪಾಟೀಲ್



ಸಿಪಿಐ ರುದ್ರೇಶ್



ಆಗಿನ ಪಿಎಸ್‌ಐ ಪೊಲೀಸ್ ಗೌಡರ್

ನಾಗರಾಜ ತನ್ನ ಹೆಂಡಿ ರೇಣುಕಾಳನ್ನ ನಿಜವಾಗಿ ಪ್ರೀತಿಸಿ ಅವಳ ಮೇಲಿನ ಅತಿಯಾದ ವ್ಯಾಮೋಹದಿಂದ, ರೇಣುಕಾ ಬೆಳಿಗ್ಗೆ ಕೆಲಸಕ್ಕೆ ಹೋದ್ರೆ ಸಾಯಂಕಾಲಾನೇ ಮನೆಗೆ ಬರೋದು. ತನ್ನ ಜೊತೆ ಸಮಯ ಕಳೆಯೋಲ್ಲಾ, ತನ್ನ ಮಕ್ಕಳ ಜೊತೆ ಸರಿಯಾಗಿ ಕಾಲ ಕಳೆಯಲ್ಲಾ, ಅನ್ನೋದನ್ನ ತಲೆಯಲ್ಲಿ ಲಿ ತುಂಬಿಕೊಂಡು ತನ್ನ ಹೆಂಡ್ತಿ ಕೆಲಸಕ್ಕೆ ಹೋದಲ್ಲೇ ಟೈಂ ಹಾಳು ಮಾಡುತ್ತಿದ್ದಾಳೆ. ಅಲ್ಲೇ ಯಾರನ್ನೋ ನೋಡಿಕೊಂಡಿದ್ದಾಳೆ ಅಂತ ಅನುಮಾನ ಮಾಡಿ ಕೊಂಡನೋ... ಅಥವಾ ನಿಜವಾಗಲೂ ರೇಣುಕಾಗೆ ಯಾರ ಜೊತೆನಾದ್ರೂ ಅಕ್ರಮ ಸಂಬಂಧ ಇತ್ತಾ... ಯಾಕೇಂದ್ರೆ, ಹಿಂದಿನಿಂದಲೂ ಬಂದ ಮಾತಿನ ಪ್ರಕಾರ ಬೆಂಕಿ ಇಲ್ಲದೇ ಹೊಗೆ ಆಡಲ್ಲಾ ಅನ್ನೋ ಮಾತಿದೆ. ಇನ್ನು ಯಾವುದಕ್ಕೂ ಶಿಕಾರಿಪುರ ಪೊಲೀಸರ ತನಿಖೆಯಿಂದಲೇ ಈ ಪ್ರಕರಣದ ನಿಜಾಂಶ ಬಯಲಿಗೆ ಬರಬೇಕಾಗಿದೆ. ☯



ಎಎಸ್‌ಐಗಳಾದ ಮಲ್ಲೇಶಪ್ಪ, ವಿಶ್ವನಾಥಪ್ಪ, ಸಿಬ್ಬಂದಿಗಳಾದ ರಾಘವೇಂದ್ರ, ಶಿವಾನಂದ ಹಾಗೂ ಅಶೋಕ

# ಪ್ರೇಯಸಿಯ ಕೊಲೆಗೆ ಸ್ಕೆಚ್; ಪಾಗಲ್ ಪ್ರೇಮಿ ಅಂದರ್!

**ಬಾಗಲಕೋಟೆ**

✍ ಮಂಜುನಾಥ ಈಶ್ವರ ಕರೋಳಿ

ಆರಂಭದಲ್ಲಿ ಇಬ್ಬರೂ ಪ್ರೇಮಿಗಳಾಗಿ ಮುಂದೆ ಮದುವೆಯಾಗಿ ಸಂಸಾರ ಮಾಡುವ ಕನಸು ಕಂಡಿದ್ದರು ಆದರೆ ಹುಡಗಿಯ ಮನೆಯವರು ತಮ್ಮ ಮಗಳಿಗೆ ಬೇರೆ ಕಡೆ ವರ ನೋಡಿ ಮದುವೆ ಮಾಡಲಾಗಿತ್ತು. ಸುಮಾರು ವರ್ಷಗಳವರೆಗೆ ಗಂಡನೊಂದಿಗೆ ಸಂಸಾರ ಮಾಡಿದ ಆ ಹುಡಗಿಯ ಬಾಳಲ್ಲಿ ದುರ್ಘಟನೆಯೊಂದು ನಡೆದು ಹೋಗಿತ್ತು. ಅದೇನೆಂದರೆ ಆ ಯುವತಿಯ ಗಂಡ ಸೈನಿಕನಾಗಿದ್ದು ಕರ್ತವ್ಯದಲ್ಲಿರುವಾಗಲೇ ಮರಣ ಹೊಂದಿದ. ಇದಾದ ನಂತರ ಆ ಹುಡುಗಿ ಬಾಳಲ್ಲಿ ಎಂಟ್ರಿ ಕೊಟ್ಟವನೇ ತನ್ನ ಹಳೆಯ ಪ್ರೇಮಿ. ಆಕೆಯ ಮನೆಗೆ ಬರುವುದು ಹೋಗುವವು ಅಂತಾ ಮಾಡುತ್ತಿದ್ದ ಈ ವಿಷಯ ಅಕ್ಕಪಕ್ಕದವರಿಗೆ ತಿಳಿದು ಬುದ್ದಿ ಹೇಳಿದರೆ ಆಗ ಆ ಮಹಿಳೆ ತನ್ನ ಪ್ರೇಮಿಗೆ ನನ್ನ ಮನೆಗೆ ಬರುವುದು ಹೋಗುವುದು ಮಾಡಬೇಡ. ಈ ವಿಷಯ ಅಕ್ಕಪಕ್ಕದ ಜನರಿಗೆ ತಿಳಿದಿದ್ದು ಮುಂದೆ ಸಮಾಜದಲ್ಲಿ ನನ್ನಹೆಸರು ಹಾಳಾಗುತ್ತದೆ. ಇನ್ನು ಮುಂದೆ ಮನೆಗೆ ಬರಬೇಡ ಅಂತ ತನ್ನ ಪ್ರೇಮಿಗೆ ಹೇಳಿದಳು. ಆಗ ಆ ಪ್ರೇಮಿ ಮೊದಲು ನಾವಿಬ್ಬರು ಪ್ರೀತಿಸುತ್ತಿದ್ದು ಈಗ ಸಮಾಜಕ್ಕೆ ಹೆದರಿ ನನ್ನನ್ನು ದೂರ ಮಾಡುವುದು ಎಷ್ಟು ಸರಿ ಎಂದನು. ಆಗ ಆ ಮಹಿಳೆ ಅದೇನೇ ಇರಲಿ ಇನ್ನು ಮುಂದೆ ಬರಬೇಡ ಅಂತಾ ಖಡಾಖಂಡಿತವಾಗಿ ಹೇಳಿದ್ದಾಳೆ. ಇದರಿಂದ ಕೋಪಗೊಂಡ ಆತ ತನ್ನ ಪ್ರೇಯಸಿಯನ್ನು ಮುಗಿಸುವ ಸಂಚು ರೂಪಿಸಿ ಹೇರ್ ಡ್ರಾಯರ್ ಒಂದನ್ನು ಖರೀದಿಸಿ ಅದರಲ್ಲಿ ಸ್ಪೋಟಕ ವಸ್ತುವನ್ನು ಅಳವಡಿಸಿ ಆಕೆಗೆ ಕೊರಿಯರ್ ಮುಖಾಂತರ ಪಾರ್ಸೆಲ್ ಕಳಿಸಿದ್ದಾನೆ. ಆಕೆ ಅದನ್ನು ಪಡೆದುಕೊಂಡು ತನ್ನ ಎರಡು ಕೈಗಳನ್ನು ಕಳೆದು ಕೊಂಡು ಪ್ರಾಣಾಪಾಯದಿಂದ ಪಾರಾದ ಘಟನೆ ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ ಇಳಕಲ್ ನಗರದಲ್ಲಿ ಜರುಗಿದರ ಬಗ್ಗೆ ಇಳಕಲ್ ಪೊಲೀಸ್ ಠಾಣೆಯಿಂದ ವರದಿಯಾಗಿದೆ


ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಸವರಾಜೇಶ್ವರಿ


ಪತಿ ಪಾಪಣ್ಣ ಹಾಗೂ ಮಗುವಿನೊಂದಿಗೆ ಬಸವರಾಜೇಶ್ವರಿ

ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ ಇಳಕಲ ನಗರದ ನಿವಾಸಿ ಬಸವರಾಜೇಶ್ವರಿ (35) ಗಂಡ ಪಾಪಣ್ಣ ಯರನಾಳ (38) ಎಂಬ ದಂಪತಿಗಳಿಬ್ಬರು. ಇವರಿಗೆ ಎರಡು ಹೆಣ್ಣು ಮಕ್ಕಳು. ವೃತ್ತಿಯಲ್ಲಿ ಪಾಪ್ಪಣ್ಣ ದೇಶ ಕಾಯುವ ಕೆಲಸದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಂದರೆ ಸೈನಿಕ. ಹೆಂಡತಿ ಬಸವರಾಜೇಶ್ವರಿ ಮನೆಗೆಲಸ ಮಾಡಿಕೊಂಡು ಮಕ್ಕಳ ಪೊಷಣೆ ಮಾಡುತ್ತ ಸುಖವಾಗಿ ಸಂಸಾರ ಸಾಗಿಸಿದ್ದಳು. ಗಂಡ ಪಾಪಣ್ಣ ತನ್ನ ರಜೆಯ ದಿನಗಳಲ್ಲಿ ಊರಿಗೆ ಬಂದು ಹೆಂಡತಿ, ಮಕ್ಕಳೊಂದಿಗೆ ಬೆರೆತು ಅವರ ಸುಖವಾಗಿ ಸಂಸಾರ ನಡೆಸಿದರು. ತನ್ನ ಸಂಸಾರ ಅಂತಾ ಸುಖಿ ಜೀವನ ನಡೆಸುತ್ತಿದ್ದಳು. ಹೀಗಿರುವಾಗಲೇ ಇವರ ಕುಟುಂಬಸಲ್ಲಿ ಒಂದು ದುರ್ಘಟನೆ ನಡದೇ ಹೋಗಿತ್ತು.


ಬಸವರಾಜೇಶ್ವರಿಯ ಕೈ ತುಂಡಾಗಿರುವುದು ಹಾಗೂ ರಕ್ತ ಚೆಲ್ಲಾಪಿಲ್ಲಿಯಾಗಿರುವುದು

**ಪಾಪಣ್ಣ ಮರಣ ಹೊಂದಿದ!**

ಇವರ ಸಂಸಾರ ಚೆನ್ನಾಗಿಯೇ ಸಾಗಿರುವಾಗಲೇ ಈ ಕುಟುಂಬದಲ್ಲಿ ಒಂದು ದೊಡ್ಡಾಘಾತವೇ ನಡೆದು ಹೋಗಿತ್ತು. ಪಾಪಣ್ಣ ತನ್ನ ಸೈನಿಕ ವೃತ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗಲೇ ಸುಮಾರು 7 ವರ್ಷಗಳ ಹಿಂದೆ ಅಂದರೆ 2017ರಲ್ಲಿ ಅಕಾಲಿಕ ಮರಣ ಹೊಂದಿದ. ಇದರಿಂದ ಹೆಂಡತಿ ಬಸವರಾಜೇಶ್ವರಿ ಕುಗ್ಗಿ ಹೋದಳು.ಗಂಡ ತೀರಿಕೊಂಡ ಬಳಿಕ ಮುಂದೇನು ಗತಿ ಎಂಬ ಚಿಂತೆಯಲ್ಲಿ ಕೊರಗುತ್ತಿದ್ದಳು. ಇಬ್ಬರು ಮುದ್ದಾದ ಮಕ್ಕಳನ್ನು ಕಟ್ಟಿಕೊಂಡು ಜೀವನ ನಡೆಸಬೇಕಾದ ಪರಿಸ್ಥಿತಿ ಎದುರಾಯಿತು. ಹೀಗೆ ಸುಮಾರು ವರ್ಷಗಳವರೆಗೆ ಜೀವನ ನಡೆಸುತ್ತ ಬಂದಳು. ಅಲ್ಲಿ ಇಲ್ಲಿ ಕೆಲಸ ಮಾಡುತ್ತ ಮಕ್ಕಳ ಮುಂದಿನ ವಿದ್ಯಾಭ್ಯಾಸದ ಕಡೆ ಗಮನಹರಿಸಿ ಜೀವನ ಸಾಗಿಸಿದ್ದಳು.

**ಹಳೆಯ ಪ್ರೇಮಿ ಆಗಮನ !**

ಬಸವರಾಜೇಶ್ವರಿ ತನ್ನ ಗಂಡ ಪಾಪಣ್ಣ ಮರಣ ಹೊಂದಿದ ನಂತರ ಅದೇ ಯೋಚನೆಯಲ್ಲಿ ಜೀವನ ನಡೆಸಿರುವಾಗಲೇ ಬಸವರಾಜೇಶ್ವರಿ ಜೀವನದಲ್ಲಿ ಎಂಟ್ರಿಯಾದಾವನೇ ಪ್ರೇಮಿ ಸಿದ್ದಪ್ಪ ಎಂಬಾತಯು. ಬಸವರಾಜೇಶ್ವರಿಯ ಪ್ರೇಮಿ, ಬಸವರಾಜೇಶ್ವರಿ ಮೊದಲು ಖುಷಿಯಾಗಿ ಮಾತಾಡುತ್ತ ಇಬ್ಬರು ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತ ಬಂದರು. ದಿನೇ ದಿನೇ ಸಿದ್ದಪ್ಪ ತನ್ನ ಪ್ರೇಯಸಿಗೆ ಕರೆ ಮಾಡಿ ಮಾತನಾಡುವುದು, ಮನೆಗೆ ಬರುವುದು ಸರ್ವೆಸಾಮಾನ್ಯವಾಗಿತ್ತು. ಇದು ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತ ಇತ್ತು. ಈ ವಿಷಯ ಅಕ್ಕಪಕ್ಕದ ಜನರಿಗೆ ಹಾಗೂ ಬಸವರಾಜೇಶ್ವರಿ ಗೆಳತಿ ಶಶಿಕಲಾಗೆ ಗೊತ್ತಾಗಿದ್ದು ಆಕೆಯನ್ನು ಕರೆಸಿ ಬಸವರಾಜೇಶ್ವರಿಗೆ ನೀನು ನಿನ್ನ ಗಂಡ ತೀರಿಕೊಂಡ ಬಳಿಕ ಮಕ್ಕಳ ಭವಿಷ್ಯದ ಬಗ್ಗೆ ಯೋಚನೆ ಮಾಡು, ಮುಂದಿನ ಜೀವನದ ದಾರಿಯಲ್ಲಿ ಸಾಗು, ಅದ್ಯಾವನೋ ಬರುವುದು ಹೋಗುವುದು, ನಿನ್ನ ಮನೆಗೆ ಇದರಿಂದ ನಿನಗೂ ಕಳಂಕ, ನಿನ್ನ ಮಕ್ಕಳಿಗೂ ಕೆಟ್ಟ ಹೆಸರು. ಮುಂದಿನ ದಾರಿಯ ಬಗ್ಗೆ ಯೋಚನೆ ಮಾಡು ಅಂತ ಬುದ್ದಿಹೇಳಿದರು. ಇದರಿಂದ ಬಲವಾಗಿ ಯೋಚನೆ ಮಾಡಿದ ಬಸವರಾಜೇಶ್ವರಿ ಒಂದು ನಿರ್ಧಾರಕ್ಕೆ ಬಂದಳು ಅದೇನಂತಿರಾ ಮುಂದೆ ಓದಿ...

**ತನ್ನ ಪ್ರೇಮಿಗೆ ಬರಬೇಡ ಅಂತ ಹೇಳಿದಳು!**

ಬಸವರಾಜೇಶ್ವರಿ ಪ್ರೇಮಿ ಸಿದ್ದಪ್ಪ ಆಗಾಗ ಬರುವುದು, ಹೋಗುವುದು ಮಾಡುವುದು ಮಾಡಿದಾಗ ಆತನಿಗೆ ಇನ್ನು ಮುಂದೆ ನೀನು ಬರಬೇಡ, ನನ್ನ ಮಕ್ಕಳ ಭವಿಷ್ಯ ಬಗ್ಗೆ ತುಂಬಾ ಯೋಚನೆ ಇದೆ. ಇದರಿಂದ ನನ್ನ ಹೆಸರು ತುಂಬಾ ಹಾಳಾಗಿದ್ದೂ ಇನ್ನು ಮುಂದೆ ನೀನು ನನ್ನ ಸಹವಾಸ ಬಿಡು, ನನ್ನಿಂದ ದೂರ ಇದ್ದು ಬಿಡು. ಇದರಿಂದ ನಿನಗೂ ಒಳ್ಳೆಯದು ಅಂತಾ ಅಂದಾಗ ಆಕೆಯ ಪ್ರೇಮಿ ಸಿದ್ದಪ್ಪ ಮೊದಲು ನಾವಿಬ್ಬರು ಪ್ರೇಮಿಗಳು, ನಿಮ್ಮ ಕುಟುಂಬದವರು ನಿನ್ನನ್ನು ಬೇರೆ ಹುಡುಗನೊಂದಿಗೆ ಕೊಟ್ಟು ಮದುವೆ ಮಾಡಿದರು. ಆಗ ನಾನು ದೂರಾನೇ ಇದ್ದೆ ನಿನ್ನ ಗಂಡ ತೀರಿಕೊಂಡ ಬಳಿಕ ನಾನು ನಿನ್ನ ನನ್ನನ್ನ ದೂರ ಮಾಡುವುದು ಎಷ್ಟು ಸರಿ ನೀನೇ ಹೇಳು ಅಂದ. ಆಗ ಬಸವರಾಜೇಶ್ವರಿ ಅದು ಏನೇ ಆಗಲಿ, ನೀನು ಇನ್ನು ಮುಂದೆ ಬರಬೇಡ ಅಂತ ಖಡಾಖಂಡಿತವಾಗಿ ಹೇಳಿ ಉಗಿದು ಉಪ್ಪಿನಕಾಯಿ ಹಾಕಿದಳು. ಇದರಿಂದ ಪ್ರೇಮಿ ಸಿದ್ದಪ್ಪ ಏನು ಮಾತಾಡದೇ ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಮರಳಿ ಹೋದ.


ಎಸ್ಪಿ ಅಮರನಾಥ ರೆಡ್ಡಿ


ಸಿಪಿಐ ಸುನಿಲ್ ಸವದಿ


ಪಿಎಸ್ಐ ಶ್ರೀಮತಿ ಎ.ಆರ್. ನಾಯಿಕ

**ಹೇರ್ ಡ್ರೈಯರ್‌ಂದ ಕೊಲೆಗೆ ಸಂಚು!**

ಬಸರಾಜೇಶ್ವರಿಯ ಗೆಳೆಯ ಸಿದ್ದಪ್ಪ ತನ್ನ ಪ್ರೇಯಸಿ ತನಗೆ ಇನ್ನು ಮುಂದೆ ಬರಬೇಡ ಅಂತ ಹೇಳಿದ್ದು ಇದರಿಂದ ತುಂಬಾ ಕೋಪಗೊಂಡು ನನಗೆ ಸಿಗದವಳು ಈ ಲೋಕದಲ್ಲಿ ಇರಲೇಬಾರದು ಅಂತ ಒಂದು ಸಂಚು ರೂಪಿಸಿದ. ಆಕೆಯನ್ನು ಹೇಗಾದರೂ ಕೊಲೆ ಮಾಡಬೇಕು ಅಂತ ಒಂದು ನಿರ್ಧಾರ ಮಾಡಿಯೇ ಬಿಟ್ಟ. ಒಂದು ಹೇರ್ ಡ್ರೈಯರ್ ಒಂದನ್ನು ಖರೀದಿಸಿದ.

ಅಂದು ದಿನಾಂಕ 15/11/2024 ಬಸವರಾಜೇಶ್ವರಿಗೆ ತಾನು ಖರೀದಿಸಿದ್ದ ಹೇರ್ ಡ್ರೈಯರ್ ನಲ್ಲಿ ಒಂದು ಸ್ಪೋಟಕ ವಸ್ತು ಅಳವಡಿಸಿ ಆಕೆಗೆ ಕೋರಿಯರ್ ಮುಖಾಂತರ ಪಾರ್ಸಲ್ ಮಾಡಿದ. ಅದನ್ನು ಬಸವರಾಜೇಶ್ವರಿ ಸ್ವೀಕರಿಸಿದ ನಂತರ ನಾನು ಆನ್‌ಲೈನಲ್ಲಿ ಏನು ಆರ್ಡರ್ ಮಾಡಿಲ್ಲ ಇದ್ವೇಗೆ ಬಂತು ಅಂತ ಯೊಚನೆ ಮಾಡಿ ಬಾಕ್ಸ್ ಓಪನ್ ಮಾಡಿದ್ವಾಳೆ. ಅದರಲ್ಲಿ ಹೇರ್ ಡ್ರೈವರ್ ಇದ್ದು ನೋಡಿದ ತಕ್ಷಣ ಖುಷಿಯಾಗಿ ಅದನ್ನು ಸ್ವಿಚ್ ಬೋರ್ಡ್‌ಗೆ ಹಾಕಿ ಬಟನ್ ಆನ್ ಮಾಡಿದ ಮೇಲೆ ಒಮ್ಮೆಲೇ ಅದು ಬ್ಲಾಸ್ಟ್ ಆಗಿದ್ದು, ಆಕೆಯ ಕೈಗಳು, ಬೆರಳುಗಳು ಛಿದ್ರವಾಗಿ ರಕ್ತ ಮನೆಯ ಗೋಡೆಯ ಮೇಲೆ ಚಿಮ್ಮಿದ್ದು ಇದರಿಂದ ಅಕ್ಕಪಕ್ಕದ ಜನರು ಹತ್ತಿರ ಓಡಿ ಬಂದು ಬಸವರಾಜೇಶ್ವರಿ ಕಿರುಚಾಡುತ್ತಲಿದ್ದು ಆಕೆಯನ್ನು ಕೂಡಲೇ ಇಳಕಲ ನಗರದ ಖಾಸಗಿ ಆಸ್ಪತ್ರೆಗೆ ಸೇರಿಸಿದ್ದು, ನಂತರ ಇಳಕಲ್ ಪೊಲೀಸ್ ಠಾಣೆಗೂ ವಿಷಯ ತಿಳಿಸಿದ್ದು ತಕ್ಷಣವೇ ಕಾರ್ಯಪ್ರವೃತ್ತರಾದ ಇಳಕಲ್ ಠಾಣೆಯ ಪಿಎಸ್ಐ ಶ್ರೀಮತಿ ಎಸ್.ಆರ್. ನಾಯಿಕರವರು ಆಸ್ಪತ್ರೆಗೆ



ಕೋರಿಯರ್ ಆಫೀಸ್ ಮುಂದೆ ಪೊಲೀಸರು

ತಮ್ಮ ಠಾಣಾ ಸಿಬ್ಬಂದಿಗಳೊಂದಿಗೆ ದೌಡಾಯಿಸಿದ್ದು ಘಟನೆಯ ಬಗ್ಗೆ ಬಸರಾಜೇಶ್ವರಿ ಹೇಳಿಕೆ ನೀಡಿ ದೂರು ದಾಖಲಿಸಿದ್ದು, ದೂರು ದಾಖಲಿಸಿಕೊಂಡ ಪಿಎಸ್ಐ ರವರು ತಮ್ಮ ಠಾಣಾ ಕ್ರೈಂ ನಂ 128/24 V/S 289. 125 (B) BNS2023 ರಡಿ ಪ್ರಕರಣ ದಾಖಲಿಸಿಕೊಂಡು ತಮ್ಮ ಹಿರಿಯ ಅಧಿಕಾರಿಗಳಾದ ಹುನಗುಂದ ಸಿಪಿಐ ಸುನಿಲ್ ಸವದಿ ಬಾಗಲಕೋಟ ಡಿವೈಎಸ್ಪಿ ಸಿದ್ದೇಶ್ವರ, ಬಾಗಲಕೋಟ ಎಸ್ಪಿ ಅವರನಾಥ ರೆಡ್ಡಿಯವರಿಗೆ ಸುದ್ದಿ


ಆರೋಪಿ ಸಿದ್ದಪ್ಪ ಹುಡೆದಮನಿ

☞12

ಕ್ರೈಂ ಪ್ರಪಂಚ

# ಇದೆಂತಹ ಸಾವು!

ಪ್ರಭು ಚಡಪಡಿಸುತ್ತಿದ್ದಾನೆ. ವಿಪರೀತ ಸಮಸ್ಯೆ ಎದುರಾಗಿದೆ. ಆರ್ಥಿಕ ಸಮಸ್ಯೆ. ಆರೋಗ್ಯ... ಹೆಂಡತಿಯನ್ನು ಕಾಡುತ್ತಿರುವ ಅನಾರೋಗ್ಯದ ಸಮಸ್ಯೆ. ಮದುವೆಯಾಗಿ ಎರಡು ವರ್ಷಗಳಾಗಿವೆ. ಒಂದು ವರ್ಷ ಮಾತ್ರ ಅವಳು ಆರೋಗ್ಯವಾಗಿದ್ದಳು. ನಂತರ ಅವಳು ಗುಣಪಡಿಸಲಾಗದ ಕಾಯಿಲೆ ಎಂಬ ಭ್ರಮೆಗೆ ಒಳಗಾದವಳಂತೆ ನರಳುತ್ತಿದ್ದಳು.

ಅಂತರ್‌ಜಾತಿ ವಿವಾಹ! ಹಾಗಾಗಿ ತಂದೆ-ತಾಯಿ ಅನುಕೂಲ ಸ್ಥಿತಿಯಲ್ಲಿದ್ದರೂ ಸಹ ಇವನಿಗೆ ಸಹಾಯ ಮಾಡುತ್ತಿರಲಿಲ್ಲ. ಇವನ ಮೇಲೆ ಕೋಪ ಮಾಡಿಕೊಂಡು ಸಂಬಂಧ ಮತ್ತು ಸಂಪರ್ಕ ಕಡಿದುಕೊಂಡಿದ್ದರು.

ಸಾಲ... ವಿಪರೀತ ಸಾಲ ಮಾಡಲು ಇವನೇನೋ ಸಿದ್ದನಾಗಿದ್ದಾನೆ. ಆದರೆ ಸಾಲ ಕೊಡುವವರು ಇರಲಿಲ್ಲ. ಒಬ್ಬ ಮಾತ್ರ ಇವನಿಗೆ ಆಗಾಗ ಹಣದ ಸಹಾಯ ಮಾಡಿದ್ದನು.

ಅವನು ಶ್ರೀನಿವಾಸ ಕಶ್ಯಪ!

ಪ್ರಭು ಬೇರೆ ಜಾತಿಯ ಹೆಣ್ಣನ್ನು ಮದುವೆ ಮಾಡಿಕೊಂಡಾಗ ಅವನಿಗೆ ಬೆಂಬಲವಾಗಿ ನಿಂತವನು ಆತ್ಮೀಯ ಗೆಳೆಯ ಶ್ರೀನಿವಾಸ.

ಹಣ ಖರ್ಚು ಮಾಡಿ ಮದುವೆ ಮಾಡಿಸಿದ್ದನು. ಭೋಗ್ಯಕ್ಕೆ ಮನೆ ಮಾಡಿಕೊಟ್ಟು ಸಂಸಾರಕ್ಕೆ ಅಗತ್ಯವಾಗಿರೋದನ್ನೆಲ್ಲಾ ಕೊಡಿಸಿದ್ದನು. ಹೆಂಡತಿಯ ಚಿಕಿತ್ಸೆಗೆ ಅಂತ ಆಗಾಗ ಸಹಾಯ ಮಾಡಿದ್ದನು.

ಈಗ ತುರ್ತಾಗಿ ಹಣ ಬೇಕಾಗಿದೆ. ಸಾಲ ಸಿಗುತ್ತಿಲ್ಲ. ಸಂಬಂಧಿಕರು ಸಹಾಯ ಮಾಡುತ್ತಿಲ್ಲ. ಅವನಿಗೆ ಆತಂಕವಾಗಿದೆ. ಹೆಂಡತಿಗೆ ತುರ್ತು ಚಿಕಿತ್ಸೆ ಕೊಡಿಸಬೇಕಾಗಿದೆ. ಏನು ಮಾಡಲಿ ಎಂದುಕೊಳ್ಳುತ್ತಿರುವಾಗ ನೆನಪಿಗೆ ಬಂದವನು ಆತ್ಮೀಯ ಗೆಳೆಯ ಶ್ರೀನಿವಾಸ ಕಶ್ಯಪ. ನನಗಾಗನ ಅವನು ಖಂಡಿತಾ ಸಹಾಯ ಮಾಡ್ತಾನೆ.

ಫೋನ್ ಕಾಲ್ ಬಂದಿತು. ಅವನ ಮುಖ ಅರಳಿತು.

ಯಾರ ಬಗ್ಗೆ ಚಿಂತಿಸುತ್ತಿದ್ದನೋ ಅಂತಹ ಗೆಳೆಯ ಶ್ರೀನಿವಾಸ ತಾನಾಗಿಯೇ ಫೋನ್ ಮಾಡಿದ್ದಾನೆ.

''ಹೇಳು ಫ್ರೆಂಡ್.''

''ಎಲ್ಲಿದ್ದೀಯ ಪ್ರಭು.''

''ಮನೇಲಿದ್ದೀನಿ... ಯಾಕೆ?''

''ಪುರುಸೊತ್ತಾಗಿದ್ದೀಯ?''

ಪ್ರಭು ಬೇಸರದಿಂದ ''ಸರಿಯಾದ ಕೆಲಸ ಇಲ್ಲ. ಉದ್ಯೋಗ ಇಲ್ಲ. ನಾನು ಯಾವಾಗಲೂ ಫ್ರೀಯಾಗಿರುತ್ತೀನಿ.''

''ಹಾಗಾದರೆ ಈಗಲೇ ಬಾ. ನಿನಗೆ ತುಂಬಾ ಹಣ ಬರುವ ಕೆಲಸ ಕೊಡ್ತೀನಿ.''

ಅವನಿಗೆ ಆನಂದದ ಜೊತೆಗೆ ಒಂದು ರೀತಿ ಆಶ್ಚರ್ಯವಾಗುತ್ತಿದೆ.

''ಏನು ಕೆಲಸ ಕೊಡ್ತೀಯ?'

''ಹೌದು ಫ್ರೆಂಡ್.''

''ಏನದು ಅಂತ ಕೇಳಬಹುದಾ?''

ಶ್ರೀನಿವಾಸ ಗಂಭೀರವಾಗಿ ''ನೀನು ಕೇಳಬಹುದು. ಆದರೆ ನಾನು ಹೇಳಲಾರೆ. ಯಾಕೆ ಅಂದ್ರ ಇದು ಟಾಪ್ ಸೀಕ್ರೇಟ್'' ಎಂದನು.

''ಆಗಲಿ ಬರ್ತೀನಿ. ಫ್ರೆಂಡ್.''

ತುಂಬಾ ಹಣ ಬರುವ ಕೆಲಸ ಕೊಡುತ್ತಾನಂತೆ. ಏನು... ಏನದು?''

ಪ್ರಭು ಚಿಂತಿಸುತ್ತಿದ್ದಾನೆ.

ಕುತೂಹಲ ಹೆಚ್ಚಾಗುತ್ತಿದೆ.

●●●

ರಾತ್ರಿ ಒಂಭತ್ತು ಗಂಟೆ.

ಪ್ರಭು ಆ ಬಂಗಲೆ ಹತ್ತಿರ ಬಂದು ಕಾಲಿಂಗ್ ಬಝರ್ ಪ್ರೆಸ್ ಮಾಡಿದನು.

''ಏ... ಬಾಗಿಲು ತೆಗೆದಿದೆ ಒಳಗೆ ಬಾ.''

ಪ್ರಭು ಫ್ರಂಟ್ ಹಾಲ್‌ಗೆ ಬಂದನು. ಅಲ್ಲಿಂದ ಮುಂದೆ ಕೆಲವು ಅಡಿ ದೂರದಲ್ಲಿ ಕಂಡು ಬರುತ್ತಿದೆ ಡೈನಿಂಗ್ ಹಾಲ್.

ಡೈನಿಂಗ್ ಟೇಬಲ್ ಇದೆ.

ಪ್ರಭುಗೆ ಮುಜುಗರ ಆಗುತ್ತಿದೆ.

ಕಾರಣ ಬಾರ್ ಓಪನ್ ಆಗಿದೆ.

ಡೈನಿಂಗ್ ಟೇಬಲ್ ಮೇಲೆ ಡ್ರಿಂಕ್ಸ್, ಸೋಡಾ ಸೀಸೆಗಳಿವೆ.

ಸಿಗರೇಟ್ ಪ್ಯಾಕ್ ಇದೆ.

ನಾನ್‌ವೆಜ್ ಐಟಂಗಳಿವೆ.

ಅವನೀಗ ಎಲ್ಲಾ ಕಡೆ ನೋಡಿದನು. ಕೆಲವು ಕ್ಷಣಗಳ ಕಾಲದ ನಂತರ ''ನಿನ್ನ ಶ್ರೀಮತಿ ಮನೇಲಿ ಇಲ್ಲ ಅಂತ ಕಾಣುತ್ತೆ. ಅದಕ್ಕೆ ನೀನು ಬಾರ್ ಅಂಡ್ ರೆಸ್ಟೋರೆಂಟ್ ಓಪನ್ ಮಾಡಿದ್ದೀಯ. ಇತ್ತೀಚೆಗೆ ನೀನು ಡ್ರಿಂಕ್ಸ್ ಅಡಿಕ್ಟ್ ಆಗುತ್ತಿದ್ದೀಯ'' ಎಂದನು.

ಶ್ರೀನಿವಾಸ ''ಡ್ರಿಂಕ್ಸ್ ಅಡಿಕ್ಸ್ ಆಗ್ತಿರೋದು ನಿಜ. ಹೆಂಡತಿ... ನನ್ನ ಪ್ರಿಯ ಪತ್ನಿ ತಿಂಗಳಲ್ಲಿ ಮೂರು ಸಲ ತವರೂರಿಗೆ ಹೋಗುತ್ತಿರುತ್ತಾಳೆ. ಗಂಡನ ಜೊತೆಗಿಂತ ತವರುಮನೇಲಿ ಜಾಸ್ತಿ ಇರುತ್ತಾಳೆ.''

ಪ್ರಭುಗೆ ಈ ಸಂಗತಿ ಗೊತ್ತಿದೆ!

ಮತ್ತೊಂದು ಸಂಗತಿ ಏನು?

ಶ್ರೀನಿವಾಸ ''ನನ್ನ ಹೆಂಡತಿ ಮನೇಲಿದ್ದರೂ ಸಹ ನಾನು ಕುಡಿಯೋದನ್ನ ಬಿಡೋಲ್ಲ. ಐ ಡೊಂಟ್ ಕೇರ್ ಫಾರ್ ಯು'' ಎಂದನು.

''ವಿಪರೀತ ಕುಡಿತದಿಂದ ಆರೋಗ್ಯ ಹಾಳಾಗುತ್ತೆ. ಪ್ಲೀಸ್.... ಕಡಿಮೆ ಮಾಡಲು.''

''ಮಾನಸಿಕ ನೆಮ್ಮದಿ ಇಲ್ಲದೆ ಕೊರಗುತ್ತಿದ್ದರೂ ಸಹ ಆರೋಗ್ಯ ಹಾಳಾಗುತ್ತೆ.''

ಪ್ರಭು ''ನಿನ್ನ ನೆಮ್ಮದಿ ಹಾಳು ಮಾಡಿರೋದು ಯಾರು? ಯಾವ ವಿಚಾರದಲ್ಲಿ ನಿನ್ನಂತ ಶ್ರೀಮಂತ ನೆಮ್ಮದಿ ಕಳೆದುಕೊಂಡಿದ್ದೀಯ'' ಎಂದು ಕೇಳಿದನು.

ಗ್ಲಾಸಿನಲ್ಲಿದ್ದ ವಿಸ್ಕಿಯನ್ನು ಕುಡಿದು ಕಾಲಿ ಮಾಡಿದ ನಂತರ ಮುಖ ಸಿಂಡರಿಸುತ್ತಾ ''ಏ ಪ್ರಭು... ನಿನ್ನನ್ನು ಕರೆಸಿರೋದು ಯಾಕೆ ಗೊತ್ತಾ?''

''ಗೊತ್ತಿಲ್ಲ ಫ್ರೆಂಡ್.''

''ನಿನಗೆ ಸಾಲ ಕೊಡಲು ಅಲ್ಲ. ಸಾಲ ಪಡೆಯಲು ನಿನ್ನ ಹತ್ತಿರ ಅಡಮಾನ ಮಾಡಲು ಬೆಲೆ ಬಾಳುವಂತಹ ವಸ್ತು ಯಾವುದೂ ಇಲ್ಲ. ಇನ್ನು ಸಹಾಯದ ವಿಚಾರ. ಈಗಾಗಲೇ ನಿನಗೆ ಹಲವಾರು ಸಲ ಸಹಾಯ ಮಾಡಿದ್ದೀನಿ. ಇನ್ನು ಮುಂದೆ ಸಹಾಯ ಮಾಡೋಲ್ಲ.''

ಪ್ರಭುಗೆ ಗಾಬರಿಯಾಯಿತು.

ನಿರಾಸೆ ಆವರಿಸುತ್ತಿದೆ.

ಹೆಂಡತಿಯ ಆರೋಗ್ಯ ಸುಧಾರಿಸಲು ಈಗ ಅವನಿಗೆ ತುರ್ತಾಗಿ ಹಣ ಬೇಕಾಗಿದೆ. ಗೆಳೆಯ ಸ್ವಲ್ಪವಾದರೂ ಸಹಾಯ ಮಾಡುತ್ತಾನೆ ಎಂದು ನಂಬಿದ್ದನು.

ಶ್ರೀನಿವಾಸ ಪುನಹ ''ಏ... ಯಾಕೆ ಗಾಬರಿ ಆಗ್ತೀಯ. ನನಗೆ ಗೊತ್ತಿದೆ. ನಿನಗೆ ತುರ್ತಾಗಿ ಹಣ ಬೇಕಾಗಿದೆ ಅಂತ ಎಷ್ಟು ಬೇಕಾದರೂ ಕೊಡುತ್ತೀನಿ. ಆದರೆ ಸಾಲ, ಸಹಾಯ ಅಲ್ಲ'' ಎಂದು ಹೇಳಿದನು.

ಅವನು ವಿಸ್ಮಯಗೊಳ್ಳುತ್ತಿದ್ದಾನೆ.

''ಹಾಗಾದರೆ ಮತ್ತೇನು?''

''ವ್ಯವಹಾರದ ಒಪ್ಪಂದ ಮಾಡಿಕೊಂಡರೆ ಮತ್ತು ನಾನು ಹೇಳಿದ ಕೆಲಸ ಮಾಡಿದರೆ ನೀನು ನಿರೀಕ್ಷೆ ಮಾಡಿರದಿದ್ದಷ್ಟು ಹಣ ಕೊಡ್ತೀನಿ.''

ಅವನಿಗೆ ಕುತೂಹಲ ಜಾಸ್ತಿಯಾಗುತ್ತಿದೆ.

''ಬೇರೆಯವರಿಗೆ ಐದು ಲಕ್ಷ ಕೊಡ್ತೀನಿ. ನಿನಗೆ ಮಾತ್ರ ಹತ್ತು ಲಕ್ಷ ಸಿಂಗಲ್ ಪೇಮೆಂಟ್‌ನಲ್ಲಿ ಕೊಡ್ತೀನಿ.''

ಹತ್ತು ಲಕ್ಷ ಹಣ! ಸಿಂಗಲ್ ಪೇಮೆಂಟ್ ಮಾಡ್ತಾರೆ! ಇಲ್ಲ... ನಂಬಲಾಗುತ್ತಿಲ್ಲ. ಕುಳಿತಿದ್ದ ಜಾಗದಿಂದ ಕಡಿಮೆ ಪ್ರಮಾಣದಲ್ಲಿ ತೂರಾಡುತ್ತಲೇ ಎದ್ದು ಪ್ರಭು ಹತ್ತಿರ ಬಂದು ಅವನ ಭುಜದ ಮೇಲೆ ಕೈ ಹಾಕಿ ಒತ್ತಿದನು.

ಪ್ರಭು ಬೆಚ್ಚಿಬಿದ್ದನು.

''ಏ ಹತ್ತು ಲಕ್ಷ ಅಂತ ಕನಸು ಕಾಣ್ಬೇಡ. ನೀನು ಈ ವ್ಯವಹಾರಕ್ಕೆ ಒಪ್ಪಿಕೊಂಡು ತುಂಬಾ ಧೈರ್ಯದಿಂದ ಮುಂದೆ ನುಗ್ಗಿ ಕೆಲಸ ಮಾಡಬೇಕಾಗುತ್ತೆ.''

ಪ್ರಭು ಚಡಪಡಿಸಿದನು. ಗಾಬರಿಯ ಜೊತೆಗೆ ಒಂದು ರೀತಿ ಗೊಂದಲ ಉಂಟಾಯಿತು.

ಅವನಿಂದ ಆಗುತ್ತಿಲ್ಲ.

''ಅಂತಹ ವ್ಯವಹಾರ ಏನು?''

ಶ್ರೀನಿವಾಸ ಗೆಳೆಯನ ಭುಜವನ್ನು ತುಂಬಾ ಮೃದುವಾಗಿ ಅದುಮುತ್ತಾ ''ನಾನು ಹೇಳುವುದನ್ನು ಕೇಳಿ ಗಾಬರಿಯಾಗಬಾರದು. ಭಯ, ಉದ್ವಿಗ್ನತೆಗೆ ಒಳಗಾಗಬಾರದು'' ಎಂದನು.

ಪ್ರಭು ಗಾಬರಿಯಿಂದ ''ಏ... ಏ... ಈಗಲೇ ನನ್ನನ್ನು ಹೆದರಿಸುತ್ತಿದ್ದೀಯಲ್ಲ. ಅಂತಹ ಭಯಾನಕ ವ್ಯವಹಾರ ಏನು'' ಎಂದು ಕೇಳಿದನು.

ಶ್ರೀನಿವಾಸ ಗೆಳೆಯನ ಮುಖದತ್ತ ಈಗ ಬಾಗಿದನು. ತುಂಬಾ ಮೆಲುಧ್ವನಿಯಲ್ಲಿ ''ನೀನು... ನೀನು... ನನಗಾಗಿ... ನನಗಾಗಿ ಒಬ್ಬರನ್ನ ಕೊಲೆ ಮಾಡ್ಬೇಕು.''

ಅವನು ನಡುಗಿದನು.

ಮುಖ ಬಿಳುಚಿಕೊಂಡಿತು.

''ವಾಟ್... ಕೊಲೆ ಮಾಡ್ಬೇಕಾ?''

''ಹೌದು ಫ್ರೆಂಡ್.''

ಪ್ರಭು ''ಏ... ಏ... ನೀನು ತಮಾಷೆ ಮಾಡ್ಬೇಡ. ಕುಡಿತದ ಅಮಲಿನಲ್ಲಿ ಏನೇನೋ ಮಾತಾಡಿ ನನ್ನ ತಲೆಕೆಡಿಸ್ಬೇಡ'' ಎಂದನು.

ಶ್ರೀನಿವಾಸ ದೂರ ಸರಿದನು.

ಪುನಹ ವಿಸ್ಕಿ ಸೀಸೆ ಎತ್ತಿಕೊಂಡು, ನೀರು-ಸೋಡಾ ಬೆರೆಸದೆ ಡ್ರೈ ವಿಸ್ಕಿಯನ್ನು ಎರಡು ಪೆಗ್‌ನಷ್ಟು ಕುಡಿದು ಮುಖ ಸಿಂಡರಿಸಿದನು. ತೂರಾಡುತ್ತಾ ಕ ಹೆಜ್ಜೆ ಹಾಕುತ್ತಿದ್ದಾನೆ.

''ಏ ಪ್ರಭು... ನಿನಗೆ ಗೊತ್ತಿಲ್ವ. ನಾನು ಎಷ್ಟೇ ಕುಡಿದರೂ ಕಂಟ್ರೋಲ್ ತಪ್ಪೋಲ್ಲ. ನಾನೀಗ ಮೆಂಟಲೀ ಹಂಡ್ರೆಡ್ ಪರ್ಸೆಂಟ್ ಸ್ಟ್ರಾಂಗ್ ಆಗಿದ್ದೀನಿ.''

ಪ್ರಭು ಚಡಪಡಿಸುತ್ತಲೇ ''ಓಕೆ.... ಅದೇನು ಅಂತ ಹೇಳು'' ಎಂದನು.

''ಆಗಲೇ ಹೇಳಲಿಲ್ವ. ನೀನೊಂದು ಕೊಲೆ ಮಾಡಬೇಕು ಅಂತ'' ಎಂದು ಪುನಹ ಹತ್ತಿರ ಬಂದು ಮುಖದತ್ತ ಬಾಗಿದಾಗ, ಆ ಗಬ್ಬು ವಾಸನೆ ತಡೆಯಲಾರದೆ ಪ್ರಭು ಮುಖ ಸಿಂಡರಿಸಿದನು.

''ಏ... ನಿನಗೆ ಕೊಲೆ ಮಾಡಲು ಆಗುತ್ತಾ? ಧೈರ್ಯ ಮತ್ತು ಆತ್ಮವಿಶ್ವಾಸ ಗಟ್ಟಿಯಾಗಿರಬೇಕು'' ಎಂದು ಹೇಳಿ ದೂರ ಸರಿದು ಊ ಸಿಗರೇಟ್ ಹತ್ತಿಸಿಕೊಳ್ಳುತ್ತಾ ''ನಿನಗೆ ಧೈರ್ಯ, ವಿಶ್ವಾಸ ಇದೆಯೋ ಇಲ್ಲವೋ ಗೊತ್ತಿಲ್ಲ. ಇವೆರಡನ್ನ ನಾನ್ಯಾವತ್ತೂ ಪರೀಕ್ಷೆ ಮಾಡಿಲ್ಲ. ಆದರೂ ನಿನಗೆ ತುಂಬಾ ತುರ್ತಾಗಿ ಹಣ ಬೇಕಾಗಿರೋದ್ರಿಂದ ನೀನು ಈ ಕ್ರೈಂಗೆ ಒಪ್ಪಿಕೊಳ್ಳುತ್ತೀಯ. ನಿನಗೆ ಗೊತ್ತಿದ್ಯ? ನೆಪ ಸರಿ. ಈಸ್ ದಿ ಮದರ್ ಆಫ್ ಇನ್‌ವೆನ್‌ಷನ್. ಮನಿ... ಮನಿ ಮೇಕ್ಸ್ ಮೆನಿಥಿಂಗ್'' ಎಂದು ಕೈ ಹಿಡಿದು ಅದುಮುತ್ತಾ ''ಹೇಳು... ಹೇಳು... ನಿನ್ನಿಂದ ಈ ಕೆಲಸ ಆಗುತ್ತೆ ಅಲ್ವ? ಯಾಕೆ ಅಂದ್ರೆ ಹತ್ತು ಲಕ್ಷ ಸಿಗುತ್ತೆ ಅಂದ್ರೆ, ನೀನು ಮಾಡುತ್ತೀಯ.... ಮಾಡಲೇಬೇಕು'' ಎಂದು ಹೇಳಿ ಮತ್ತೊಂದು ಸಿಗರೇಟ್ ಹತ್ತಿಸಿ ದಮ್ ಹೊಡೆದು ಬಾಯಿ ತುಂಬಾ ಹೊಗೆ ತುಂಬಿಕೊಂಡು ಉರುಳಿದನು.

ಸುರಳಿ ಆಕಾರದಲ್ಲಿ ಹೊಗೆ ಬರುತ್ತಿದೆ. ಪ್ರಭು ಸ್ವಲ್ಪ ಹೊತ್ತು ಆಲೋಚನೆ ಮಾಡಿದ ನಂತರ ಒಪ್ಪಿಕೊಂಡನು.

''ಓಕೆ ಹೇಳು ಫ್ರೆಂಡ್.''

ಶ್ರೀನಿವಾಸ ಈಗ ಕಿಟಕಿಯ ಹತ್ತಿರ ಬಂದು, ಇವನ ಕಡೆ ಬೆನ್ನು ತಿರುಗಿಸಿ ನಿಂತು ಶೀತಲ ಧ್ವನಿಯಲ್ಲಿ ''ಬಾಬುರಾಮ್ ಅನ್ನೋ ಯುವಕನನ್ನ ಕೊಲೆ ಮಾಡ್ಬೇಕು.''

''ಬಾಬುರಾಮ್ ಯಾರು?''

''ಅವನ್ಯಾರು ಅನ್ನೋದು ಮುಖ್ಯ ಅಲ್ಲ. ಅವನು ಎಲ್ಲಿರುತ್ತಾನೆ ಮತ್ತು ಅವನ ಚಟುವಟಿಕೆಗಳೇನು ಅಂತ ಮಾತ್ರ ನಿನಗೆ ಹೇಳ್ತೀನಿ. ಕೊಲೆ ಮಾಡಬೇಕಾಗಿರುವ ವ್ಯಕ್ತಿಯ ಬಗ್ಗೆ ತಿಳಿದಿರಬೇಕು.''

''ನೀನು ಸಭ್ಯಸ್ಥ ಮತ್ತು ಗೌರವಾನ್ವಿತ ಶ್ರೀಮಂತ. ನೀನ್ಯಾಕೆ ಕಾನೂನಿನ ವಿರೋಧವಾಗಿ...''

ಪ್ರಭು ಮಾತಾಡುತ್ತಿರುವಾಗಲೇ ಶ್ರೀನಿವಾಸನಿಗೆ ಕೋಪ ಬಂದಿತು. ಗಡುಸಾಗಿ ''ಕೂಲಿ ಕೊಟ್ಟು ಕೊಲೆ ಮಾಡಿಸುತ್ತಿರುವ ನಾನು ಪೇಮೆಂಟ್ ಕಿಲ್ಲರ್‌ಗೆ ಕಾರಣ ಹೇಳುವ ಅಗತ್ಯ ಇಲ್ಲ'' ಎಂದನು.

ಅವನು ಪೆಚ್ಚಾದನು.

''ಸಾರಿ... ಬೇಜಾರು ಮಾಡ್ಕೋಬೇಡ. ನೀನು ಕಾರಣ ತಿಳಿಯಬೇಕಾದ ಅಗತ್ಯ ಇಲ್ಲ. ನಾನು ಹೇಳುವ ವ್ಯಕ್ತಿನ ಹೇಳುವ ರೀತಿ ಕೊಲೆ ಮಾಡಿ ರಹಸ್ಯ ಕಾಪಾಡಿದರೆ ಸಾಕು.''

ಪ್ರಭು ನಿಟ್ಟುಸಿರು ಚೆಲ್ಲಿದನು.

''ಬಾಬುರಾಮ್ ಆಕರ್ಷಕ ರೂಪಿನ, ಹೀರೋ ಅಪಿಯರೆನ್ಸ್ ಇರುವ, ಬಲಾಢ್ಯ ಶರೀರದ ಯುವಕ. ಅವನನ್ನು ನಾಳೆ ರಾತ್ರಿ ನೀನು ಕೊಲೆ ಮಾಡಬೇಕು.''

ಭಯವಾಗುತ್ತಿದ್ದರೂ ಸಹ ಕಂಟ್ರೋಲ್ ಮಾಡಿಕೊಂಡು ''ಅವನು ಈ ಊರಲ್ಲಿ ಎಲ್ಲಿರುತ್ತಾನೆ ಫ್ರೆಂಡ್?''

''ಈ ಊರಲ್ಲಿ ಅವನಿಲ್ಲ. ಬಾಬುರಾಮ್ ವಾಸ ಮಾಡುತ್ತಿರೋದು ಕೊಡಗಿನ ಪೊನ್ನಂಪೇಟೆಯಲ್ಲಿ.''

''ವಾಟ್... ಪೊನ್ನಂಪೆಟೆನಾ? ಏ... ಅದು ನಿನ್ನ ಹೆಂಡತಿ ರಮ್ಯಲತಾಳ ತವರೂರು ಅಲ್ವ?''

''ಹೌದು ಫ್ರೆಂಡ್.''

''ಇವನ ಹೆಸರನ್ನು ಎಲ್ಲೋ ಕೇಳಿದ್ದೀನಿ. ಆದರೆ ನೆನಪಾಗುತ್ತಿಲ್ಲ.''

''ನೆನಪಾಗುವ ಅಗತ್ಯ ಇಲ್ಲ. ನೀನು ಪೊನ್ನಂಪೇಟೆಗೆ ಹೋಗು. ಅಲ್ಲಿಂದ ನಾಲ್ಕು ಮೈಲಿಗಳ ದೂರದಲ್ಲಿ ಚೆನ್ನಾಪುರ ಇದೆ.''

''ಓಕೆ... ಓಕೆ. ಆಮೇಲೆ ಹೇಳು.''

''ಚೆನ್ನಾಪುರದಲ್ಲಿ ಕಾವೇರಿ ಎಸ್ಟೇಟ್ ಇದೆ. ತುಂಬಾ ಕಡಿಮೆ ಎಕರೆಗಳಿರುವ ತೋಟ. ಅಲ್ಲಿ ಸರಿಯಾಗಿ ಬೆಳೆ ಬರುತ್ತಿಲ್ಲ. ಆ ತೋಟದ ಮಾಲೀಕರು ಕಷ್ಟದಲ್ಲಿದ್ದಾರೆ. ಆ ತೋಟದ ಮನೇಲಿ ಬಾಬುರಾಮ್ ಇರುತ್ತಾನೆ. ಅವನನ್ನು ನೀನು ಕೊಲೆ ಮಾಡ್ಬೇಕು.''

ಪ್ರಭು ಆಶ್ಚರ್ಯದಿಂದ ''ಏ... ಶ್ರೀನಿವಾಸ... ಆ ತೋಟ ನಿನ್ನ ಮಾವನರಲ್ವ? ನಿನ್ನ ಹೆಂಡತಿಯ ತವರೂರು ಪೊನ್ನಂಪೇಟೆ ತಾನೆ?''

''ಹೌದು... ಏನೀಗ?''

''ಅಲ್ಲಾ ಫ್ರೆಂಡ್... ನಿನ್ನ ಮಾವನ ತೋಟದಲ್ಲಿರೋ ವ್ಯಕ್ತಿನ ಕೊಲೆ ಮಾಡ್ಬೇಕಾ? ನೀನು... ನೀನು... ಏನು ಹೇಳ್ತಿದ್ದೀಯ?''

ತುಂಬಾ ಗಡುಸಾಗಿ ''ಕೊಲೆ ಮಾಡುವ ನಿನಗೆ ಯಾವ ಸ್ಥಳವಾದರೇನು? ಯಾವ ವ್ಯಕ್ತಿಯಾದರೇನು? ಅವನು ಅಂದರೆ ಆ ಬಾಬುರಾಮ್ ಸದಾ ತೋಟದ ಮನೇಲಿ ಇರುತ್ತಾನೆ. ನೀನು ಅಲ್ಲಿಗೆ ಹೋದರೆ ರಾತ್ರಿ ವೇಳೆ ಅವನು ಒಂಟಿಯಾಗಿ ಸಿಗುತ್ತಾನೆ. ಸುಲಭವಾಗಿ ಕೊಲೆ ಮಾಡಬಹುದು'' ಎಂದು ಹೇಳಿದನು.

''ಆಗಲಿ... ಆಗಲಿ ಮಾಡ್ತೀನಿ. ಆದರೆ ನನಗೆ ಭಯ

☞ 10

# ಕೊಲೆಯ ಹಿಂದೆ ಆಂಟಿ ಪ್ರೀತ್ಸೆಯ ಮ್ಯಾಟರ್ರು... ವಿಧವೆಗಾಗಿ ಸ್ನೇಹಿತನನ್ನೆ ಎತ್ತಿದ ಪ್ರಾಣ ಸ್ನೇಹಿತರು!



**ಒಂದು ಕೊಲೆ ನಡೆಯುತ್ತೆ. ಒಬ್ಬನ ಹೆಣ ಬೀಳುತ್ತೆ ಅಂದ್ರೆ ಅದರ ಹಿಂದೆ ಹೆಣ್ಣು, ಹೊನ್ನು, ಮಣ್ಣು ಬಿಟ್ಟು ಬೇರೇನೂ ಇಲ್ಲ ಅನ್ನೋದು ಕ್ರೈಂ ಸಿದ್ಧಾಂತ. ಒಂದು ಹತ್ಯೆಯ ಹಿಂದಿನ ಜಾಡು ಹಿಡಿದು ಹೊರಟಾಗ ಕೊನೆಗೆ ಸಿಗೋದು ಈ ಮೂರು ರಿಜನ್‌ಗಳಷ್ಟೆ. ಒಂದು ಹೆಣ್ಣಿಗಾಗಿ... ಇಲ್ಲವೆ ಹೊನ್ನು ಅಂದ್ರೆ ಹಣ ಸಂಪತ್ತಿಗಾಗಿ... ಇಲ್ಲವಾ ಮಣ್ಣು ಅಂದ್ರೆ ಆಸ್ತಿ, ಭೂಮಿಗಾಗಿ ಹತ್ಯಾಕಾಂಡಗಳು ನಡೆಯುತ್ವೆ. ಅಂದಿನ ಮಹಾಭಾರತ ಯುದ್ಧದಿಂದ ಹಿಡಿದು ಇಂದಿನ ಆಧುನಿಕ ಮಿಸೈಲ್ ಯುದ್ಧಗಳ ವರೆಗು ಬಿಹ್ಯಾಂಡ್ ಏನಿದೆ ಎಂದು ನೋಡಿದಾಗ ಈ ಮೂರರಲ್ಲಿ ಒಂದು ರಿಜನ್ ಬಿಟ್ಟು ಮತ್ತೇನು ಇರೋಲ್ಲ...**



ಕೊಲೆಯಾದ ಸುನೀಲ್ ಭಜಂತ್ರಿ

**ಆ** ವಿಷಯ ಹಾಗಿರಲಿ... ಭೂಮಿಯ ಮೇಲಿನ ಎಲ್ಲ ಸಂಬಂಧಗಳಲ್ಲಿ ಸಾರ್ವಕಾಲಿಕವಾಗಿ ಶ್ರೇಷ್ಠವಾದ ಸಂಬಂಧ ಎಂದರೆ ಅದು ಗೆಳೆತನ. ಒಳ್ಳೆಯದೆ ಇರಲಿ ಕೆಟ್ಟದ್ದೆ ಇರಲಿ ಅಲ್ಲಿ ಗೆಳೆತನದಲ್ಲಿ ಒಬ್ಬರನ್ನೊಬ್ಬರು ಬಿಟ್ಟು ಕೊಡೋ ಮಾತೇ ಇಲ್ಲ. ಅಂದು ಕೃಷ್ಣನಿಗಾಗಿ ಕುಚೇಲ, ದುರ್ಯೋದನ ದುಷ್ಟ ಎಂದು ಗೊತ್ತಿದ್ದರೂ ಪ್ರಾಣಸ್ನೇಹಿತ ಎಂದು ಜೊತೆಗೆ ನಿಂತ ಕರ್ಣ... ಹೀಗೆ ಗೆಳೆತನ ಎಂದರೆ ಇದು ಎನ್ನೋದಕ್ಕೆ ನಾನಾ ಊದಾಹರಣೆಗಳು ಸಿಗುತ್ವೆ. ಆದರಲ್ಲೂ ಸಂಗ್ಯಾ ಬಾಳ್ಯಾ ಸಿನಿಮಾದಲ್ಲಿನ ಅದೊಂದು ಜನಪದ ಗೀತೆ ಗೆಳೆಯನವನ್ನ ವಿವರಿಸಿದ ಪರಿ ಅದು ಮಾತುಗಳನ್ನೆ ಮೀರಿದ್ದು...



ಎಸ್ಪಿ ಪ್ರಸನ್ನ ದೇಸಾಯಿ

ಕೇಳಿದ್ರಲ್ಲ ಗೆಳೆತನ ಅಂದ್ರೆ ಏನು ಅನ್ನೋದನ್ನ, ಆದ್ರೆ ಇಂಥ ಗೆಳೆಯರ ನಡುವೆ ಒಂದು ಹೆಣ್ಣು ಬಂದ್ರೆ, ಏನಾಗುತ್ತೆ ಅನ್ನೋದಕ್ಕೆ ಈ ಕ್ರೈಂ ಕಹಾನಿಯೇ ತಾಜಾ ಉದಾಹರಣೆ. ಒಬ್ಬ ಹೆಣ್ಣಿನ ಸಂಗಕ್ಕೆ ಬಿದ್ದರೆ ಅವನಿಗೆ ಗೆಳೆಯರು, ಸಂಬಂಧಿಕರು, ಆಪ್ತರು ಎನ್ನುವ ಸಂಬಂಧಗಳನ್ನೆ ಮರೆತು ಬಿಡ್ತಾನೆ. ಆ ಹೆಣ್ಣನ ಹೇಗಾದ್ರು ಪಡೆಯಲೇಬೇಕು ಅಂತಾ ಎಂಥಹ ವಿಕೃತ ಕೃತ್ಯಕ್ಕೂ ಇಳಿದು ಬಿಡ್ತಾನೆ. ಇಲ್ಲಿಯೂ ಅಷ್ಟೇ ಪ್ರಾಣಕ್ಕೆ ಪ್ರಾಣವಾಗಿದ್ದ ಗೆಳೆಯರು ಒಂದೇ ಹೆಣ್ಣಿನ ಸಹವಾಸಕ್ಕೆ ಬಿದ್ದಾಗ ಅಲ್ಲಿ ನಡೆದದ್ದು ಪ್ರಾಣಕ್ಕಿಂತಲೂ ಹೆಚ್ಚಾಗಿದ್ದ ಸ್ನೇಹಿತನ ಭೀಕರ ಹತ್ಯೆ. ಜೀವನ ಪ್ರತಿ ನೋವಿನಲ್ಲಿ ಜೊತೆಗಾಗಿ ಇರ್ತೀನಿ ಎಂದು ಮಾತು ಕೊಟ್ಟಿದ್ದ ಪ್ರಾಣ ಸ್ನೇಹಿತನೇ ಕೇವಲ ಒಂದು ವಿಧವೆ ಹೆಣ್ಣಿಗಾಗಿ ಕುಚುಕು ಗೆಳೆಯನನ್ನ ಯಾರೂ ಊಹಿಸಲು ಸಾಧ್ಯವಿಲ್ಲದ ರೀತಿಯಲ್ಲಿ ಮುಗಿಸಿ ಬಿಟ್ಟಿದ್ದಾನೆ.

ಇಲ್ಲೊಬ್ಬ ಅದ್ಯಾವಾಗ ತನ್ನ ಪ್ರೇಯಸಿ ಆಂಟಿ ತನ್ನದೆ ಗೆಳೆಯನ ಪಾಲಾಗ್ತಾಳೆ ಅಂತಾ ಗೊತ್ತಾಯ್ತೋ ಆಗ ಪ್ರಾಣಕ್ಕಿಂತ ಹೆಚ್ಚಾಗಿದ್ದ ಗೆಳೆಯನನ್ನೆ ಭೀಕರವಾಗಿ ಹತ್ಯೆ ಮಾಡಿದ್ದಾನೆ. ಬಳಿಕ ಹತ್ಯೆಯ ದೃಶ್ಯಗಳನ್ನ ಲೈವಾಗಿಯೇ ಸೆರೆಹಿಡಿದು ವಿಕೃತಿ ಮೆರೆದಿದ್ದಾನೆ.

ಅಷ್ಟಕ್ಕು ಈ ಭಯಾನಕ ಹತ್ಯಾಕಾಂಡ ನಡೆದದ್ದು ಗುಮ್ಮಟ ನಗರಿ ವಿಜಯಪುರದಲ್ಲಿ, ಸುನೀಲ್ ಭಜಂತ್ರಿಯೇ ಪ್ರಾಣ ಸ್ನೇಹಿತನಿಂದಲೇ ಕೊಲೆಯಾಗಿರೋ ನತದೃಷ್ಟ. ಬಸವನಬಾಗೇವಾಡಿ ಪಟ್ಟಣದ ನಿವಾಸಿಯಾದ ಸುನೀಲ್ ವೃತ್ತಿಯಲ್ಲಿ ಆಟೋ ಚಾಲಕ. ಅಲ್ಲದೆ ತಂದೆ ಬೆಂಡ್ ಬಾಜಾ ವಾದಕರು. ತಂದೆಗೆ ಹುಷಾರು ಇಲ್ದೆ ಇದ್ರೆ ಈತನೆ ಮದುವೆ ಮಂಟಪಗಳಿಗೆ ತುತ್ತೂರಿ ಊದಿ ಒಂದಿಷ್ಟು ಕಾಸು ಹಿಡಿದು ಮನೆಗೆ ಬರ್ತಿದ್ದ. ಅದ್ರಲ್ಲು ಬರುವ ತಿಂಗಳ ತನ್ನ ಸಹೋದರಿಯ ಮದುವೆಗೆ ಅಂತಾ ಖುಷಿ ಖುಷಿಯಿಂದಲೇ ಎಲ್ಲ ವ್ಯವಸ್ಥೆಗಳನ್ನ ಮಾಡ್ತಾ ಇದ್ದ. ತನ್ನ ಮದುವೆಯನ್ನ ಮುತ್ತಣ್ಣ ಸಿನಿಮಾದ ಶಿವರಾಜ್‌ಕುಮಾರ್‌ರಂತೆ ಮಾಡಬೇಕು. ತಂಗಿಯ ಮದುವೆಯಲ್ಲಿ ಮುತ್ತಣ್ಣ ಪೀಪಿ ಊದುವಾ ಎಂದು ತುತ್ತೂರಿ ಊದಲು ರೆಡಿಯಾಗಿದ್ದ..

**ವಿಜಯಪುರ**
**✍ ರಾಜೀವ್ ಬೈರಿ**

ತನ್ನ ತಂಗಿಯ ಮದುವೆಯ ಬಗ್ಗೆ ನಾನಾ ಕನಸುಗಳನ್ನ ಕಟ್ಟಿಕೊಂಡಿದ್ದ ಸುನೀಲ್ ಭಜಂತ್ರಿ ಮದುವೆಗಾಗಿ ಹಣ ಹೊಂದಿಸೋಕೆ ಓಡಾಡ್ತಿದ್ದ. ಅಷ್ಟರೊಳಗೆ ಮದುವೆ ತಯಾರಿಯಲ್ಲಿದ್ದ ಮನೆಗೆ ಬರಬಾರದ ಸುದ್ದಿಯೊಂದು ಬರಸಿಡಿಲಿನಂತೆ ಬಂದಿತ್ತು.

ಸರಿಯಾಗಿ ಇದೇ ಸಮಯಕ್ಕೆ ಮನೆಯಲ್ಲಿ ಮದುವೆ ತಯಾರಿ ಅಂತಾ ಕುಂತಿದ್ದ ಸುನೀಲ್ ಭಜಂತ್ರಿ ತಂದೆ ಶಂಕ್ರಪ್ಪಗೆ ಬಸವನ ಬಾಗೇವಾಡಿ ಠಾಣೆ ಪೊಲೀಸರಿಂದ ಕರೆ ಬಂದಿತ್ತು. ಎಪಿಎಂಸಿ ಹೊರಭಾಗದ ಜಮೀನಲ್ಲಿ ಒಂದು ಡೆಡ್‌ಬಾಡಿ ಸಿಕ್ಕಿದೆ ಯಾರದ್ದು ಅಂತಾ ನೋಡಬಹುದಾ ಬನ್ನಿ ಅಂತಾ ಕರೆದಿದ್ದಾರೆ. ಅರೆ ಅದ್ಯಾರದ್ದೋ ಡೆಡ್ ಬಾಡಿ ಸಿಕ್ರೆ ನನ್ನನ್ಯಾಕೆ ಕರಿತಾರೆ ಅಂತಾ ಪೊಲೀಸರ ಬಗ್ಗೆ ಗುನುಗುತ್ತಲೆ ಶಂಕ್ರಪ್ಪ ಭಜಂತ್ರಿ ಸ್ಪಾಟಿಗೆ ಹೋಗಿದ್ದಾನೆ. ಆಗಲೇ ನೋಡಿ ಶಂಕ್ರಪ್ಪಗೆ ಒಂದು ಕ್ಷಣ ಆಕಾಶವೇ ತಲೆ ಮೇಲೆ ದೊಪ್ ಎಂದು ಬಿದ್ದ ಅನುಭವ ಆಗಿತ್ತು. ಯಾಕಂದ್ರೆ ಆ ಡೆಡ್‌ಬಾಡಿ ಯಾರದ್ದು ಅಲ್ಲ, ತಂಗಿಯ ಮದುವೆ ತಯಾರಿ ಅಂತಾ ಓಡಾಡ್ತಿದ್ದ ತನ್ನದೆ ಮಗ ಸುನೀಲನದ್ದಾಗಿತ್ತು..



ಬಂಧಿತ ಆರೋಪಿಗಳು

ಶಂಕ್ರಪ್ಪ ಭಜಂತ್ರಿ ಮಗನ ಹೆಣ ನೋಡ್ತಿದ್ದಂತೆ ಇಡೀ ಕುಟುಂಬವೇ ದಿಕ್ಕೇ ತೋಚದಂತಾಗಿ ಗೋಳೋ ಎಂದು ಕಣ್ಣೀರಿಡೋಕೆ ಶುರು ಮಾಡಿತ್ತು. ಅದ್ರಲ್ಲು ಸುನೀಲ್ ತಾಯಿ ಆಕ್ರಂದನದ ವೇಳೆ ಬಿಕ್ಕಿ ಬಿಕ್ಕಿ ಅಳೋವಾಗ ಉಸಿರುಗಟ್ಟುತ್ತಿದ್ದಳು. ಇನ್ನು ಮಗಳ ಮದುವೆಗೆ ತಯಾರಿ ಮಾಡ್ತಿದ್ದ ಮನೆಯ ಹಿರಿ ಮಗನೇ ಸತ್ತಾಗ ಹೆತ್ತ ತಾಯಿಯ ಕರುಳಿಗೆ ಅಕ್ಷರಶಃ ಬೆಂಕಿ ಬಿದ್ದಿತ್ತು..

ಸುನೀಲ್ ಭಜಂತ್ರಿ ಶವ ಸಿಕ್ಕಾಗ ಅದೊಂದು ಮರ್ಡರ್ ಅಂತಾ ಅಂದಾಜಿಸೋಕೆ ಬಸವನ ಬಾಗೇವಾಡಿ ಪೊಲೀಸರಿಗೆ ಬಹಳ ಸಮಯವೇನು ಹಿಡಿಯಲಿಲ್ಲ. ಅಷ್ಟೊತ್ತಿಗೆ ವಿಷಯ ತಿಳಿದು ವಿಜಯಪುರ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಂಕರ್ ಮಾರಿಹಾಳ ಭೇಟಿ ನೀಡಿ ಪರಿಶೀಲನೆ ನಡೆಸಿದ್ರು. ಪೊಲೀಸರು ಸೂಕ್ಷ್ಮವಾಗಿ ಪರಿಶೀಲಿಸುವಾಗಲೇ ಸುನೀಲ್ ಶವ ಬಿದ್ದ ಜಾಗದಲ್ಲಿ ಮದ್ಯದ ಪ್ಯಾಕೇಟ್, ಹಗ್ಗ ಸಿಕ್ಕಿದ್ದವು. ಜೊತೆಗೆ ಸುನೀಲ್ ಕುತ್ತಿಗೆಯಲ್ಲಿ ಹಗ್ಗದ ಗುರುತುಗಳು ಸ್ಪಷ್ಟವಾಗಿದ್ದವು. ಇಷ್ಟು ಸಿಕ್ಕ ಮೇಲೆ ಇದೊಂದು ಪಕ್ಕಾ ಮರ್ಡರ್... ಈ ಭೀಕರ ಕೊಲೆ ಮಾಡಿದವರು ಹೊರಗಿನರೇನಲ್ಲ ಅಂತ ಮತ್ತೊಂದು ಕನ್ಫ್ಯೂಜನ್‌ಗೆ ಬಂದಿತ್ತು ಖಾಕಿ ವಿಜಯಪುರ ಎಸ್ಪಿ ಪ್ರಸನ್ನ ದೇಸಾಯಿಯವರಿಗೆ.



ಹತ್ಯೆ ಮಾಡುತ್ತಿರುವುದು

ಯಸ್. ಅಷ್ಟರಲ್ಲೆ ಇನ್ನೊಂದು ಭಯಾನಕ ಮಾಹಿತಿ ಬಸವನ ಬಾಗೇವಾಡಿ ಪೊಲೀಸರಿಗೆ ಸಿಕ್ಕಿತ್ತು. ಸತ್ತ ಸುನೀಲ್‌ಗೆ ಪರಿಚಯ ಇದ್ದ ಯುವಕನೊಬ್ಬ ಹುಲಿ ಬೆನ್ನಟ್ಟಿದವರಂತೆ ಪೊಲೀಸ್ ಠಾಣೆಗೆ ಓಡೋಡಿ ಬಂದಿದ್ದ. ಬಂದವೇ ತನ್ನ ಬಳಿಯಲ್ಲಿದ್ದ ಅದೊಂದು ವಿಡಿಯೋವನ್ನ ಪೊಲೀಸರಿಗೆ ತೋರಿಸಿದ್ದ. ಈ ವಿಡಿಯೋ ನೋಡಿದ ಪೊಲೀಸರೇ ಒಂದು ಕ್ಷಣ ಶಾಕ್‌ಗೆ ಒಳಗಾಗಿದ್ದರು. ಅದು ಸುನೀಲ್ ಕೊಲೆ ಮಾಡಿದ ಹಂತಕರು ಕೊಲೆ ಮಾಡುವ ದೃಶ್ಯಗಳನ್ನ ಸೆರೆ ಹಿಡಿದ ವಿಡಿಯೋ ಆಗಿತ್ತು..

ಸುನೀಲ್‌ನ ಕುತ್ತಿಗೆಗೆ ಹಗ್ಗ ಹಾಕಿ ಕೊಲೆ ಮಾಡಿದ ಹಂತಕರು, ಅದನ್ನ ಮೊಬೈಲ್ ಕ್ಯಾಮರಾದಲ್ಲಿ ಸೆರೆ ಹಿಡಿದಿದ್ದಾರೆ. ಈ ದೃಶ್ಯಗಳು ಲೀಕ್ ಆಗುತ್ತಿದ್ದಂತೆ ಪೊಲೀಸರ ತನಿಖೆಯ ದಿಕ್ಕೇ ಬದಲಾಗಿತ್ತು. ಕೊಂದವರ ಯಾರು ಅನ್ನೋದನ್ನ ತಿಳಿದ ಖಾಕಿ ಪಡೆಯೇ ಒಂದು ಕ್ಷಣ ಅವಕ್ಕಾಗಿತ್ತು.

ಸುನೀಲ್‌ನನ್ನ ಹೀಗೆ ಇಷ್ಟೊಂದು ವಿಕೃತವಾಗಿ ಕೊಂದವರು ಬೇರಾರು ಅಲ್ಲಾ. ಸುನೀಲ್‌ಗೆ ಪ್ರಾಣಕ್ಕೆ ಪ್ರಾಣವಾಗಿದ್ದ ಗೆಳೆಯರು. ಇದಕ್ಕಿಂತ ಇನ್ನೊಂದು ಶಾಕಿಂಗ್ ವಿಚಾರ ಅಂದ್ರೆ ಪ್ರಾಣಕ್ಕಿಂತ ಹೆಚ್ಚಾಗಿದ್ದ ಪ್ರಾಣ ಸ್ನೇಹಿತನ ಪ್ರಾಣವನ್ನೆ ತೆಗೆಯಲು ಕಾರಣವಾಗಿದ್ದು ಅದೊಂದು ಪ್ರಾಯದ ಆಂಟಿ ಅನ್ನೋದು.

ಇದೊಂದು ಪೋಟೊ ಸುನೀಲ್ ಹತ್ಯೆಯ ಅಸಲಿ ಕಾರಣವನ್ನ ಬಿಚ್ಚಿಡುತ್ತೆ. ಅಷ್ಟಕ್ಕೂ ಸುನೀಲ್‌ನನ್ನ ಹೀಗೆ ಭೀಕರವಾಗಿ ಹತ್ಯೆ ಮಾಡಿ, ಬಳಿಕ ಹತ್ಯೆಯ ದೃಶ್ಯಗಳನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿವರು ಯಾರು ಅನ್ನೋದನ್ನ ಪತ್ತೆ ಮಾಡೋದಕ್ಕೆ ಬಸವನ ಬಾಗೇವಾಡಿ ಪೊಲೀಸರಿಗೆ ಬಹಳ ಸಮಯ ಹಿಡಿಯಲಿಲ್ಲ. ಪಕ್ಕಾ ಮಾಹಿತಿ ಇಟ್ಟುಕೊಂಡು ಕ್ಷಿಪ್ರಗತಿಯ ಕಾರ್ಯಾಚರಣೆ ನಡೆಸಿದ ಖಾಕಿ ಪಡೆ ಬಾಗೇವಾಡಿ ಪಟ್ಟಣದ ನಿವಾಸಿಗಳಾದ ಸಂತೋಷ ಹಾಗೂ ಮುದುಕಪ್ಪ ಅನ್ನೋರನ್ನ ದರದರನೇ ಎಳೆದು ಠಾಣೆಗೆ ತಂದಿದ್ದರು. ಇನ್ನು ನಶೆಯಲ್ಲೆ ಇದ್ದ ಇಬ್ಬರ ಮತ್ತು ಇಳಿಯಲಿ ಅಂತಾ ಪೊಲೀಸರೇ ಸ್ವಂತ ಖರ್ಚಿನಲ್ಲಿ ಟೀ ಕುಡಿಸಿ ವಿಚಾರಣೆ ಶುರು ಮಾಡಿದ್ದರು.

☞ 12

**ಗಾಂಜಾ ಮತ್ತು ಪೋಕ್ಸೋ ಕೇಸಿನಲ್ಲಿ ಬಂಧಿತರಾಗಿ ವಿಚಾರಣಾ ಖೈದಿಗಳಾಗಿ ಜೈಲು ಸೇರಿದ್ದ ಇಬ್ಬರು ಯುವಕರ ನಡುವಿನ ಪರಿಚಯ ಸ್ನೇಹವಾಗಿದ್ದು, ಬೇಲ್ ಮೇಲೆ ಹೊರ ಬಂದ ನಂತರ ಇಬ್ಬರು ಒಂದೇ ಕಡೆ ಗಾರೆಕೆಲಸ ಮಾಡಿಕೊಂಡಿದ್ದರು. ಕುಡಿತಕ್ಕೆ ದಾಸರಾಗಿದ್ದ ಇವರು ಆಗಾಗ ಬಾರ್, ವೈನ್ಸ್‌ಗೆ ಹೋಗಿ ಕುಡಿದು ಬರುತ್ತಿದ್ದರು. ಡಿಸೆಂಬರ್ 13ರಂದು ರಾತ್ರಿ ಬಾರ್‌ವೊಂದರಲ್ಲಿ ಮದ್ಯ ಸೇವನೆ ಮಾಡುತ್ತಿರುವಾಗ ಕುಡಿದ ನಶೆಯಲ್ಲಿ ಒಬ್ಬ ಜನ್ಮ ಕೊಟ್ಟ ತಾಯಿಯನ್ನು ಕೆಟ್ಟ ಪದ ಬಳಸಿ ಬೈದನೆಂಬ ಕಾರಣಕ್ಕೆ ಅವನ ಮೇಲೆ ಹಲ್ಲೆ ಮಾಡಿ, ಬೀಯರ್ ಬಾಟಲ್ ಚೂರಿನಿಂದ ಕತ್ತಿನ ಬಳಿ ಚುಚ್ಚಿ ಸಾಯಿಸಿ, ಶವ ಗುರುತು ಸಿಗಬಾರದೆಂದು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಕೋಲಾರ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.**


ಆರೋಪಿ ಲಕ್ಷ್ಮಣ್

# ಕುಡಿತ ನಶೆಯಲ್ಲಿ ಸ್ನೇಹಿತರ ನಡುವೆ ಜಗಳ ಒಬ್ಬ ಮಸಣಕ್ಕೆ, ಇನ್ನಿಬ್ಬರು ಜೈಲಿಗೆ!


**ಕೋಲಾರ**


✍ ಕೋಲಾರ ಮಂಜು


ಕೊಲೆಯಾದ ಶಂಕರ್‌ನಾಗ್

ಕೋಲಾರ ತಾಲ್ಲೂಕಿನ ಹುತ್ತೂರು ಹೋಬಳಿಗೆ ಸೇರಿದ ತಿಪ್ಪಸಂದ್ರ ಗ್ರಾಮದ ವಾಸಿ ವೆಂಕಟರಾಮಪ್ಪನ ಮಗ ಅರಣ್ಯ ವೀಕ್ಷಕ ಟಿ.ವಿ.ರಾಜೇಶ್ (24) 2024 ಡಿಸೆಂಬರ್ 17ರಂದು ಮಧ್ಯಾಹ್ನ 3.15 ಗಂಟೆಗೆ ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆಗೆ ಹಾಜರಾಗಿ ನಾನು ಸುಮಾರು ನಾಲ್ಕು ವರ್ಷದಿಂದ ಹರಟಿ ಅರಣ್ಯ ಪ್ರದೇಸದ ವೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ಡಿಸೆಂಬರ್ 17ರಂದು ಮಧ್ಯಾಹ್ನ 1.15 ಗಂಟೆ ಸಮಯದಲ್ಲಿ ಕೋಟಿಗಾನಹಳ್ಳಿ ಗೇಟ್ ಕಡೆಯಿಂದ ಅರಣ್ಯ ವೀಕ್ಷಣೆ ಮಾಡಿಕೊಂಡು ಕೋಲಾರ ಬೇತಮಂಗಲ ಮುಖ್ಯರಸ್ತೆ ಯಿಂದ ಹರಟಿ ಗ್ರಾಮದ ಕಡೆ ಹೋಗುವ ರಸ್ತೆಯಲ್ಲಿ ಹೋಗುತ್ತಿದ್ದಾಗ ಏನೋ ದುರ್ವಾಸನೆ ಬರುತ್ತಿದ್ದು ನಾನು ರಸ್ತೆಯಿಂದ ಸ್ವಲ್ಪ ಒಳಗೆ ಹೋಗಿ ನೋಡಲಾಗಿ ಅರಣ್ಯ ಪ್ರದೇಶದಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟು ಬಿದ್ದಿದ್ದು, ಮೃತದೇಹ ಕೊಳೆತು ವಾಸನೆ ಬರುತ್ತಿರುತ್ತೆ, ಮೃತದೇಹದ ಪಕ್ಕದಲ್ಲಿ ಹೊಡೆದಿರುವ ಬೀಯರ್ ಬಾಟಲ್ ಚೂರುಗಳು ಮತ್ತು ಒಂದು ಸಣ್ಣದಾದ ಚಾಕು ಬಿದ್ದಿರುತ್ತೆ ಹಾಗೂ ಮೃತನ ಕೊರಳಲ್ಲಿ ದಾರ ಬಿಗಿದಿರುತ್ತೆ. ಮೃತ ವ್ಯಕ್ತಿ ಸುಮಾರು 28ರಿಂದ 30 ವರ್ಷ ವಯಸ್ಸಿನವನಂತೆ ಕಂಡು ಬಂದಿದ್ದು ಈತನು ಫುಲ್ ಓವರ್ ಸ್ವೆಟರ್, ಕೆಂಪು ಬಣ್ಣದ ಜಾಗಿಂಗ್ ಪ್ಯಾಂಟು ಮತ್ತು ಟೀ ಶರ್ಟ್ ಧರಿಸಿರುತ್ತಾನೆ. ಎದೆ ಮತ್ತು ಹೊಟ್ಟೆಯ ಭಾಗದಲ್ಲಿ ಫುಲ್ ಓವರ್ ಮತ್ತು ಟೀ ಶರ್ಟ್ ಬೆಂಕಿಯಿಂದ ಸುಟ್ಟಿರುತ್ತೆ. ಈ ಅಪರಿಚಿತ ವ್ಯಕ್ತಿಯನ್ನು ಸುಮಾರು 4-5 ದಿನಗಳ ಹಿಂದೆ ಯಾರೋ ದುಷ್ಕರ್ಮಿಗಳು ಯಾವುದೋ ಕಾರಣಕ್ಕೆ ಕೊಲೆ ಮಾಡಿ ಮೃತದೇಹ ಗುರುತು ಸಿಗದಂತೆ ಮಾಡಲು


ಎಸ್ಪಿ ಬಿ. ನಿಖಿಲ್


ಎಎಸ್ಪಿ ರವಿಶಂಕರ್


ಡಿವೈಎಸ್ಪಿ ನಾಗ್ತೆ

ಬೆಂಕಿಯಿಂದ ಸುಟ್ಟು ಸಾಕ್ಷಿ ನಾಶ ಮಾಡಲು ಪ್ರಯತ್ನಿಸಿ ರುತ್ತಾರೆ.

ಈ ಕೊಲೆ ಮಾಡಿರುವ ದುಷ್ಕರ್ಮಿಗಳನ್ನು ಪತ್ತೆ ಮಾಡಿ ಕಾನೂನು ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವಂತೆ ನೀಡಿದ ದೂರನ್ನು ಪಡೆದ ಪಿಎಸ್‌ಐ ವಿ. ಭಾರತಿರವರು ಠಾಣಾ ಮೊ.ಸಂಖ್ಯೆ 490/2024 ಕಲಂ 103, 238 ಬಿಎನ್‌ಎಸ್ 2023 ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿರುತ್ತಾರೆ. ಸ್ಥಳಕ್ಕೆ ಎಸ್ಪಿ ವಿ. ನಿಖಿಲ್, ಎಎಸ್ಪಿಗಳಾದ ರವಿಶಂಕರ್, ಜಗದೀಶ್, ಡಿವೈಎಸ್ಪಿ ನಾಗ್ತೆ, ಪಿಐ ಕೆ. ಕಾಂತರಾಜ್, ಬೆರಳಚ್ಚು ತಜ್ಞರು, ಶ್ವಾನದಳ ಹಾಗೂ ಸಿಬ್ಬಂದಿ ವರ್ಗದವರು ಭೇಟಿ ನೀಡಿ ಪರಿಶೀಲಿಸಿದ ನಂತರ ಸ್ಥಳದಲ್ಲಿ ಗ್ರಾಮಸ್ಥರ ಸಮಕ್ಷಮದಲ್ಲಿ ಮಹಜರ್ ನಡೆಸಲಾಯಿತು. ಸ್ಥಳದಲ್ಲಿ ದೊರೆತ ಅಪರಿಚಿತ ವ್ಯಕ್ತಿಯ ಮೃತದೇಹವು ಕೊಳೆತು ದುರ್ವಾಸನೆ ಬರುತ್ತಿದ್ದು ಹಾಗೂ ಕಾಡುಪ್ರಾಣಿಗಳಿಂದ ಶವವನ್ನು ರಕ್ಷಿಸಲು ಮತ್ತು ಮೃತ ದೇಹದ ಗುರುತು ಪತ್ತೆಗಾಗಿ ಮೃತದೇಹದ ಫೋಟೋವನ್ನು ತೆಗೆಸಿದ ನಂತರ ಖಾಸಗಿ ಆ್ಯಂಬುಲೆನ್ಸ್‌ನಲ್ಲಿ ಕೋಲಾರದ ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಲಾಯಿತು.


ಮೃತ ಶಂಕರ್‌ನಾಗ್ ಶವ

**ಹರಟಿ ಗ್ರಾಮದ ಶಂಕರ್‌ನಾಗ್**

ಅಪರಿಚಿತ ವ್ಯಕ್ತಿಯ ಗುರುತು ಪತ್ತೆಗಾಗಿ ಮೃತನ ಭಾವಚಿತ್ರ, ಮುಖಚಹರೆ, ತೊಟ್ಟಿರುವ ಬಟ್ಟೆ, ಕೈ ಮೇಲಿದ್ದ ಹಚ್ಚೆ ಗುರುತು ಸೇರಿದಂತೆ ಇತರೆ ಮಾಹಿತಿಯನ್ನು ರಾಜ್ಯ ಪೊಲೀಸ್ ಸಾಮಾಜಿಕ ಜಾಲತಾಣ ಮತ್ತು ವಾಟ್ಸಾಪ್ ಗ್ರೂಪ್‌ಗಳಲ್ಲಿ ಹಾಕಿದರಲ್ಲದೆ ಫೋಟೋ ಮತ್ತು ಮಾಹಿತಿ ಇರುವ ಕರಪತ್ರಗಳನ್ನು ಮುದ್ರಿಸಿ ಬಸ್ ನಿಲ್ದಾಣ ಮತ್ತು ಸಾರ್ವಜನಿಕರು ಓಡಾಡುವ ಸ್ಥಳದಲ್ಲಿ ಪ್ರಚಾರ ಪಡಿಸಿದರು. 2024 18ರಂದು ತಮಿಳುನಾಡಿನ ಹೊಸೂರು ತಾಲ್ಲೂಕಿನ ಬಾಗಲೂರು ಹೋಬಳಿ, ಬೆಳ್ಳೂರು ಅಂಚೆ ಜೀವನ್ ನಗರದ ವಾಸಿ ವೆಂಕಟಸ್ವಾಮಿರವರ ಪತ್ನಿ ಶಾರದ ಎಂಬುವವರು ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆಗೆ ಹಾಜರಾಗಿ ಸಾಮಾಜಿಕ ಜಾಲತಾಣ ದಲ್ಲಿ ಹಾಕಿದ ಮೃತದೇಹದ ಭಾವಚಿತ್ರ ವನ್ನು ನೋಡಿ, ಮೃತನ ಚಹರೆ ಮತ್ತು ಮೃತನ ಬಲಗೈ ಮೇಲೆ ಇದ್ದ ಅಮ್ಮ ಎಂಬ ಹಚ್ಚೆಯ ಗುರುತನ್ನು ನೋಡಿ ಗುರುತಿಸಿ ಮೃತದೇಹವು ನಮ್ಮ ತಮ್ಮನಾದ ಶಂಕರ್‌ನಾಗ್ ಇರುವಂತೆ ಕಾಣುತ್ತಿದೆ ಎಂದು ತಿಳಿಸಿದ ಮೇರೆಗೆ ಅವರನ್ನು ಕೋಲಾರ ಎಸ್.ಎನ್.ಆರ್. ಆಸ್ಪತ್ರೆಯ ಶವಾಗಾರಕ್ಕೆ ಕರೆದುಕೊಂಡು ಹೋಗಿ ಮೃತದೇಹವನ್ನು ತೋರಿದ್ದು, ಗುರುತು ಪತ್ತೆಹಚ್ಚಿದ ಶಾರದರವರು ಪೊಲೀಸ್ ಠಾಣೆಗೆ ಹಾಜರಾಗಿ ನಮ್ಮ ತಂದೆ ಗಂಗಯ್ಯ, ತಾಯಿ ಶಾಂತಮ್ಮ ನವರು ಕೋಲಾರ ತಾಲ್ಲೂಕಿನ ಹರಟಿ ಗ್ರಾಮದಲ್ಲಿ ವಾಸ ವಾಗಿದ್ದರು. ನಮ್ಮ ತಂದೆ, ತಾಯಿಗೆ ಒಟ್ಟು ಮೂರು ಜನ ಮಕ್ಕಳಿದ್ದು, ನಾನು ಮೊದಲನೆಯವಳು, ಎರಡನೇಯವರು ಲಕ್ಷ್ಮಿ, ಮೂರನೇಯವನು ಶಂಕರ್‌ನಾಗ್ ಆಗಿರುತ್ತಾನೆ. ನನಗೆ ಮತ್ತು ನನ್ನ ತಂಗಿ ಲಕ್ಷ್ಮಿಗೆ ಮದುವೆಯಾಗಿ ನಮ್ಮಗಳ ಗಂಡನ ಮನೆಗಳಲ್ಲಿರುತ್ತೇವೆ. ತಂದೆ, ತಾಯಿ ಹಾಗೂ ತಮ್ಮ ಮೂರು ಜನರು ಹರಟಿ ಗ್ರಾಮದಲ್ಲಿ ನಮ್ಮ ಸ್ವಂತ ಮನೆಯಲ್ಲಿ ವಾಸವಾಗಿದ್ದರು. ತಮ್ಮ ಶಂಕರ್‌ನಾಗ್ ಗಾರೆಕೆಲಸ ಮತ್ತು ಇತರೆ ಕೂಲಿ ಕೆಲಸಗಳನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ನಮ್ಮ ತಾಯಿ ಶಾಂತಮ್ಮ ಕಳೆದ 15 ವರ್ಷಗಳ ಹಿಂದೆ ಹಾಗೂ ತಂದೆ ಗಂಗಯ್ಯನವರು ಆರು ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ತಮ್ಮ ಒಬ್ಬನೇ ಹರಟಿ ಗ್ರಾಮದಲ್ಲಿ ವಾಸವಿದ್ದು ಕೂಲಿ ಕೆಲಸಕ್ಕೆ ಹೋಗುತ್ತಿದ್ದನು. ಈತನಿಗೆ ವಿಪರೀತ ಮದ್ಯಪಾನ ಮಾಡುವ ಅಭ್ಯಾಸ ಇದ್ದು, ಬೇರೆಯವರ ಜೊತೆ ಕುಡಿಯಕ್ಕೆ ಹೋಗಿ ಗಲಾಟೆ ಮಾಡಿಕೊಂಡು ಬರುತ್ತಿದ್ದನು. ಯಾರೊಂದಿಗೂ ಬೆರೆಯುತ್ತಿರಲಿಲ್ಲ. ಒಬ್ಬಂಟಿಯಾಗಿದ್ದನು. ನಮ್ಮ ತಮ್ಮ ಶಂಕರ್‌ನಾಗ್ ಜೊತೆ ಇದ್ದವರೆ ಯಾವುದೋ ದುರುದ್ದೇಶಕ್ಕೆ ಕೊಲೆ ಮಾಡಿರುತ್ತಾರೆ. ಕೊಲೆಪಾತಕರನ್ನು ಪತ್ತೆ ಮಾಡಿ ಕಾನೂನು ರೀತಿಯ ಕ್ರಮ ಜರುಗಿಸುವಂತೆ ಕೋರುತ್ತೇನೆಂದು ಹೇಳಿಕೆ ನೀಡಿರುತ್ತಾರೆ.


ಮೃತನ ಕೈ ಮೇಲೆ ಇರುವ ಅಮ್ಮನ ಅಚ್ಚೆ

ಮೃತದೇಹದ ಗುರುತು ಪತ್ತೆಯಾದ ನಂತರ ತನಿಖೆ ಮುಂದುವರಿಸಿದ ಪೊಲೀಸರು, ಮೃತನ ಸಂಬಂಧಿಕರು ಹಾಗೂ ಪಂಚರ ಸಮಕ್ಷಮದಲ್ಲಿ ಮೃತದೇಹದ ಶವ ತನಿಖೆ ಕೈಗೊಂಡ ನಂತರ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮೃತ ದೇಹದ ವೈದ್ಯಕೀಯ ಮರಣೋತ್ತರ ಪರೀಕ್ಷೆ ನಡೆಸಿದ ಮೇಲೆ ಮೃತದೇಹವನ್ನು ವಾರಸುದಾರರಿಗೆ ನೀಡಲಾಯಿತು.

**ಇಬ್ಬರು ಆರೋಪಿಗಳ ಬಂಧನ**

ಮೃತ ಶಂಕರ್‌ನಾಗ್‌ನನ್ನು ಕೊಲೆ ಮಾಡಿ ಪರಾರಿಯಾಗಿ ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗಾಗಿ ಎಸ್ಪಿ ವಿ. ನಿಖಿಲ್, ಡಿವೈಎಸ್ಪಿ ನಾಗ್ತೆರವರ ಮಾರ್ಗದರ್ಶನದಲ್ಲಿ ಪಿಐ ಕೆ. ಕಾಂತರಾಜ್‌ರವರ ನೇತೃತ್ವದಲ್ಲಿ ಪಿಎಸ್‌ಐ ವಿ. ಭಾರತಿ, ಸಿಬ್ಬಂದಿ ವರ್ಗದವರಾದ ತನಿಖಾ ಸಹಾಯಕ ಮಂಜುನಾಥ ಆರಾಧ್ಯ, ರಾಜೇಶ್, ಮುರುಳಿ, ಸೈಯದ್ ಸಾಧಿಕ್ ಪಾಷ, ರಾಘವೇಂದ್ರ, ನವೀನ್, ಅಂಜಿ, ಸತೀಶವ ಮುಂತಾದವ ತಂಡವನ್ನು ರಚಿಸಲಾಗಿದ್ದು, ಕ್ರೈಂ ತಂಡವು ಆರೋಪಿಗಳ ಪತ್ತೆ ಕಾರ್ಯ ಕೈಗೊಂಡು ಕೃತ್ಯ ನಡೆದ ಸ್ಥಳದಲ್ಲಿ ಮದ್ಯದ ಬಾಟಲಿಗಳು ಬಿದ್ದಿದ್ದು ಮತ್ತು ದೂರುದಾರಳಾದ ಅಕ್ಕ ಶಾರದ ತನ್ನ ತಮ್ಮ ಶಂಕರ್‌ನಾಗ್ ಮದ್ಯವ್ಯಸನಿ ಬೇರೆಯವರೊಂದಿಗೆ ಜಗಳವಾಡುತ್ತಿದ್ದನೆಂಬ ವಿಚಾರವನ್ನು ಹೇಳಿದರಿಂದ ಅನುಮಾನದ ಮೇಲೆ ಕೆಲವೊಂದು ಬಾರ್ ಮತ್ತು ವೈನ್ ಶಾಪ್‌ಗಳಲ್ಲಿನ ಸಿಸಿ ಕ್ಯಾಮರಾಗಳನ್ನು ಪರಿಶೀಲಿಸಲಾಯಿತು. ಅದರಲ್ಲಿ ಕೋಲಾರ ನಗರದ ಬಂಗಾರಪೇಟೆ ರಸ್ತೆಯಲ್ಲಿರುವ ಎನ್. ಎಸ್. ಬಾರ್ ಅಂಡ್ ರೆಸ್ಟೋರೆಂಟ್‌ನ ಸಿಸಿ ಕ್ಯಾಮರಾ ಪರಿಶೀಲನೆ ಇದ್ದ ಯಾರೋ ಇಬ್ಬರು ಆಸಾಮಿಗಳು ಬಾರ್‌ನಲ್ಲಿ ಕುಡಿದು ಬಾರ್ ಮುಂಭಾಗ ಶಂಕರ್‌ನಾಗ್ ಮೇಲೆ ಗಲಾಟೆ ಮಾಡಿರುವ ಬಗ್ಗೆ ಸಿಸಿ ಕ್ಯಾಮರಾ ದೃಶ್ಯಾವಳಿ ಇರುತ್ತೆ. ನಂತರ ಕೋಲಾರ ಟಮಕ ಬಳಿ ಇರುವ ಕಾನಿಷ್ಕ ಬಾರ್‌ನ ಸಿಸಿ ಕ್ಯಾಮರಾ ದೃಶ್ಯಾವಳಿಯನ್ನು ಪರಿಶೀಲಿಸಲಾಗಿ ಮೇಲ್ಕಂಡ ಎನ್. ಎಸ್. ಬಾರ್ ಅಂಡ್ ರೆಸ್ಟೋರೆಂಟ್ ಬಳಿ ಶಂಕರ್‌ನಾಗ್‌ನೊಂದಿಗೆ ಇದ್ದ ಇಬ್ಬರು ವ್ಯಕ್ತಿಗಳೇ ಆತನೊಂದಿಗೆ ಬಾರ್‌ನಲ್ಲಿ ಮದ್ಯವನ್ನು ಖರೀದಿ ಮಾಡಿಕೊಂಡು ಫೋನ್‌ಪೇ ಮುಖಾಂತರ ಹಣ ಪಾವತಿ ಮಾಡಿರುವ ಬಗ್ಗೆ ದೃಶ್ಯಾವಳಿ ಇರುತ್ತೆ. ಈ ಎರಡು ಸಿಸಿ ಕ್ಯಾಮರಾಗಳಲ್ಲಿ ಸೆರೆಯಾಗಿರುವ ದೃಶ್ಯಾವಳಿಗಳ ಆಧಾರದ ಮೇರೆಗೆ ಇಬ್ಬರು ಆರೋಪಿಗಳ ಪತ್ತೆಗೆ ಬಲೆ ಬೀಸಿದರು.


ಆರೋಪಿ ಗಣೇಶ್

ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ 2024 ಡಿಸೆಂಬರ್ 20ರಂದು ಸಂಜೆ 6 ಗಂಟೆಗೆ ಕೋಲಾರ ತಾಲ್ಲೂಕಿನ ಸೀಸಂದ್ರ, ಗೇಟಿನ ಬಳಿ ಸಿಸಿ ಕ್ಯಾಮರಾ ದೃಶ್ಯಾವಳಿಗಳಲ್ಲಿ ಮೃತ ಶಂಕರ್‌ನಾಗ್‌ನೊಂದಿಗೆ ಇದ್ದ ಬಂಗಾರಪೇಟೆ ತಾಲ್ಲೂಕಿನ ಮಾವಳ್ಳಿ ಅಂಚೆ, ಮಂಚಹಳ್ಳಿ ಗ್ರಾಮದ ಲೇಟ್ ವೆಂಕಟರಾಮಪ್ಪನ ಮಗ ಗಾರೆಕೆಲಸ ಮಾಡುವ ಲಕ್ಷ್ಮಣ್ (22) ಹಾಗೂ ಅದೇ ಮಂಚಹಳ್ಳಿ ಗ್ರಾಮದ ವಾಸಿ ಲೇಟ್ ಕೃಷ್ಣಪ್ಪನ ಮಗ ಗಾರೆ ಕೆಲಸ ಮಾಡುವ ಗಣೇಶ್ (19) ಈ ಇಬ್ಬರನ್ನು ವಶಕ್ಕೆ ಪಡೆದು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ಲಕ್ಷ್ಮಣ್ ಆದ ನಾನು ಕಳೆದ ಎರಡು ವರ್ಷದ ಹಿಂದೆ ಅಪ್ರಾಪ್ತ ಬಾಲಕಿಯೊಬ್ಬಳ ಮೇಲೆ ದೌರ್ಜನ್ಯವೆಸಗಲು ಪ್ರಯತ್ನಿಸಿದ ಕಾರಣ ಪೋಕ್ಸೋ ಕಾಯ್ದೆಯಡಿಯಲ್ಲಿ ಕೋಲಾರದ ಜೈಲಿನಲ್ಲಿ ವಿಚಾರಣಾ ಖೈದಿಯಾಗಿ ಇದ್ದಾಗ ಹರಟಿಯ ಶಂಕರ್‌ನಾಗ್ ಗಾಂಜಾ ಕೇಸಿನ ಮೇಲೆ ಜೈಲಿಗೆ ಬಂದಿದ್ದನು. ಆಗ ನಮ್ಮಿಬ್ಬರ ನಡುವೆ ಪರಿಚಯವಾಗಿ ಬೇಲ್ ಮೇಲೆ ಹೊರ ಬರುವಾಗ ಸ್ನೇಹಿತರಾಗಿ ಜೈಲಿನಿಂದ ಹೊರಬಂದೆವು. ಜೈಲಿನಿಂದ ಹೊರ ಬಂದ ನಂತರ ನಮ್ಮ ಅಕ್ಕನ ಮಗ ಗಣೇಶ್ ಮತ್ತು ನಾನು ಒಂದೇ ಕಡೆ ಗಾರೆಕೆಲಸ ಮಾಡಿಕೊಂಡು ಕೋಲಾರ ನಗರದ ಸಮೀಪ ಇರುವ ಬಸವನತ್ತ ಗ್ರಾಮದ ಬಳಿ ಬಾಡಿಗೆ ರೂಂ ಮಾಡಿಕೊಂಡು ವಾಸವಿದ್ದೆವು. ಜೈಲಿನಲ್ಲಿ ಪರಿಚಯವಾಗಿದ್ದ ಶಂಕರ್‌ನಾಗ್ ಸಹ ನಾವು ಕೆಲಸ ಮಾಡುತ್ತಿದ್ದ ಜಾಗದಲ್ಲಿಯೂ ಕೆಲಸಕ್ಕೆ ಬರುತ್ತಿದ್ದನು. ಅವನು ದಿನವು ಹರಟಿಯಿಂದಲೇ ಕೋಲಾರಕ್ಕೆ ಬಂದು ಊರಿಗೆ ಹೋಗುತ್ತಿದ್ದನು. ನಾವು ಮೂರು ಜನ ಮದ್ಯವ್ಯಸನಿಗಳಾಗಿದ್ದು ಆಗಾಗ ಮದ್ಯಪಾನ ಮಾಡಲು ಒಟ್ಟಿಗೆ ಸೇರುತ್ತಿದ್ದೆವು. ಬಾರ್‌ನಲ್ಲಿ ಕುಡಿದ ನಂತರ ಶಂಕರ್‌ನಾಗ್ ಊರಿಗೆ ಹೋದರೆ, ನಾವಿಬ್ಬರು ರೂಂಗೆ ಹೋಗುತ್ತಿದ್ದೆವು.

**ತಾಯಿಯನ್ನು ಬೈದಿದ್ದಕ್ಕೆ ಕೊಲೆ**


2024 ಡಿಸೆಂಬರ್ 13ರಂದು ಬೆಳಿಗ್ಗೆ ಎಂದಿನಂತೆ ಗಾರೆಕೆಲಸಕ್ಕೆ ಹೋಗಿದ್ದ ನಾವು ಮೂರು ಜನರು ರಾತ್ರಿ ಎಂದಿನಂತೆ ಕೋಲಾರ ನಗರದ ಬಂಗಾರಪೇಟೆ ರಸ್ತೆಯಲ್ಲಿರುವ ಎನ್.ಎಸ್. ಬಾರ್ ಅಂಡ್ ರೆಸ್ಟೋರೆಂಟ್ ನಲ್ಲಿ ಮದ್ಯಪಾನ ಮಾಡುತ್ತಿರುವಾಗ ಶಂಕರ್‌ನಾಗ್ ನಮ್ಮ ತಾಯಿಯ ಹೆಸರು ಹೇಳುತ್ತಾ ಅಮ್ಮನ್ನೇ ಕೇ... ಎಂದು ಅವಾಚ್ಯ ಶಬ್ದಗಳಿಂದ ಬೈದನು. ಈ ವಿಚಾರವಾಗಿ ನನಗೂ ಹಾಗೂ ಶಂಕರ್‌ನಾಗ್ ನಡುವೆ ಗಲಾಟೆಯಾಯಿತು. ನಂತರ ನಮ್ಮ ಮೇಲೆ ಕೋಪ ಮಾಡಿಕೊಂಡು ಹೊರಟು ಹೋದನು. ಆಗ ನಾನು ಮತ್ತು ಅಕ್ಕನ ಮಗ ಗಣೇಶ್ ಇಬ್ಬರು ಕುಡಿಯುತ್ತಾ ಈ ನನ್ನ ಮಗ ನಮ್ಮ ಜೊತೆಯಲ್ಲಿಯೇ ಕುಡಿದು, ತಿಂದು ನಮ್ಮನ್ನೇ ನಿಮ್ಮನ್ನೇ ಕೇ... ಎಂದು ಬೈದು, ನಮ್ಮ ಮೇಲೆಯೇ ಕೋಪ ಮಾಡಿಕೊಂಡು ಹೋಗಿದ್ದಾನೆ. ಇವನನ್ನು ಇವತ್ತು ಸುಮ್ನೆ ಬಿಡಬಾರದು ಇವನನ್ನು ಮುಗಿಸಿಬಿಡಬೇಕು ಎಂದು ನಾನು ಮತ್ತು ಗಣೇಶನು ತೀರ್ಮಾನ ಮಾಡಿಕೊಂಡು ಮುಂದೆ ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಶಂಕರ್‌ನಾಗ್‌ನನ್ನು ತಡೆದು ನಿಲ್ಲಿಸಿ ನಾವು ಮೂರು ಜನ ಸ್ನೇಹಿತರು, ಕೋಪ, ಜಗಳ ಎಲ್ಲವನ್ನು ಮಾಡಬೇಕು, ನಂತರ ಜೊತೆಯಲ್ಲಿಯೇ ಇರಬೇಕು. ಅದು ಬಿಟ್ಟು ಈ ರೀತಿ ನಮ್ಮಿಬ್ಬರನ್ನು ಬಿಟ್ಟು ಎಲ್ಲಿ ಹೋಗುತ್ತಿಯಾ ಎಂದು ಅವನನ್ನು ಸಮಾಧಾನಪಡಿಸಿ ಪುನಃ ನಮ್ಮ ಜೊತೆಯಲ್ಲಿ ಕರೆದುಕೊಂಡು ರಾಷ್ಟ್ರೀಯ ಹೆದ್ದಾರಿ 75ರ ರಸ್ತೆಯ ಪಕ್ಕದಲ್ಲಿರುವ ಟಮಕದ ಕಾನಿಷ್ಕ ಬಾರ್‌ಗೆ ಹೋಗಿ ಬೀಯರ್ ಬಾಟಲ್ ಮತ್ತು ಹೈವಾರ್ಡ್ಸ್ ಟೆಟ್ರಾ ಪ್ಯಾಕೆಟ್‌ಗಳನ್ನು ಖರೀದಿಸಿ ಫೋನ್ ಪೇ ಮುಖಾಂತರ ಹಣವನ್ನು ಪಾವತಿ ಮಾಡಿದ ನಂತರ ಈಗಾಗಲೇ ರಾತ್ರಿ ಲೇಟ್ ಆಗಿದ್ದರಿಂದ ಶಂಕರ್‌ನಾಗ್‌ನನ್ನು ನಿಮ್ಮ ಊರಿನಲ್ಲಿ ಬಿಟ್ಟು ಬರುತ್ತೇವೆ, ಅದಕ್ಕೆ ಮೊದಲು ಎಲ್ಲಿಯಾದರು ನಿರ್ಜನ ಪ್ರದೇಶದಲ್ಲಿ ಮದ್ಯ ಸೇವನೆ ಮಾಡೋಣ ಎಂದು ಹೇಳಿದ್ದೆನು. ಅವನಿಗೆ ನಮ್ಮ ಮೇಲೆ ನಂಬಿಕೆ ಬರುವಂತೆ ಮಾತುಗಳನ್ನು ಹೇಳಿ ನಮಮ್ಮ ದ್ವಿಚಕ್ರ ವಾಹನದಲ್ಲಿ ಕುಳ್ಳರಿಸಿಕೊಂಡು ಕೋಲಾರ-ಬೇತಮಂಗಲ ಮಾರ್ಗವಾಗಿ ಹರಟಿ ಗ್ರಾಮದ ಕಡೆ ಹೋಗುವ ರಸ್ತೆಯಲ್ಲಿ ಸ್ವಲ್ಪ ದೂರ ಹೋಗಿ ನಮ್ಮ ಬಳಿ ಇದ್ದ ಮದ್ಯವನ್ನು ನಿರ್ಜನ ಪ್ರದೇಶದಲ್ಲಿ ಇಟ್ಟುಕೊಂಡು ಮದ್ಯಪಾನ ಮಾಡುತ್ತಾ ಇರುವಾಗ ಕುಡಿದ ನಶೆಯಲ್ಲಿ ಶಂಕರ್‌ನಾಗ್‌ನ ಮೇಲೆ ಕೋಪ ಬಂದು ಏನೋ ನಮ್ಮ ಜೊತೆಯಲ್ಲಿಯೇ ಕುಡಿದು, ತಿಂದು ನಮ್ಮನ್ನೇ ನಿಮ್ಮಮ್ಮನ್ನೇ ಕೇ... ಎಂದು ನಮ್ಮ ತಾಯಿಯನ್ನು ಬೈಯುತ್ತಿಯಾ, ಲೋಫರ್ ನನ್ನ ಮಗನೇ ಎಂದು ಬೈದೆನು. ಆಗ ಶಂಕರ್‌ನಾಗ್ ಪ್ರೀಪ್ಲಾನ್ ಮಾಡಿಕೊಂಡು ನನ್ನನ್ನು ಇಲ್ಲಿಗೆ ಕರೆದುಕೊಂಡು ಬಂದಿದ್ದಿರಾ, ನಿಮ್ಮ ಕೈಯಲ್ಲಿ ಏನು ಮಾಡಲು ಸಾಧ್ಯ ಎಂದು ಹೇಳಿ ನಮ್ಮ ಮೇಲೆ ತಿರುಗಿ ಬಿದ್ದನು. ಮೂವರ ಮಧ್ಯ ದೊಡ್ಡ ಹೊಡೆದಾಟ ನಡೆಯಿತು. ತಕ್ಷಣ ನಾನು ಗಣೇಶ್‌ಗೆ ಶಂಕರ್‌ನಾಗನ ಕೈಗಳನ್ನು ಹಿಂದಿನಿಂದ ಹಿಡಿದುಕೊಂಡು ಬಾಯಿ ಮುಚ್ಚುವಂತೆ ಹೇಳಿದ್ದೆನು. ಅದರಂತೆ ಗಣೇಶ್ ಅವನನ್ನು ಗಟ್ಟಿಯಾಗಿ ಹಿಡಿದು ಬಾಯಿ ಮುಚ್ಚಿಕೊಂಡನು. ಕೂಡಲೇ ನನ್ನ ಕೈಯಲ್ಲಿದ್ದ ಖಾಲಿ ಬಿಯರ್ ಬಾಟಲಿಯನ್ನು ನೆಲಕ್ಕೆ ಹೊಡೆದು ಅರ್ಧ ಬಾಟಲಿ ಚೂರನ್ನು ತೆಗೆದುಕೊಂಡು ಶಂಕರ್‌ನಾಗ್‌ನ ಕುತ್ತಿಗೆಗೆ ಮತ್ತು ಬೆನ್ನಿನ ಮೇಲೆ ತಿವಿದು ಕೊಲೆ ಮಾಡಿದೆ. ನಂತರ ಗಣೇಶ್ ವಾಟರ್ ಬಾಟಲಿನಲ್ಲಿ ನಮ್ಮ ದ್ವಿಚಕ್ರ ವಾಹನದಲ್ಲಿದ್ದ ಪೆಟ್ರೋಲನ್ನು ಹಿಡಿದುಕೊಂಡು ಬಂದನು. ಚೂಪಾದ ಬಾಟಲಿಯಿಂದ ಚುಚ್ಚಿದ್ದರಿಂದ ಶಂಕರ್‌ನಾಗ್‌ನ ಪ್ರಾಣಪಕ್ಷಿ ಹಾರಿ ಹೋಗಿತ್ತು. ಮೃತದೇಹ ಗುರುತು ಸಿಗದಂತೆ ಮಾಡಲು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಅಲ್ಲಿಂದ ರಸ್ತೆ ದಾಟುತ್ತಿದ್ದಾಗ ಕಾಲು ಜಾರಿ ಬಿದ್ದು ನನ್ನ ಎಡ ಮುಂಗೈಗೆ ಗಾಯವಾಯಿತು. ನಂತರ ನಾನು ಮತ್ತು ಗಣೇಶ್ ಇಬ್ಬರು ದ್ವಿಚಕ್ರ ವಾಹನದಲ್ಲಿ ಅಲ್ಲಿಂದ ಹೊರಟು ಬಸವನತ್ತದಲ್ಲಿರುವ ರೂಂಗೆ ಬಂದು ಸೇರಿಕೊಂಡೆವು. ಸ್ನೇಹಿತನನ್ನು ನಂಬಿಸಿ ಕರೆದುಕೊಂಡು ಹೋಗಿ ಕೊಲೆ ಮಾಡಿರುವುದು ತಪ್ಪಾಗಿರುತ್ತದೆ ಎಂದು ತಿಳಿಸಿದರು.

ಆರೋಪಿಗಳ ದಸ್ತಗಿರಿ ಕ್ರಮ ಕೈಗೊಂಡು ಘನ ಸರ್ವೋಚ್ಛ ನ್ಯಾಯಾಲಯದ 11 ಅಂಶಗಳನ್ನು ಪಾಲನೆ ಮಾಡಿ, ಆರೋಪಿಗಳ ವೈದ್ಯಕೀಯ ತಪಾಸಣೆಗೆ ಒಳಪಡಿಸಿದ ನಂತರ ಎ1 ಆರೋಪಿ ಲಕ್ಷ್ಮಣ್‌ನ ಅಣ್ಣನಾದ ಅಣ್ಣಪ್ಪ ಎಂಬುವವರಿಗೆ ಹಾಗೂ ಎ2 ಆರೋಪಿ ಗಣೇಶನ ತಾಯಿ ಶಶಿಕಲಾ ಎಂಬುವವರಿಗೆ ಬಂಧನದ ಬಗ್ಗೆ ಮಾಹಿತಿ ನೀಡಿದರು. ಆರೋಪಿಗಳು ತಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ

☞ 11


ಅರಣ್ಯ ಪ್ರದೇಶದಲ್ಲಿ ಮದ್ಯ ಸೇವನೆ ಮಾಡಿದ ಸ್ಥಳ


ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆದ ಪೊಲೀಸರು



ಪಿಐ ಕೆ. ಕಾಂತರಾಜ್


ಪಿಎಸ್‌ಐ ಭಾರತಿ


ಆರೋಪಿಗಳನ್ನು ಬಂಧಿಸಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ


ಕಾನಿಷ್ಕ ಬಾರ್ ಮುಂದೆ ಪರಿಶೀಲಿಸುತ್ತಿರುವ ಪೊಲೀಸರು


ಬಾರ್‌ನಲ್ಲಿ ಮದ್ಯ ಸೇವನೆ ನಂತರ ಗಲಾಟೆ ನಡೆದ ಸ್ಥಳ ತೋರಿಸಿದ ಆರೋಪಿಗಳು


ಎನ್.ಎಸ್. ಬಾರ್‌ನಿಂದ ಸಿಸಿ ಕ್ಯಾಮರಾ ಡಿವಿಆರ್‌ನ್ನು ತೆಗೆದುಕೊಳ್ಳುತ್ತಿರುವ ಪೊಲೀಸರು



ಬಾರ್ ಮುಂದೆ ಕೊಲೆಗೆ ಸ್ಕೆಚ್ ಹಾಕಿದ ಬಗ್ಗೆ ಪೊಲೀಸರಿಗೆ ತಿಳಿಸುತ್ತಿರುವ ಆರೋಪಿಗಳು


ಶಂಕರ್‌ನಾಗ್‌ನನ್ನು ಬಾಟಲಿಯಿಂದ ಚುಚ್ಚಿ ಸಾಯಿಸಿದ ಸ್ಥಳ ತೋರಿಸಿದ ಆರೋಪಿಗಳು

6

ಮತ್ತು ಅನುಮಾನ ಕಾಡುತ್ತಿದೆ.''

''ಏನದು ಪ್ರಭು?''

''ಬಾಬುರಾಮ್ ಬಲಾಢ್ಯ ಶರೀರದ ಯುವಕ. ಅವನನ್ನು ಜೀವ ಉಳಿಸಿಕೊಳ್ಳಲು ಹೋರಾಡಬಹುದು.''

''ನನಗದು ಗೊತ್ತಿದೆ. ಅದಕ್ಕೆ ಬೇರೊಂದು ಉಪಾಯ ಮಾಡಿದ್ದೀನಿ.''

''ನನಗೆ ತೊಂದರೆ ಆಗಬಾರದು ಮತ್ತು ಈ ಕ್ರೈಂ ಸುಲಭವಾಗಿ ಆಗಬೇಕು.''

''ಏನು... ಏನುದು?''

ಶ್ರೀನಿವಾಸ ತೂರಾಡುತ್ತಲೇ ಹೆಜ್ಜೆ ಹಾಕುತ್ತಾ ಟೇಬಲ್ ಹತ್ತಿರ ಹೋಗಿ, ಅಲ್ಲಿರುವ ಲಾಕರ್‌ನಿಂದ ಉದ್ದವಾದ ಕೊಳವೆ ತೆಗೆದುಕೊಡುತ್ತಾ ''ಇದು ಕ್ಲೋರೋ ಸ್ಪ್ರೇ.ಯರ್. ತೋಟದ ಮನೇಲಿ ಅವನಿರುತ್ತಾನೆ. ಡೋರ್ ಓಪನ್ ಮಾಡಿದ ಕೂಡಲೇ ಮುಖದ ಹತ್ತಿರ ಹಿಡಿದು ಸ್ಪ್ರೇ ಮಾಡು. ಅವನು ಪ್ರಜ್ಞೆತಪ್ಪುತ್ತಾನೆ. ನಂತರ ಯಾವ ರೀತಿ ಬೇಕಾದರೂ ಸುಲಭವಾಗಿ ಕೊಲೆ ಮಾಡಬಹುದು.''

ಈಗವನಿಗೆ ಧೈರ್ಯ ಬಂದಿದೆ.

''ಏ... ಏ ಪ್ರಭು... ಬೀ ಕೇರ್‌ಫುಲ್. ನಿನ್ನ ಬೆರಳು ಅಥವಾ ಹೆಜ್ಜೆ ಗುರುತು ಅಲ್ಲಿ ಮೂಡಬಾರದು. ಸ್ಪ್ರೇಯರ್ ಕೊಳವೆ ಅಥವಾ ಕೊಲೆಗೆ ಉಪಯೋಗಿಸುವ ಯಾವ ಆಯುಧವನ್ನೇ ಆಗಲಿ ಅಥವಾ ನಿನಗೆ ಸಂಬಂಧಪಡುವ, ನಿನ್ನ ಬಗ್ಗೆ ಸುಳಿವನ್ನು ನೀಡಬಲ್ಲಂತ ಯಾವ ವಸ್ತುವೂ ಅಲ್ಲಿ ಬಿಡಬಾರದು. ಕೊಲೆ ಮಾಡಿದ ನಂತರ ಇದನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಬೇಕು.''

ಪ್ರಭು ತಲೆಯಾಡಿಸಿದನು.

''ನೀನು ನಿನ್ನ ಗೆಟಪ್ ಬದಲಿಸಿಕೊಂಡು ಹೋಗಬೇಕು. ಪರಿಚಯದವರೇ ಎದುರಾದರೂ ನಿನ್ನನ್ನು ಗುರುತಿಸಬಾರದು. ಆ ರೀತಿ ಡ್ರೆಸ್ ಮತ್ತು ಮೇಕಪ್ ಇರಬೇಕು.''

''ಆಗಲಿ ಫ್ರೆಂಡ್. ನಾನು ಎಲ್ಲಾ ಪ್ಲಾನ್ ಮಾಡಿ ಮಾಡ್ತೀನಿ. ನಾನು ಯಾವಾಗ ಎಲ್ಲಿಂದ ಹೊರಡಬೇಕು.''

''ಪೊನ್ನಂಪೇಟೆಗೆ ಡೈರೆಕ್ಟ್ ಬಸ್ಸು ಇಲ್ಲ. ನೀನು ಇಲ್ಲಿಂದ ಮಡಿಕೇರಿಗೆ ಹೋಗಿ ಅಲ್ಲಿಂದ ಪೊನ್ನಂಪೇಟೆಗೆ ಹೋಗಬೇಕು. ನೀನು ಕತ್ತಲಾದ ಮೇಲೆ ಅಲ್ಲಿಂದ ನಾಲ್ಕು ಮೈಲಿಗಳ ದೂರ ಇರುವ ಕಾವೇರಿ ಎಸ್ಟೇಟ್ ಹೋಗಬೇಕು.''

ಯಾವ ರೀತಿ, ಯಾವಾಗ ಕೊಲೆ ಮಾಡಬೇಕು ಎಂಬುದರ ಬಗ್ಗೆ ಹತ್ತು ನಿಮಿಷಗಳ ಕಾಲ ಚರ್ಚೆ ಮಾಡಿದ ನಂತರ ಪ್ರಭು ಹೊರಟನು. ''ಏ... ನಿಲ್ಲು... ಸ್ವಲ್ಪ ನಿಲ್ಲು'' ಎಂದು ಹೇಳಿ ರೂಮಿಗೆ ಹೋಗಿ ಹತ್ತು ಲಕ್ಷ ರೂಪಾಯಿ ಹಣ ತಂದು ಗೆಳೆಯನಿಗೆ ಕೊಟ್ಟನು.

ಪ್ರಭು ಆಶ್ಚರ್ಯದಿಂದ ''ಏ... ಏ... ನಾನು ಈ ಡೀಲಿಂಗ್ ಪ್ರಾರಂಭ ಮಾಡಿಲ್ಲ. ಮೊದಲೇ ಫುಲ್ ಪೇಮೆಂಟ್ ಮಾಡಿದ್ದೀಯಲ್ಲ'' ಎಂದು ಹೇಳಿದನು.

''ನಿನ್ನ ಬಗ್ಗೆ ನನಗೆ ವಿಶ್ವಾಸ ಇದೆ. ನೀನು ಖಂಡಿತಾ ಈ ಆಪರೇಷನ್ ಸಕ್ಸಸ್ ಮಾಡ್ತೀಯ.''

''ಒಂದು ವೇಳೆ ಫೆಯಿಲ್ಯೂರ್ ಆದ್ರೆ ಏನ್ ಮಾಡ್ತೀಯ?''

ಶ್ರೀನಿವಾಸ ನಗುತ್ತಾ ''ನನ್ನ ಫ್ರೆಂಡ್ ಹೆಂಡತಿಯ ಟ್ರೀಟ್‌ಮೆಂಟ್‌ಗೆ ಮತ್ತು ಸಾಲ ತೀರಿಸಲು ಸಹಾಯ ಮಾಡಿದ್ದೀನಿ ಅಂತ ಅಂದುಕೊಂಡು ಸುಮ್ಮನಾಗ್ತೀನಿ'' ಎಂದಾಗ ಪ್ರಭು ಭಾವುಕನಾಗಿ ''ನಾನು ನಿನಗೆ ಈ ವ್ಯವಹಾರದಲ್ಲಿ ಮೋಸ ಮಾಡೋಲ್ಲ'' ಎಂದು ಭಾವುಕನಾಗಿ ಹೇಳಿದನು.

ಶ್ರೀನಿವಾಸ ಗೆಳೆಯನ ಕೈ ಅದುಮುತ್ತಾ ''ಬೆಸ್ಟ್ ಆಫ್ ಲಕ್ ಹೇಳುವುದರ ಜೊತೆಗೆ ನಿನಗೆ ಎಚ್ಚರಿಕೆ ಕೊಡ್ತೀನಿ. ಸ್ವಲ್ಪ ಎಡವಟ್ಟಾದರೂ ಜೈಲು ಶಿಕ್ಷೆ ಗ್ಯಾರಂಟಿ.''

●●●

ಸಂಜೆ ಆರು ಗಂಟೆ! ತವರೂರಿಗೆ ಹೋಗಿದ್ದ ಹೆಂಡತಿ ರಮ್ಯಲತಾ ವಾಪಸ್ ಬಂದಳು.

ಗಂಡ ಕುಡಿಯುತ್ತಿರೋದನ್ನ ಕಂಡು ಮುಖ ಸಿಂಡರಿಸಿದಳು. ಹೆಂಡತಿಯ ಕಡೆ ಆಶ್ಚರ್ಯದಿಂದ ನೋಡುತ್ತಾ ''ಇದೇನು ನೀನು ತವರೂರಿನಿಂದ ಬೇಗ ಬಂದಿದ್ದೀಯ. ಯಾವಾಗ ಹೋದರೂ ಕಡಿಮೆ ಅಂದರೂ ಮೂರು ದಿನಗಳು ಇದ್ದುಬರುತ್ತಿದ್ದೆ'' ಎಂದು ವ್ಯಂಗ್ಯವಾಗಿ ಹೇಳಿದನು.

''ನಿಮ್ಮ ಕುಡಿತದ ಸ್ಥಿತಿಯನ್ನು ಪರೀಕ್ಷೆ ಮಾಡಲು ಬಂದೆ.''

ಶ್ರೀನಿವಾಸ ನಗುತ್ತಾ ''ನೀನು ಈ ಮನೇಲಿ ಇರುವಾಗಲು ಕುಡಿಯೋದನ್ನ ಏನು ಕಡಿಮೆ ಮಾಡಿಲ್ಲವಲ್ಲ'' ಎಂದನು.

''ಈ ಕೆಟ್ಟ ಅಭ್ಯಾಸ ನಿಮಗ್ಯಾಕೆ ಬಂತು?''

ಅವನು ವ್ಯಂಗ್ಯವಾಗಿ ನಗುತ್ತಾ ''ನಿನ್ನಿಂದ... ನಿನ್ನಿಂದ ರಮ್ಯಲತಾ'' ಎಂದನು.

ಅವಳು ಬೆಚ್ಚಿಬಿದ್ದಳು.

''ವಾಟ್... ನನ್ನಿಂದನಾ... ನಾನು ಏನು ಮಾಡ್ದೆ?''

''ನನಗೇನು ಮಾಡಿದ್ದೀಯ ಅಂತ ನಿನಗೆ ಚೆನ್ನಾಗಿ ಗೊತ್ತಿದೆ'' ಎಂದು ಹೇಳಿ ಎದ್ದು ಅವಳ ಹತ್ತಿರ ಬರುತ್ತಾ ''ಏ... ನಿನಗೆ ಈ ಚಟ ಅಂಟಿಕೊಂಡಿದ್ದು ಯಾವಾಗ ಗೊತ್ತಾ ? ನಿನ್ನನ್ನು ಮದುವೆಯಾಗಿ ಮೂರು ತಿಂಗಳಿನ ನಂತರ. ನಾನು ಈ ಚಟವನ್ನು ಖಂಡಿತಾ ಬಿಡ್ತೀನಿ.''

ಅವಳು ಸಂತೋಷದಿಂದ ''ಯಾವಾಗ... ಯಾವತ್ತಿನಿಂದ ಬಿಡ್ತೀರ?

ಅವನು ವ್ಯಂಗ್ಯವಾಗಿ ''ಅಬ್ಬ... ಗಂಡನ ಬಗ್ಗೆ ಅದೆಂತಹ ಪ್ರೀತಿ-ಕಾಳಜಿ ಇದೆ. ನನಗೊಂದು ಶುಭ ಸುದ್ದಿ ನಾಳೆ ರಾತ್ರಿ ಬರುತ್ತೆ . ಈ ಸುದ್ದಿ ಕೇಳಿದ ಕ್ಷಣದಿಂದ ಕುಡಿಯೋದನ್ನ ಸ್ಟಾಪ್ ಮಾಡ್ತೀನಿ'' ಎಂದನು.

ಅವಳಿಗೆ ಆಶ್ಚರ್ಯವಾಗುತ್ತಿದೆ.

''ಆ ಶುಭ ಸುದ್ದಿ ಏನು?''

''ನಾಳೆ ರಾತ್ರಿ ಗೊತ್ತಾಗುತ್ತೆ.''

''ನನ್ನಿಂದ ನೀವು ಏನನ್ನೋ ಮುಚ್ಚಿಡುತ್ತಿದ್ದೀರ.''

''ನಾಳೆ ರಾತ್ರಿ ಎಲ್ಲಾ ಗೊತ್ತಾಗುತ್ತೆ.''

''ಈಗಲೇ ಹೇಳಿ ಪ್ಲೀಸ್...''

''ಪೊನ್ನಂಪೇಟೆಯಿಂದ ಪ್ರಯಾಣ ಮಾಡಿ ತುಂಬಾ ಆಯಾಸ ಆಗಿದೆ. ನೀವು ವಿಶ್ರಾಂತಿ ತಗೋ'' ಎಂದು ಹೇಳಿ ಅಲ್ಲೇ ಇದ್ದ ಸೋಫಾದಲ್ಲಿ ಮೈಚೆಲ್ಲಿ ಮಲಗಿದನು.

ಗಾಢವಾಗಿ ನಿದ್ದೆ ಬಂದಿದೆ. ಗೊರಕೆ ಶಬ್ದ ಕೇಳುತ್ತಿದೆ. ಅವಳು ಗಂಡನ ಕಡೆ ಒಂದು ನೋಡಿದ ನಂತರ ಅಲ್ಲಿಂದ ಹೊರಟಳು. ಅವಳ ಎದೆ ಭಾರವಾಗಿದೆ. ನಿಟ್ಟುಸಿರು ಬಿಟ್ಟಳು.

●●●

ಬೆಳಗಿನ ಎಂಟು ಗಂಟೆ.

ಅವಳು ಕಾಫಿ ರೆಡಿ ಮಾಡಿಕೊಂಡು ಬಂದಳು. ಬೇಗ ಎದ್ದು ಸ್ನಾನ ಮಾಡಿ ರೆಡಿಯಾಗಿ ರೂಮಿನಿಂದ ಬರುತ್ತಿದ್ದ ಗಂಡನ ಕಡೆ ನೋಡಿ ಕಾಫಿ ಲೋಟ ಮುಂದೆ ಹಿಡಿದಳು.

''ನನಗೆ ಈ ಕಾಫಿ ಬೇಡ'' ಎಂದು ಹೇಳಿ ಟೇಬಲ್ ಮೇಲೆ ಇದ್ದ ಸೀಸೆ ಎತ್ತಿಕೊಂಡು ಎರಡು ಪೆಗ್‌ನಷ್ಟು ಕುಡಿಯುತ್ತಾ ''ಇವತ್ತು ರಾತ್ರಿಗೆ ನನ್ನ ಕುಡಿತದ ಅಭ್ಯಾಸ ಅಂತ್ಯಗೊಳ್ಳುತ್ತದೆ.''

ಅವಳು ಸಂತೋಷದಿಂದ ''ನೀವು ಈ ಹಾಳು ಕುಡಿತ ಬಿಟ್ಟರೆ ನನಗೆ ತುಂಬಾ ಸಂತೋಷ ಆಗುತ್ತೆ . ಹಾಂ... ನಾನು ಮುಖ್ಯವಾದ ವಿಷಯ ಹೇಳಬೇಕು. ಬೇಗ ಊರಿಗೆ ಹೋಗಬೇಕಂತೆ. ಪಾಪ ಅವರಿಗೆ...'' ಎಂದು ಹೇಳುವಷ್ಟರಲ್ಲಿ ''ನನಗೆ ಕಾರಣ ಬೇಕಾಗಿಲ್ಲ. ನೀನು ತಿಂಗಳಲ್ಲಿ ಮೂರು ಅಥವಾ ನಾಲ್ಕು ಸಲ ಹೋದಾಗಲು ಏನಾದರೂ ಕಾರಣ ಇರುತ್ತೆ . ನನಗೆ ಅಗತ್ಯ ಇಲ್ಲ'' ಎಂದು ಹೇಳಿದಾಗ ಅವಳು ಬೇಸರದಿಂದಲೇ ಹೊರಟಳು. ವಿವಾಹವಾಗಿ ಮೂರು ತಿಂಗಳು ಹೆಂಡತಿಯ ಜೊತೆ ಪ್ರೀತಿಯಿಂದ ಇದ್ದ ಗಂಡ ಬದಲಾಗಲು ಕಾರಣ ಏನು ಎಂದು ಚಿಂತಿಸುತ್ತಿದ್ದಾಳೆ.

ಅವಳು ಹೆಜ್ಜೆ ಹಾಕುತ್ತಿದ್ದಾಳೆ.

''ಸ್ವಲ್ಪ ನಿಲ್ಲು ರಮ್ಯಲತಾ.''

ಅವಳು ಹಿಂತಿರುಗಿ ''ಏನು?''

''ನಿನ್ನ ವ್ಯಾನಿಟಿ ಬ್ಯಾಗಿನಲ್ಲಿ ಏನಿದೆ?''

ಅವಳ ಮುಖ ಕೋಪ, ಅವಮಾನದಿಂದ ಕೆಂಪಾಯಿತು. ಅವಳು ಭುಜದಿಂದ ವ್ಯಾನಿಟಿ ಬ್ಯಾಗನ್ನು ತೆಗೆದು ಓಪನ್ ಮಾಡಿದಳು.

ಅದರಲ್ಲಿ ಸಾವಿರ ರೂಪಾಯಿ ಮಾತ್ರ ಇದೆ.

ಅವಳು ''ನಾನು ತವರುಮನೆಗೆ ಇಲ್ಲಿಂದ ಹಣ ಸಾಗಿಸುತ್ತಿದ್ದೇನೆ ಅಂತ ಅನುಮಾನವೆ? ಆ ರೀತಿ ಕಳ್ಳತನ ಮಾಡಿ ತವರಿನವರಿಗೆ ಹೆಲ್ಪ್ ಮಾಡಿಲ್ಲ.''

ಅವನು ''ನಿನ್ನ ತಂದೆಗೆ ನಾನು ಎಷ್ಟು ಲಕ್ಷ ಸಹಾಯ ಮಾಡಿದ್ದೀನಿ ಅಂತ ನಿನಗೆ ಗೊತ್ತಿದೆ. ಅವರಿಗೆ ನೀನು ಹಣ ಕೊಟ್ಟರೆ ನಾನು ತಡೆಯುವುದಿಲ್ಲ. ಆದಗರೆ ಬೇರೆ ರೀತಿ ನನ್ನ ಹಣ ಉಪಯೋಗ ಆಗಬಾರದು'' ಎಂದನು.

ಅವಳು ಕೋಪದಿಂದ ''ನಿಮ್ಮ ಅನುಮಾನ ಏನು...? ಯಾವ ಅರ್ಥದಲ್ಲಿ ಬೇರೆ ರೀತಿ ಉಪಯೋಗ ಆಗಬಾರದು ಅಂತ ಹೇಳುತ್ತಿದ್ದೀರ'' ಎಂದಳು.

ಅವನು ಗಂಭೀರವಾಗಿ ''ಇವತ್ತು ರಾತ್ರಿ ನಾನೇ ಫೋನ್ ಮಾಡಿ ಎಲ್ಲಾ ರಹಸ್ಯ ಹೇಳ್ತೀನಿ' ಎಂದನು.

ಅವಳು ಗೊಂದಲ, ಉದ್ವಿಗ್ನತೆಯಿಂದಲೇ ಹೊರಟಳು.

●●●

ಸಂಜೆ ಆರು ಗಂಟೆ.

ಶ್ರೀನಿವಾಸ ಫೋನ್ ಮಾಡಿ ''ಏ ಪ್ರಭು... ಎಲ್ಲಿದ್ದೀಯ ನೀನು? ಯಾಕೆ ಫೋನ್ ಮಾಡಿಲ್ಲ?''

''ಪೊನ್ನಂಪೇಟೆ ತಲುಪಿದ್ದೇನೆ. ಕತ್ತಲಾದ ಮೇಲೆ ಆಟೋ ಮಾಡಿಕೊಂಡು ಹೋಗ್ತೀನಿ.''

''ಎಲ್ಲಾ ರೆಡಿ ಮಾಡಿಕೊಂಡಿದ್ದೀಯ?''

''ಬೂಎರಳು ಗುರುತು ಬೀಳಬಾರದು ಅಂತ ಹ್ಯಾಂಡ್ ಗ್ಲೌಸ್‌ಗಳನ್ನು ತಗೊಂಡಿದ್ದೇನೆ.''

''ನಾನು ಹೇಳಿದ ರೀತಿ ಮರ್ಡರ್ ಮಾಡಿ ಅಲ್ಲಿಂದ ಹೊರಟು, ನೈಟ್ ಸರ್ವೀಸ್ ಬಸ್ಸಲ್ಲಿ ಊರಿಗೆ ಬಂದು ಬಿಡು.''

''ಆಗಲಿ ಫ್ರೆಂಡ್.''

''ಬಟ್... ಬೀಕೇರ್‌ಫುಲ್.''

●●●

ರಾತ್ರಿ ಒಂಭತ್ತೂವರೆ! ಒಂಭತ್ತು ಗಂಟೆಗೆ ಕೊಲೆ ಮಾಡಿ ಬೇಗ ಪೊನ್ನಂಪೇಟೆಗೆ ಬಂದು ಬಿಡಬೇಕು. ಆಮೇಲೆ ನೈಟ್ ಬಸ್ ಸಿಗೋಲ್ಲ ಎಂದು ಎಚ್ಚರಿಸಿದ್ದನು. ಹೆಂಡತಿ ನೆನಪಾದಳು. ಅವಳಿಗೆ ಫೋನ್ ಮಾಡಿದಳು.

ಗಂಡ ರಾತ್ರಿ ಫೋನ್ ಮಾಡಿ ರಹಸ್ಯವನ್ನು ಬಹಿರಂಗ ಮಾಡುತ್ತಾನೆ ಎಂದು ಗೊತ್ತಿದ್ದರಿಂದ ಅವಳು ಭಯ ಮತ್ತು ಆತಂಕದಿಂದ ಮಾತಾಡಿದಳು.

''ಎಲ್ಲಿದ್ದೀಯ ರಮ್ಯಲತಾ?''

''ಪೊನ್ನಂಪೇಟೆಯಲ್ಲಿರೋ ಅಪ್ಪನ ಮನೇಲಿ ಇದ್ದೀನಿ.''

''ಯಾಕೆ... ತೋಟದ ಮನೇಲಿ ಉಳಿದುಕೊಂಡಿಲ್ವ? ಇವತ್ತೇನು ಇಲ್ಲಿಗೆ ಬಂದಿದ್ದೀಯ.''

ಅವಳು ''ನಾನು ಮದುವೆಯಾದ ಮೇಲೆ ತೋಟದ ಮನೇಲಿ ಯಾವತ್ತೂ ಉಳಿದುಕೊಂಡಿಲ್ಲ. ಅದ್ಯಾಕೆ ಈ ರೀತಿ ಕೇಳುತ್ತಿದ್ದೀರ'' ಎಂದು ರೇಗಿದಳು.

''ಬಾಬುರಾಮ್ ಯಾವಾಗಲು ತೋಟದ ಮನೇಲಿ ಇರುತ್ತಾನೆ. ಅವನು ತೋಟದ ಮ್ಯಾನೇಜರ್ ತಾನೇ? ಅವನಿಗೆ ಹೆಲ್ಪ್ ಮಾಡಲು ನೀನು ಹಗಲು-ರಾತ್ರಿ ಅಲ್ಲೇ ಇರುತ್ತೀಯ ಅಲ್ವ?''

''ವಾಟ್ ಡು ಯೂ ಮೀನ್. ನಿಮಗೆ ನನ್ನ ಮೇಲೆ ಅನುಮಾನವೆ?''

''ನೂರಕ್ಕೆ ನೂರು ಭಾಗ ಇದೆ.''

''ಕಾರಣ ಏನು?''

''ನೀನು ಮದುವೆಗೆ ಮೊದಲಿನಿಂದಲೂ ಬಾಬುರಾಮ್ ಎಂಬ ಹೀರೋನ ಪ್ರೀತಿಸುತ್ತಿದ್ದೆ. ನನ್ನ ಶ್ರೀಮಂತಿಕೆಗೆ ಬೆರಗಾಗಿ ಮನೆಯವರ ಒತ್ತಾಯಕ್ಕೆ ಬದಲಾಗಿ ಮದುವೆಯಾದೆ. ಸ್ವಲ್ಪ ದಿವಸ ನನ್ನ ಜೊತೆ ನಿಷ್ಠೆಯಿಂದ ಇದ್ದೆ. ಆದರೆ ಬಲಾಢ್ಯ ಶರೀರದ ಆಕರ್ಷಕ ರೂಪಿನ ಬಾಬುರಾಮ್ ಸೆಳೆತ ಬದಲಿಸಿತು. ಮದುವೆಗೆ ಮೊದಲು ಪ್ರೀತಿ, ಪ್ರೇಮದ ಉನ್ಮಾದದಲ್ಲಿ ಸುಖದ ಅನುಭವ ಮಾಡಿಕೊಂಡಿದ್ದೆ. ಮದುವೆಯಾದ ಮೇಲೆ ತಿಂಗಳಲ್ಲಿ ಮೂರು ಸಲ ಅವನಿಗಾಗಿ ಹೋಗುತ್ತಿದ್ದೆ. ತೋಟದ ಮನೇಲಿ ಉಳಿಯುತ್ತಿದ್ದೆ. ನಿನ್ನವರಿಗೆ ನಿನ್ನ ಅನೈತಿಕ ಸಂಬಂಧದ ಬಗ್ಗೆ ಗೊತ್ತಿದ್ದರೂ ಬಾಯಿ ಬಿಟ್ಟಿರಲಿಲ್ಲ. ನಾನು ಕುಡಿತದ ದಾಸನಾಗಲು ಕಾರಣ ಶೀಲಗೆಟ್ಟ ಹೆಂಡತಿಯ ನಿರಂತರ ಅನೈತಿಕ ಸಂಬಂಧ.''

ರಮ್ಯಲತಾ ತತ್ತರಿಸುತ್ತಿದ್ದಾಳೆ.

ಅವಳಿಗೆ ಆಘಾತವಾಗಿದೆ.

''ಇವತ್ತು ರಾತ್ರಿಗೆ ಸುಖದ ಸಂಬಂಧ ಕೊನೆಗೊಳ್ಳುತ್ತದೆ. ನೀನು ಯಾರಿಗಾಗಿ ಆಗಾಗ ತವರು ಊರಿಗೆ ಹೋಗಿ ನನಗೆ ತಿಳಿಯದಂತೆ ಹಣದ ಸಹಾಯ ಮಾಡುತ್ತಿದ್ದೆಯೋ ಅವನು ಬದುಕಿರೋಲ್ಲ. ಅವನು ತೋಟದ ಮನೇಲಿ ಸತ್ತಿರುತ್ತಾನೆ.''

ಅವಳು ಬೆಚ್ಚಿಬಿದ್ದಳು. ಇಡೀ ಶರೀರ ಕಂಪಿಸಿತು.

''ನೀವು... ನೀವು ಏನು ಹೇಳ್ತಾ ಇದ್ದೀರ?''

''ಬಾಬುರಾಮ್‌ನನ್ನು ಕೊಲೆ ಮಾಡಲು ಬೆಂಗಳೂರಿನಿಂದ ಒಬ್ಬ ಅಲ್ಲಿಗೆ ಹೋಗಿದ್ದಾನೆ. ಇಷ್ಟು ಹೊತ್ತಿಗೆ ಅವನು ಕೊಲೆ ಮಾಡಿರಬಹುದು.''

ಅವರು ಭಾವೋದ್ರೇಕದಿಂದ ನಡುಗುತ್ತಿದ್ದಾಳೆ.

''ನೀವು... ನೀವು ಸತ್ಯ ತಿಳಿಯದೆ ತಪ್ಪು ಮಾಡಿದ್ದೀರ. ನಿಮಗೆ ಅಗತ್ಯ ತಿಳಿಸದೆ ಆಗಾಗ ತವರೂರಿಗೆ ಬಂದು ನಿಮ್ಮ ಸಂಶಯಕ್ಕೆ ಕಾರಣಳಾದೆ. ನಾನು ಆಗಲೇ ಸತ್ಯ ಹೇಳಬೇಕಿತ್ತು.''

''ಸತ್ಯ... ಏನದು?''

''ನೀವು ಅನುಮಾನ ಪಟ್ಟಿರುವಂತೆ ನಾನು ಶೀಲ ಕಳೆದುಕೊಂಡಿಲ್ಲ. ಆಮೇಲೆ ಅಂದರೆ ಮದುವೆಯಾದ ಮೇಲೆ ಸಹ ನಿಮಗೆ ನಿಷ್ಠಳಾಗಿದ್ದೇನೆ. ಬಾಬುರಾಮ್‌ನನ್ನು ಪ್ರೀತಿಸಿದ್ದು ನಿಜ. ನಿಮ್ಮ ಹೆಂಡತಿಯಾದ ಮೇಲೆ ಮಾನಸಿಕವಾಗಿ ಅವನಿಂದ ದೂರಾದೆ.''

ಅವನು ಚಡಪಡಿಸುತ್ತಾ ''ಹಾಗಾದರೆ ಆಗಾಗ ನೀನು ತವರೂರಿಗೆ ಯಾಕೆ ಹೋಗುತ್ತಿದ್ದೆ.''

ಅವಳು ಅಳುತ್ತಾ ''ಬಾಬುರಾಮ್ ನತದೃಷ್ಟ. ಅಪಘಾತದಲ್ಲಿ ತುಂಬಾ ಗಾಯಗಳಾಗಿತ್ತು . ಅವನು... ಅವನು ತನ್ನ ಪುರುಷತ್ವ ಕಳೆದುಕೊಂಡಿದ್ದ.''

ಶಾಕ್... ಗ್ರೇಟ್ ಶಾಕ್!

''ಅವನು ಎರಡು ಕಾಲುಗಳನ್ನು ಕಳೆದುಕೊಂಡಿದ್ದಾನೆ. ಇತ್ತೀಚೆಗೆ ಹೃದಯದ ಕಾಯಿಲೆ ಪ್ರಾರಂಭವಾಗಿತ್ತು . ನನ್ನ ಜೊತೆ ಓದಿದ್ದವನನ್ನು ತೋಟದ ಕೆಲಸಗಾರ ಆಗಿದ್ದ ಅವನಿಗೆ ಚಿಕಿತ್ಸೆ ಕೊಡಿಸಲು ಊರಿಗೆ ಆಗಾಗ ಬರುತ್ತಿದ್ದೆ. ಅವನನ್ನು ಕೊಲೆ ಮಾಡಿಸಿರುವ ನಿಮ್ಮನ್ನು ಕ್ಷಮಿಸಲಾರೆ... ನಿಮ್ಮ ಜೊತೆ ಸಂಸಾರ ಮಾಡಲಾರೆ'' ಎಂದಳು.

ಶ್ರೀನಿವಾಸ ಫೋನ್ ಲಿಂಕ್ ಕಟ್ ಮಾಡಿ ಗೆಳೆಯ ಪ್ರಭುವಿಗೆ ಫೋನ್ ಮಾಡಿದನು.

''ಏ ಪ್ರಭು... ನೀನು... ನೀನು... ಅವನನ್ನು ಕೊಲೆ ಮಾಡಿಲ್ಲ ತಾನೆ?''

ಪ್ರಭು ಮೆಲ್ಲಗೆ ''ನಾನು ಕೊಲೆ ಮಾಡಿಲ್ಲ. ಅಂತಹ ಅವಕಾಶ ನನಗೆ ಸಿಗಲಿಲ್ಲ.''

''ಅರೆ... ನೀನು ಏನು ಹೇಳುತ್ತಿದ್ದೀಯ?''

''ಬಾಬುರಾಮ್ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಅಂತಿಮ ಪತ್ರ ಸಹ ಓದಿದೆ. ಪುರುಷತ್ವ ಕಳೆದುಕೊಂಡಿರುವ ನಾನು, ಅಂಗವಿಕಲನಾಗಿರುವ ಮತ್ತು ಹೃದಯದ ಕಾಯಿಲೆಯಿಂದ ನರಳುತ್ತಿರುವ ನಾನು ರಮ್ಯಲತಾ, ಅವಳ ತಂದೆಗೆ ತುಂಬಾ ತೊಂದರೆ ಕೊಟ್ಟಿದ್ದೇನೆ. ನನ್ನ ಕಾಯಿಲೆ ವಾಸಿ ಮಾಡಿಸಲು ಅವಳ ತಂದೆ ತುಂಬಾ ಸಾಲ ಮಾಡಿದ್ದರು. ನನ್ನ ಈ ಬದುಕು ಬೇರೆಯವರಿಗೆ ಹೊರೆ ಆಗಬಾರದು ಅಂತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನನ್ನ ಸಾವಿಗೆ ಯಾರೂ ಕಾರಣರಲ್ಲ ಅಂತ ಪತ್ರ ಬರೆದು ರುಜು ಮಾಡಿದ್ದಾನೆ. ನಾನು ಹತ್ತು ಲಕ್ಷ ವಾಪಸ್ ಕೊಡ್ತೀನಿ'' ಎಂದು ಹೇಳಿ ಫೋನ್ ಲಿಂಕ್ ಕಟ್ ಮಾಡಿದನು.

☯

# ಹೆಂಡ್ತಿಯ ರೀಲ್ಸ್ ಹುಚ್ಚಾಟದಿಂದ ಗಂಡನಿಗೆ ಶುರುವಾಗಿತ್ತು ಅನುಮಾನ; ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ ಕಿರಾತಕ!



ಇತ್ತೀಚೆಗೆ ರೀಲ್ಸ್ ಹುಚ್ಚಿನಿಂದ ಎಷ್ಟೋ ಸಂಸಾರಗಳು ಹಾಳಾಗುತ್ತಿರುವುದರನ್ನು ಕೇಳಿರುತ್ತೀರಿ, ಅದೇ ರೀತಿ ಇಲ್ಲೊಂದು ಜೋಡಿ ಮಧ್ಯೆ ರೀಲ್ಸ್ ಪ್ರೀತಿ ಬಿರುಗಾಳಿ ಎಬ್ಬಿಸಿದೆ. ಹೌದು, ಎರಡು ವರ್ಷದ ಹಿಂದೆ ಮದ್ವೆ ಆಗಿದ್ದ ಜೋಡಿ ಮಧ್ಯೆ ಇದೀಗ ರೀಲ್ಸ್‌ನಿಂದ ಅನಾಹುತವೇ ಸಂಭವಿಸಿದೆ. ಹೆಂಡ್ತಿ ರೀಲ್ಸ್ ಹುಚ್ಚಿನಿಂದಾಗಿ, ಗಂಡನಿಗೆ ಪತ್ನಿಯ ಮೇಲೆ ಸಂಶಯ ಶುರುವಾಗಿದೆ. ಇದರಿಂದ ಇಬ್ಬರ ನಡುವೆ ವಿರಸ, ಜಗಳಗಳು ಶುರುವಾಗಿವೆ. ಕೊನೆಗೆ ಈ ವ್ಯಕ್ತಿ ಹೆಂಡ್ತಿಯ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾನೆ. ಈ ಭಯಾನಕ ಘಟನೆ ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ನಡೆದಿದೆ.

ಪ್ರಭು ಹಾಗೂ ಪ್ರಿಯಾಂಕಾ ಎರಡು ವರ್ಷಗಳ ಹಿಂದೆ ಪ್ರೀತಿಸಿ ಮದುವೆಯಾಗಿದ್ದರು. ಆತ ಬೆಳಗಾವಿಯವನಾಗಿದ್ದರೆ, ಈಕೆ ಬೆಂಗಳೂರಿನವಳು. ಬೆಂಗಳೂರಲ್ಲೇ ಇಬ್ಬರ ಮಧ್ಯೆ ಪ್ರೇಮಾಂಕುರವಾಗಿತ್ತು. ಹೀಗಾಗಿ ಎರಡು ವರ್ಷದ ಹಿಂದೆ ಇಬ್ಬರೂ ಸಹ ಮದುವೆಯನ್ನೂ ಆಗಿದ್ರು. ನನಗೆ ನೀನು... ನಿನಗೆ ನಾನು... ದೈವ ತಂದ ವರವು ನೀನು ಅಂತಾ ಡ್ಯೂಯಟ್ ಶುರು ಮಾಡಿದ್ರು.

### ಪತ್ನಿ ಮೇಲೆ ಇಲ್ಲಸಲ್ಲದ ಅನುಮಾನ

ಈ ಪ್ರೇಮರಾಗ ಬಹಳ ದಿನ ಉಳಿಯಲೇ ಇಲ್ಲ. ಹೆಂಡ್ತಿಯ ಇನ್‌ಸ್ಟಾಗ್ರಾಂ ಹುಚ್ಚೋ, ಬೇರೆ ಕಾರಣಾನೋ ಗೊತ್ತಿಲ್ಲ, ಆದರೆ, ಪ್ರಭುಗೆ ಪತ್ನಿ ಮೇಲೆ ಇಲ್ಲಸಲ್ಲದ ಅನುಮಾನ. ಹೆಂಡ್ತಿ ಕುಂತ್ರೂ ನಿಂತ್ರೂ ಅನುಮಾನ ಪಡ್ತಿದ್ದ. ಇದೇ ವಿಷಯವಾಗಿ ಗಂಡ ಹೆಂಡ್ತಿ ಮಧ್ಯೆ ನಿತ್ಯ ಗಲಾಟೆ ನಡೀತಾನೇ ಇತ್ತು.

ಎರಡು ವರ್ಷ ಸಂಸಾರ ಮಾಡಿದವರ ಮಧ್ಯೆ ಅನುಮಾನದ ಬಿರುಗಾಳಿ ಎದ್ದಿತ್ತು. ಈ ಅನುಮಾನಕ್ಕೆ ಕಾರಣವೆಂದರೆ ಪ್ರಿಯಾಂಕಾ ಹೋದಲ್ಲೆಲ್ಲಾ ವಿಡಿಯೋ ಮಾಡೋದು, ಅದಕ್ಕೊಂದಿಷ್ಟು ಹಾಡು ಸಿಂಕ್ ಮಾಡ್ಕೊಂಡು ಇನ್‌ಸ್ಟಾಗ್ರಾಂನಲ್ಲಿ ಅಪ್‌ಲೋಡ್ ಮಾಡೋದು. ಬಸ್‌ಸ್ಟಾಂಡ್‌ನಲ್ಲೂ ವಿಡಿಯೋ, ಮೆಟ್ರೋ ಸ್ಟೇಷನ್‌ನಲ್ಲೂ ವಿಡಿಯೋ, ಮನೆಯ ಯಾವ ಮೂಲೆಯನ್ನೂ ಬಿಟ್ಟಿರಲಿಲ್ಲ ಅನಿಸುತ್ತೆ. ಹೋದಲ್ಲೆಲ್ಲಾ ವಿಡಿಯೋ ಮಾಡ್ಕೊಂಡು, ಇನ್‌ಸ್ಟಾಗ್ರಾಂನಲ್ಲಿ ಮಿರಮಿರ ಅಂತಾ ಮಿಂಚುತ್ತಿದ್ದಳು. ಇದಕ್ಕೆ ಒಂದಿಷ್ಟು ಜನ ಲೈಕ್ಸು ಕಮೆಂಟ್ಸು ಬೇರೆ ಮಾಡ್ತಿದ್ರು. ಯಾವಾಗ ಹೆಂಡ್ತಿ ವಿಡಿಯೋ ಮಾಡೋದ್ರಲ್ಲಿ ಬ್ಯುಸಿಯಾದ್ಲೋ ಗಂಡ ಅನಿಸಿಕೊಂಡವನಿಗೆ ಪಿತ್ತನೆತ್ತಿಗೇರಿದೆ. ಯಾಕೋ ಹೆಂಡ್ತಿ ಹಾದಿ ತಪ್ತಿದ್ದಾಳಲ್ಲಾ ಅಂತಾ ಅನುಮಾನ ಪಡೋದಕ್ಕೆ ಶುರು ಮಾಡಿದ್ದಾನೆ.

### ಹೆಂಡ್ತಿ ಪಾಲಿಗೆ ನರರಾಕ್ಷಸನಾದ ಪ್ರಭು

ನಿತ್ಯವೂ ಕುಡಿದು ಬಂದು ಗಲಾಟೆ ಮಾಡ್ತಿದ್ದ ಪ್ರಭು, ಹೆಂಡ್ತಿ ಪಾಲಿಗೆ ನರರಾಕ್ಷಸನಾಗಿದ್ದನು. ಹೀಗಾಗಿ ಪೊಲೀಸ್ ಠಾಣೆ ಮೆಟ್ಟಿಲನ್ನೂ ಏರಿದ್ರು. ಆದರೂ ಸಹ ಪ್ರಭು ಸರಿಯಾಗಿರಲಿಲ್ಲ. ಮೊನ್ನೆಯೂ ಗಂಡ ಹೆಂಡ್ತಿ ಮಧ್ಯೆ ಗಲಾಟೆ ಶುರುವಾಗಿದೆ. ಈ ವೇಳೆ ಏಕಾಏಕಿ ಪ್ರಿಯಾಂಕಾ ಮೇಲೆ ಪೆಟ್ರೋಲ್ ಸುರಿದವ ಬೆಂಕಿ ಕಡ್ಡಿ ಗೀರಿದ್ದಾನೆ. ನಂತರ ತಾನೂ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾನೆ. ಬೆಂಕಿ ಧಗಧಗಿಸೋದಕ್ಕೆ ಶುರು ಮಾಡುತ್ತಿದ್ದಂತೆ ಇಬ್ಬರೂ ಮನೆಯಿಂದ ಹೊರಗೆ ಓಡಿ ಬಂದಿದ್ದಾರೆ. ಇವರನ್ನ ನೋಡಿದ ಸ್ಥಳೀಯರು ಕೂಡಲೇ ಬೆಂಕಿ ಆರಿಸಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದರು.

ಗಂಡ ಹೆಂಡ್ತಿ ಇಬ್ಬರಿಗೂ ವಿಕ್ಟೋರಿಯಾ ಆಸ್ಪತ್ರೆಯ ಬರ್ನ್ ವಾರ್ಡ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಪ್ರಿಯಾಂಕಾ ದೇಹ ಶೇಕಡಾ 40ರಷ್ಟು ಸುಟ್ಟು ಹೋಗಿದ್ರೆ,



ಪ್ರಭುಗೆ ಶೇಕಡಾ 7ರಷ್ಟು ಸುಟ್ಟಗಾಯಗಳಾಗಿವೆ. ಹೀಗಾಗಿ ಪ್ರಿಯಾಂಕಾ ಬದುಕೋದು ಅನುಮಾನವೇ ಅಂತಾ ಹೇಳಲಾಗುತ್ತಿದೆ. ಒಟ್ಟಿನಲ್ಲಿ ಪ್ರೀತಿಸಿ ಮದುವೆಯಾದವರು ಅನುಮಾನದ ಬೆಂಕಿಯಲ್ಲಿ ಬೆಂದು ಹೋಗಿದ್ದಾರೆ.

# ಬುರ್ಖಾಧಾರಿ ಅಕ್ಕ-ತಂಗಿಯರಿಂದ ಸರಗಳ್ಳತನ; ಮೂವರು ಕಿಲಾಡಿ ಕಳ್ಳಿಯರು ಅರೆಸ್ಟ್!

ಬುರ್ಖಾ ಧರಿಸಿಕೊಂಡು ಬಸ್‌ಗೆ ಹತ್ತಿದ್ರೆ ಸಾಕು ಆ ಮೂರ್‍ನಾಲ್ಕು ಮಂದಿ ಮಹಿಳೆಯರು ಬಸ್‌ನಲ್ಲಿ ಮಹಿಳೆಯರ ಕತ್ತಲ್ಲಿರೋ ಚಿನ್ನದ ಸರ ಹಾಗೂ ಬ್ಯಾಗ್‌ಗಳಲ್ಲಿರೋ ಕ್ಯಾಷ್ ಎಗರಿಸದೇ ಬಸ್‌ನಿಂದ ಕೆಳಗೆ ಇಳಿಯುತ್ತಿರಲಿಲ್ಲ, ಇಂತಹ ಖತರ್ನಾಕ್ ಬುರ್ಖಾಧಾರಿ ಮೂವರು ಕಿಲಾಡಿ ಕಳ್ಳಿಯರನ್ನ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ಪೊಲೀಸರು ಬಂಧಿಸಿದ್ದಾರೆ.

ಅಂದಹಾಗೆ ಕಲಬುರಗಿ ಮೂಲದ ರೇಖಾ ಬಾಯಿ, ಕರೀನಾ, ರೋಜಾ ಬಂಧಿತರಾಗಿದ್ದು ಪುಷ್ಪಾ ತಲೆಮರೆಸಿಕೊಂಡಿದ್ದಾಳೆ. ಅಂದಹಾಗೆ ಈ ನಾಲ್ವರಲ್ಲಿ ಪುಷ್ಪಾ ಹಾಗೂ ರೇಖಾ ಅಕ್ಕತಂಗಿಯರಾಗಿದ್ದು, ರೋಜಾ ಹಾಗೂ ಕರೀನಾ ಸಹ ಸಹೋದರಿಯರಾಗಿ



ದ್ದಾರೆ. ನಾಲ್ವರು ಒಂದೇ ಕುಟುಂಬದವರಾಗಿದ್ದು ಬಸ್ ನಿಲ್ದಾಣ ಜನಸಂದಣಿ ಪ್ರದೇಶಗಳಲ್ಲಿ ಕಳವು ಮಾಡೋದೆ ಇವರ ಕಾಯಕವಾಗಿತ್ತು.

ಕಳೆದ ನವೆಂಬರ್ 16ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ಬಸ್ ನಿಲ್ದಾಣದಲ್ಲಿ ಶಾಂತಕುಮಾರಿ ಎಂಬಾಕೆ ಬೆಂಗಳೂರು ಬಸ್ ಹತ್ತುವ ಸಮಯದಲ್ಲಿ ಆಕೆಯ ಕತ್ತಿನಲ್ಲಿದ್ದ 50 ಗ್ರಾಂ ತೂಕದ 2 ಎಳೆ ಚಿನ್ನದ ಸರ ಕಳವು ಮಾಡಿದ್ರು. ಅದೇ ದಿನ ರತ್ನಮ್ಮ ಎಂಬಾಕೆಯ ಬ್ಯಾಗ್‌ನಲ್ಲಿದ್ದ 1 ಲಕ್ಷ ಹಣ ಸಹ ಎಗರಿಸಿ ಎಸ್ಕೇಪ್ ಆಗಿದ್ರು. ಈ ಸಂಬಂಧ ಎರಡು ಪ್ರಕರಣಗಳ ದೂರು ಪಡೆದ ಪೊಲೀಸರು ಸಿಸಿಟಿವಿಗಳನ್ನ ಪರಿಶೀಲನೆ ಮಾಡಿದಾಗ ನಾಲ್ವರು ಬುರ್ಖಾಧಾರಿ ಮಹಿಳೆಯರ ಮೇಲೆ ಅನುಮಾನ ಮೂಡಿತ್ತು. ನಂತರ ಇದೇ ಗೌರಿಬಿನದೂರು ಬಸ್ ನಿಲ್ದಾಣದಲ್ಲಿ ಕಳೆದ ಮೂರು ದಿನಗಳ ಹಿಂದೆ ಮತ್ತೆ ಕಳ್ಳತನಕ್ಕೆ ಹೊಂಚು ಹಾಕುತ್ತಿದ್ದಾಗ ರೆಡ್ ಹ್ಯಾಂಡಾಗಿ ಪೊಲೀಸರು ಮಹಿಳೆಯರನ್ನ ಬಂಧಿಸಿದ್ದಾರೆ. ಇನ್ನೂ ಸಿಸಿಟಿವಿ ಪರಿಶೀಲನೆ ವೇಳೆ ಮಹಿಳೆ ಬುರ್ಖಾ ಮೇಲೆ ಹಾಕಿದ್ದ ವೇಲ್ ಗಮನಿಸಿದ್ದ ಪೊಲೀಸರು ಮತ್ತೆ ಅದೇ ವೇಲ್ ಧರಿಸಿ ಮಹಿಳೆ ಇರೋದನ್ನ ಕಂಡು ಅನುಮಾನಗೊಂಡು ಬಂಧಿಸಿದ್ರು. ಬಳಿಕ ವಿಚಾರಣೆ ವೇಳೆ ಸತ್ಯ ಬಾಯ್ಬಿಟ್ಟಿದ್ದಾರೆ. ಕಳ್ಳತನವನ್ನೇ ವೃತ್ತಿಯಾಗಿಸಿಕೊಂಡಿದ್ದ ಈ ಕಳ್ಳಿಯರು ರಾಜ್ಯದ ನಾನಾ ಕಡೆ ಕಳ್ಳತನ ಮಾಡಿದ್ದಾರೆ. ಇನ್ನೂ ಬಂಧಿತರಿಂದ ಕಳವು ಮಾಡಿದ್ದ ಚಿನ್ನ ಹಾಗೂ ನಗದು ವಶಕ್ಕೆ ಪಡೆಯಲಾಗಿದೆ.

# ...ಒಬ್ಬ ಮಸಣಕ್ಕೆ, ಇನ್ನಿಬ್ಬರು ಜೈಲಿಗೆ!

9 ☞ ತಿಳಿಸಿರುವಂತೆ ಆರೋಪಿಗಳೊಂದಿಗೆ ಕೃತ್ಯ ನಡೆದ ಸ್ಥಳವಾದ ಕೋಲಾರ-ಬೇತಮಂಗಲ ಮುಖ್ಯರಸ್ತೆಯಿಂದ ಹರಟಿ ಗ್ರಾಮದ ಕಡೆ ಹೋಗುವ ರಸ್ತೆಯ ಪಕ್ಕದಲ್ಲಿ ಸರ್ಕಾರಿ ಅರಣ್ಯ ಪ್ರದೇಶದಲ್ಲಿ ಪಂಚರ ಸಮಕ್ಷಮದಲ್ಲಿ ಮಹಜರ್ ನಡೆಸಿದ ನಂತರ ಟಮಕ ಬಳಿ ಇರುವ ಕಾನಿಷ್ಕ ಬಾರ್ ಅಂಡ್ ರೆಸ್ಟೋರೆಂಟ್ ಮತ್ತು ಕೋಲಾರ-ಬಂಗಾರಪೇಟೆ ರಸ್ತೆಯಲ್ಲಿರುವ ಎಸ್.ಎಸ್. ಬಾರ್ ಅಂಡ್ ರೆಸ್ಟೋರೆಂಟ್‌ಗೆ ಆರೌಪಿಗಳಾದ ಲಕ್ಷ್ಮಣ್ ಮತ್ತು ಗಣೇಶನನ್ನು ಕರೆದುಕೊಂಡು ಹೋಗಿ ಪಂಚರ ಸಮಕ್ಷಮದಲ್ಲಿ ಸ್ಥಳದ ಮಹಜರ್ ನಡೆಸಿದ ಮೇಲೆ ಬಾರ್‌ಗಳಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾದ ಡಿವಿಆರ್‌ನ್ನು ಮುಂದಿನ ತನಿಖೆಯ ಸಲುವಾಗಿ ಪಂಚನಾಮೆಯ ಮುಖಾಂತರ ವಶಕ್ಕೆ ಪಡೆದುಕೊಂಡಿದ್ದು, ನಂತರ ಆರೋಪಿಗಳು ಕೃತ್ಯಕ್ಕೆ ಬಳಕೆ ಮಾಡಿರುವ ಟಿಎನ್-29 ಎಲ್-0513 ಸಂಖ್ಯೆಯ ದ್ವಿಚಕ್ರ ವಾಹನವನ್ನು ಬಸವನತ್ತದಲ್ಲಿನ ಬಾಡಿಗೆ ರೂಂ ಬಳಿ ವಶಕ್ಕೆ ಪಡೆದುಕೊಂಡ ಪೊಲೀಸರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಗಾರೆಕೆಲಸ ಮಾಡಿಕೊಂಡು ಬರುವ ಹಣದಲ್ಲಿ ಮೋಜು-ಮಸ್ತಿ ಮಾಡುತ್ತಾ ಸುಖವಾಗಿ ಕಾಲ ಕಳೆಯುತ್ತಿದ್ದ ಸ್ನೇಹಿತರ ನಡುವೆ ಕುಡಿದ ನಶೆಯಲ್ಲಿ ತಾಯಿಯನ್ನು ಅವಾಚ್ಯ ಶಬ್ದಗಳಿಂದ ಬೈದನೆಂಬ ಕಾರಣಕ್ಕೆ ಕೊಲೆಯಲ್ಲಿ ಅಂತ್ಯ ಕಂಡು ಒಬ್ಬ ಸ್ನೇಹಿತ ಮಸಣ ಸೇರಿದರೆ ಇನ್ನಿಬ್ಬರು ಜೈಲಿನಲ್ಲಿ ಮುದ್ದೆ ಮುರಿಯುವಂತಾಯಿತು. ವಾರಸುದಾರರಿಲ್ಲದೆ ಅನಾಥ ಶವವಾಗಿ ಮಣ್ಣು ಸೇರಬೇಕಾಗಿದ್ದ ಕೊಲೆ ಪ್ರಕರಣವನ್ನು ಭೇದಿಸಿ ಆರೋಪಿಗಳ ಎಡೆಮುರಿ ಕಟ್ಟುವಲ್ಲಿ ಯಶಸ್ವಿಯಾದ ಕೋಲಾರ ಗ್ರಾಮಾಂತರ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರನ್ನು ಕೋಲಾರ ಜಿಲ್ಲಾ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರನ್ನು ಕೋಲಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ. ನಿಖಿಲ್‌ರವರು ಶ್ಲಾಘಿಸಿ, ಅಭಿನಂದಿಸಿದ್ದಾರೆ.



ತನಿಖಾ ಸಹಾಯಕ ಮಂಜುನಾಥ ಆರಾಧ್ಯ, ಸಿಬ್ಬಂದಿಗಳಾದ ಸತೀಶ್, ಆಂಜಿ, ನವೀನ್



ರಾಘವೇಂದ್ರ, ಸೈಯದ್ ಸಾಧಿಕ್ ಪಾಷ, ಮುರುಳಿ ಹಾಗೂ ರಾಜೇಶ್

# ವಿಧವೆಗಾಗಿ ಸ್ನೇಹಿತನನ್ನೆ ಎತ್ತಿದ ಪ್ರಾಣ ಸ್ನೇಹಿತರು!

7 ☜

ಲಾಠೀ ಎತ್ತಿ ವಿಚಾರಣೆಗೆ ಮುಂದಾಗ್ತಿದ್ದಂತೆ ಸರ್... ಸುನೀಲ್ ಕೊಂದಾವ್ರು ನಾವರೀ ಅಂತ ತಪ್ಪೊಪ್ಪಿಗೆ ನೀಡಿದ್ದರು. ಕೊಲೆ ಹೇಗೆ ಮಾಡಿದ್ವಿ ಅನ್ನೋ ಅಸಲಿ ವಿಷಯವನ್ನ ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದರು. ಕೊಲೆ ಮಾಡಿ ತಾವೇ ವಿಡಿಯೋ ಮಾಡಿದ್ದು ಅನ್ನೋದನ್ನು ಒಪ್ಪಿಕೊಂಡಿದ್ದರು

ಯಸ್, ಇಡೀ ಕ್ರೈಂ ಕಹಾನಿಯ ಅಸಲಿ ಸ್ಟೋರಿ ಶುರುವಾಗೋದೆ ಇಲ್ಲಿಂದ. ಸುನೀಲ್‌ನಿಗೆ ಪ್ರಾಣಕ್ಕಿಂತ ಹೆಚ್ಚಾಗಿದ್ದ ಸ್ನೇಹಿತರೇ ಪ್ರಾಣತೆಗೆದಿದ್ದರು. ಸುನೀಲ್ ಹಾಗೂ ಸಂತೋಷ ಮೊದಲಿನಿಂದಲು ಪ್ರಾಣ ಸ್ನೇಹಿತರು. ಆಟೋ ಹೊಡೆಯುತ್ತಿದ್ದ ಇಬ್ಬರು ಖಾಸಾ ಖಾಸಾ ಆಗಿದ್ದರು. ಆದ್ರೆ ಈ ಮಧ್ಯೆ ಕಳೆದ 2 ವರ್ಷಗಳ ಹಿಂದೆ ವಿಧವೆಯೊಬ್ಬಳು ಇಬ್ಬರಿಗೂ ಪರಿಚಯವಾಗಿದ್ದಳು. ಹೀಗೆ ಪರಿಚಯ ಆದ ಆಂಟಿ ಇಬ್ಬರನ್ನು ಬುಟ್ಟಿಗೆ ಹಾಕಿಕೊಂಡು ಪುಂಗಿ ಊದಿ ನಾಗರಹಾವಿನಂತೆ ಆಡಿಸುತ್ತಿದ್ದಳು. ಆದ್ರೆ ಕೆಲ ದಿನಗಳ ಹಿಂದಷ್ಟೇ ಸಂತೋಷಗೆ ಸುನೀಲ್ ಆಂಟಿ ಜೊತೆಗೆ ಕ್ಲೋಸ್ ಆಗಿರೋ ವಿಷಯ ಗೊತ್ತಾಗಿತ್ತು. ಹೀಗೆ ಬಿಟ್ರೆ ಸುನೀಲ್ ಆಂಟಿಯನ್ನ ಹಾರಿಸಿಕೊಂಡು ಹೋಗ್ತಾನೆ ಅಂತಾ ಅನಿಸೋಕೆ ಶುರು ಮಾಡಿತ್ತ ಅಂತಾ ಕಾಣಿಸುತ್ತೆ. ಆಗಲೇ ನೋಡಿ ವಿಧವೆ ಆಂಟಿಗಾಗಿ ಪ್ರಾಣ ಸ್ನೇಹಿತನ ಬರ್ಬರ ಹತ್ಯೆಗೆ ಸಂಚು ರೂಪಿಸಿದ್ದ ಸಂತೋಷ. ಇದಕ್ಕೆ ಇನ್ನೊಬ್ಬ ಮುದುಕಪ್ಪ ಅನ್ನೋ ಸ್ನೇಹಿತನನ್ನ ಜೊತೆ ಮಾಡಿಕೊಂಡಿದ್ದ..



**ಜಮೀನೊಂದೊಕ್ಕೆ ಕೊಂಡೊಯ್ದು ಕತ್ತು ಹಿಸುಕಿದ್ದ..!**

ಹೇಗಾದ್ರೂ ಮಾಡಿ ಸುನೀಲ್ ಹತ್ಯೆ ಮಾಡಲೇ ಬೇಕು ಎಂದು ನಿರ್ಧರಿಸಿದ್ದ ಸಂತೋಷ, ಸುನೀಲ್‌ನನ್ನ ಬಸವನ ಬಾಗೇವಾಡಿಯ ವಿಮೋಚನಾ ಎನ್ನುವ ಬಾರ್ ಒಂದಕ್ಕೆ ಕರೆದೊಯ್ದಿದ್ದ. ಇದೇ ಬಾರಲ್ಲಿ ಮುದುಕಪ್ಪ ಸಹ ಜಾಯ್ನ್ ಆಗಿದ್ದ. ಇಲ್ಲಿ ಸುನೀಲ್‌ಗೆ ಕಂಠ ಪುರ್ತಿ ಕುಡಿಸಿ ಮತ್ತಷ್ಟು ಮದ್ಯವನ್ನ ಪಾರ್ಸಲ್ ತೆಗೆದುಕೊಂಡಿದ್ದ. ಊರ ಹೊರಗಿನ ಜಮೀನೊಂದಕ್ಕೆ ಕರೆದೋಯ್ದು ಸುನೀಲ್ ಆತ್ಮಕ್ಕೆ ವಿಮೋಚನೆ ನೀಡಲು ವಿಮೋಚನಾ ಬಾರ್‌ನಲ್ಲೆ ಪ್ಲಾನ್ ಫೈನಲ್ ಮಾಡಿದ್ದ ಸಂತೋಷ.. ಅಂದುಕೊಂಡಂತೆ ಹಗ್ಗದ ಸಮೇತವಾಗಿ ಸುನೀಲ್ ನನ್ನ ಜಮೀನಿಗೆ ಕರೆತಂದ ಸಂತೋಷ ಆಂಟಿಯ ಜೊತೆಗೆ ಮಲಗಿದ್ದೀಯಾ? ಅಂತಾ ವಿಚಾರಿಸಿದ್ದ. ಕುಡಿದ ನಶೆಯಲ್ಲಿ ನಾನು ಆಕೆಯ ಜೊತೆಗೆ ಮಲಗಿಲ್ಲ ಆಕೆಯನ್ನ ಸಿನ್ಸಿಯರ್ ಆಗಿ ಲವ್ ಮಾಡ್ತೀದ್ದೀನಿ ಎಂದಿದ್ದ ಸುನೀಲ್. ಹಾಗಾದ್ರೆ ನೀನು ಸಾಯಲೇಬೇಕು ಅಂತ ಎಂದ ಸಂತೋಷ ಕುತ್ತಿಗೆಗೆ ಹಗ್ಗ ಹಾಕಿ ಕಾಲಿಂದ ಕುತ್ತಿಗೆ ಮೇಲಿಟ್ಟು ಸಾಯಿಸಿದ್ದಾನೆ. ಬಳಿಕ ಇದೆಲ್ಲವನ್ನ ತನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದಾನೆ.

ಹೀಗೆ ರೆಕಾರ್ಡ್ ಮಾಡಿಕೊಂಡ ಕೊಲೆಯ ದೃಶ್ಯವನ್ನ ಸಂತೋಷ ಮಿಸ್ ಆಗಿ ತನ್ನದೆ ಗೆಳೆಯನಿಗೆ ಕಳಿಸಿದ್ದಾನೆ. ದೃಶ್ಯಗಳನ್ನ ಕಣ್ಣಾರೆ ಕಂಡ ಸಂತೋಷನ ಗೆಳೆಯ ಭಯಬಿದ್ದು ಬಸವನ ಬಾಗೇವಾಡಿ ಠಾಣೆಗೆ ತೆರಳಿ ಪೊಲೀಸರಿಗೆ ತೋರಿಸಿದ್ದಾನೆ. ತಡ ಮಾಡದ ಪೊಲೀಸರು ಸಂತೋಷ ಹಾಗೂ ಮುದುಕಪ್ಪನನ್ನ ಬಂಧಿಸಿದ್ದಾರೆ.. ಇತ್ತ ಕುಟುಂಬಸ್ಥರಿಂದಲೂ ದೂರು ಪಡೆದಿದ್ದಾರೆ

ಇನ್ನು ತಂಗಿ ಮದುವೆ ಮಾಡಬೇಕು ಎಂದು ಕನಸು ಕಂಡು, ತಂಗಿಯ ಮದುವೆಯಲ್ಲಿ ಪೀಪೀ ಊದಿ ಸಂಭ್ರಮಿಸಬೇಕು ಎಂದಿದ್ದ ಸುನೀಲ್ ಈಗ ಮಸಣ ಸೇರಿದ್ದಾನೆ. ಅಣ್ಣನ ಬಗ್ಗೆ ತಂಗಿ ಅನಿತಾ ಕಣ್ಣೀರು ಹಾಕುತ್ತಲೆ ಹೇಳಿದ್ದಿಷ್ಟು..!

ಅತ್ತ ಮಗನು ಸತ್ತ, ಇತ್ತ ಮಗಳ ಮದುವೆಯು ನಿಂತಿತಲ್ಲ ಅಂತಾ ತಂದೆ ಶಂಕ್ರಪ್ಪ ಗೋಳಾಡುತ್ತಿದ್ದಾನೆ.. ಕೊನೆಯ ಪಕ್ಷ ಮಗನನ್ನ ಕೊಂದವರಿಗೆ ಶಿಕ್ಷೆಯಾಗಲಿ ಅಂತಾ ಆಕ್ರೋಶ ಹೊರಹಾಕ್ತಿದ್ದಾರೆ..

ಅತ್ತ ಮಗಳ ಮದುವೆಗೆ ದುಡ್ಡು ಕೊಡಿಸ್ತೀನಿ ಅಂತ ಓಡಾಡ್ತಿದ್ದ ಮಗನು ಸತ್ತ... ಇತ್ತ ಮಗಳ ಮದುವೆಯು ನಿಂತಿದೆ. ಸುನೀಲ್ ತಂದೆಗೆ ಈಗ ಆಕಾಶವೇ ತಲೆ ಮೇಲೆ ಬಿದ್ದ ಹಾಗಾಗಿದೆ. ಸುನೀಲ್ ಭಜಂತ್ರಿ ಹತ್ಯೆ ಬಳಿಕ ಮನೆಗೆ ಭೇಟಿ ನೀಡಿರೋ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಭೇಟಿ ದಲಿತ ದೌರ್ಜನ್ಯ ಕಾಯ್ದೆ ಅಡಿಯಲ್ಲಿ ಪರಿಹಾರ ನೀಡಿದ್ದಾರೆ.. ಆದ್ರೆ ಒಂದು ಹೆಣ್ಣಿಗಾಗಿ ಪ್ರಾಣ ಸ್ನೇಹಿತರೆ ಕುಚುಕು ಗೆಳೆಯನ ಪ್ರಾಣ ತೆಗೆದಿದ್ದಂತು ದುರಂತವೇ ಸರಿ.. ☯

# ಅಪ್ಪನ ಕೊಂದ ಪಾಪಿ ಮಗ!

2 ☜

ಅಜಯ್‌ಕುಮಾರ್ ಮತ್ತು ತಂಡ ತನಿಖೆ ನಡೆಸಿದ್ದು ನೇರವಾಗಿ ಸ್ಥಳಕ್ಕೆ ಬಂದು ಪರಿಶೀಲಿಸಿದಾಗ ಅಲ್ಲಿ ಅಪಘಾತ ನಡೆದಿದ್ದಕ್ಕೆ ಯಾವುದೇ ಪುರಾವೆಗಳು ಕಂಡು ಬರಲಿಲ್ಲ, ಡಿಕ್ಕಿ ಹೊಡೆದಿದೆ ಎನ್ನುವುದಕ್ಕೆ ವಾಹನದ ಟಯರ್ ಹರಿದ ಸಾಕ್ಷಿಗಳು ಕಾಣಿಸಲಿಲ್ಲ, ಹೀಗಾಗಿ ಅನುಮಾನ ಶುರುವಾಗಿದೆ. ಪೊಲೀಸರು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಕಾರ್ಯಾಚರಣೆ ಆರಂಭಿಸಿದ್ದಾರೆ.



ಸರ್ಕಲ್ ಇನ್‌ಸ್ಪೆಕ್ಟರ್ ದೀಪಕ್, ಅಜಯ್ ಕುಮಾರ್, ಸಿಬ್ಬಂದಿ ಮುತ್ತುರಾಜು, ಮಹದೇವ್, ಪ್ರದೀಪ್, ಸುರೇಶ್, ಗಿರೀಶ್ ಮೊದಲಾದವರ ತಂಡ ಪ್ರಕರಣದ ಸತ್ಯಾಸತ್ಯತೆಯ ತನಿಖೆಗೆ ಮುಂದಾಗಿದೆ. ಅಪಘಾತ ನಡೆದಿದೆ ಎನ್ನಲಾದ ಸ್ಥಳವನ್ನು ಪರಿಶೀಲಿಸಿದ ವೇಳೆ ಅಲ್ಲಿ ಪಾಂಡು ಹೇಳಿದಂತೆ ಯಾವುದೋ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆ ಎಂಬುದಕ್ಕೆ ಯಾವುದೇ ಕುರುಹು ಅಲ್ಲಿ ಕಾಣಿಸಲಿಲ್ಲ, ಮೃತದೇಹ ಬಿದ್ದಿದ್ದ ಸ್ಥಳವು ರಸ್ತೆ ಅಂಚಿನಿಂದ ಸುಮಾರು 15 ಅಡಿಯಷ್ಟು ದೂರದಲ್ಲಿರುವುದು ಕಂಡು ಬಂದಿತ್ತು. ಜತೆಗೆ ರಸ್ತೆ ಪಕ್ಕ ಮತ್ತು ಫುಟ್‌ಪಾತ್ ಮೇಲೆ ಯಾವುದೇ ವಾಹನ ಓಡಾಡಿದ ಕುರುಹು ಇರಲಿಲ್ಲ,

ಶವ ಬಿದ್ದಿದ್ದ ಸ್ಥಳದಲ್ಲಿ ಅಣ್ಣಪ್ಪ ಕೊಂಡೊಯ್ಯುತ್ತಿದ್ದ ಕಬ್ಬಿಣದ ಪಟ್ಟಿ, ಕಬ್ಬಿಣದ ಕೊಳವೆ, ಕಬ್ಬಿಣದ ಚಿಮುಟ ಮತ್ತು ಚಪ್ಪಲಿ, ಎಲೆಅಡಿಕೆ ಚೀಲ, ಮದ್ಯದ ಪ್ಯಾಕೆಟ್ ಬಿಟ್ಟರೆ ಅಲ್ಲಿ ಅಪಘಾತ ನಡೆದಿದೆ ಎನ್ನುವುದಕ್ಕೆ ಯಾವುದೇ ಸಾಕ್ಷಿಗಳು ಇರಲಿಲ್ಲ, ಹೀಗಾಗಿ ಮೇಲ್ನೋಟಕ್ಕೆ ಕೊಲೆ ಮಾಡಿ ತಂದು ಎಸೆದಂತೆ ಕಾಣಿಸುತ್ತಿತ್ತು. ಹೀಗಾಗಿ ಪೊಲೀಸರು ಪಾಂಡವನ್ನೇ ವಿಚಾರಿಸಲು ಆರಂಭಿಸಿದ್ದರು ಈ ವೇಳೆ ಆತ ನೀಡುತ್ತಿದ್ದ ಉತ್ತರಗಳು ಒಂದಕ್ಕೊಂದು ತಾಳೆಯಾಗುತ್ತಿರಲಿಲ್ಲ, ಹೀಗಾಗಿ ಪೊಲೀಸರಿಗೆ ದೂರು ನೀಡಿದ ಮಗ ಪಾಂಡು ಮೇಲೆಯೇ ಸಂಶಯ ಬರುವಂತೆ ಮಾಡಿತ್ತು. ಹೀಗಾಗಿ ಅವತ್ತಿನ ಆ ಮಾರ್ಗದಲ್ಲಿದ್ದ ಸಿಸಿಟಿವಿಯನ್ನು ಪರಿಶೀಲಿಸಿದರು. ಆಗ ಪಾಂಡು ತನ್ನ ಕಾರಿನಲ್ಲಿ ಆ ಮಾರ್ಗದಲ್ಲಿ ತೆರಳಿದ ದೃಶ್ಯಗಳು ಕಂಡು ಬಂದಿದ್ದವು.

ಪೊಲೀಸರಿಗೆ ಇಷ್ಟೆಲ್ಲ ಸಾಕ್ಷಿ ಸಿಕ್ಕಿದ ಮೇಲೆ ಇದರಲ್ಲಿ ಪಾಂಡುವಿನ ಕೈವಾಡ ಇರುವುದು ಸ್ಪಷ್ಟವಾಗಿತ್ತು. ಹೀಗಾಗಿ ಅವನನ್ನು ವಶಕ್ಕೆ ಪಡೆದು ಪೊಲೀಸ್ ಸ್ಟೈಲ್ ನಲ್ಲಿ ವಿಚಾರಣೆ ನಡೆಸಿದಾಗ ಇನ್ಸೂರೆನ್ಸ್ ಹಣದ ವಿಚಾರಕ್ಕಾಗಿ ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿದ್ದಾನೆ. ಪೊಲೀಸರು ಆತನನ್ನು ಜೈಲಿಗೆ ಕಳಿಸಿದ್ದಾರೆ. ಅಪ್ಪನ ಕೊಂದು ಅವರ ಮೇಲಿನ ಇನ್ಸೂರೆನ್ಸ್ ಹಣದಿಂದ ಜಾಲಿಯಾಗಿ ಬದುಕಬಹುದೆಂದುಕೊಂಡಿದ್ದ ಪಾಂಡು ಜೈಲ್ ಸೇರಿದ್ದಾನೆ. ಈ ನಡುವೆ ತಂದೆ ಅಣ್ಣಪ್ಪನ ಸಾವು, ನಂತರದ ಬೆಳವಣಿಗೆಯಿಂದ ಮನನೊಂದ ಹಿರಿಯ ಮಗ ಧರ್ಮನೂ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಒಟ್ಟಾರೆ ಪಾಂಡು ಮಾಡಿದ ಕೃತ್ಯಕ್ಕೆ ಎರಡು ಬಲಿಯಾಗಿದೆ. ಯಾರಿಗೂ ಇಂತಹ ಮಕ್ಕಳು ಹುಟ್ಟದಿರಲಿ... ☯

5 ☜

ರವಾನಿಸಿದ್ದು ಘಟನಾ ಸ್ಥಳಕ್ಕೆ ಹಿರಿಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ ಬಸವರಾಜೇಶ್ವರಿ ದಾಖಲಾಗಿದ್ದ ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಪಡೆಸಿ ಸೂಕ್ತ ಕ್ರಮವಹಿಸಿ ಅಂತ ಮಾರ್ಗದರ್ಶನ ನೀಡಿದರು.

**ಆರೋಪಿ ಬಂಧನ!**

ಘಟನೆಗೆ ಸಂಬಂಧಿಸಿದ ಹೇರ್ ಡ್ರೈಯರ್ ಬಸವರಾಜೇಶ್ವರಿಗೆ ಪಾರ್ಸಲ್ ಕಳಿಸಿದವರಾರು? ಅದು ಹೇಗೆ ಬಂದಿತು? ತನಿಖೆಗೆ ಇಳಿದ ಪೊಲೀಸರು ಇದರಿಂದ ಒಂದು ಸ್ಫೋಟಕ ವಿಷಯ ತಿಳಿದು ಪೊಲೀಸರೇ ದಂಗಾಗಿದ್ದರು. ಈ ಘಟನೆಗೆ ಸಂಬಂಧಿಸಿದಂತೆ ಬಸವರಾಜೇಶ್ವರಿಯ ಪ್ರೇಮಿ ಸಿದ್ದಪ್ಪನ ಕೈವಾಡ ಇರುವುದು ಬೆಳಕಿಗೆ ಬಂದಿದ್ದು, ಆತನನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಸತ್ಯ ಬಾಯಿ ಬಾಯಿ ಬಿಟ್ಟನು. ತಾನು ಪ್ರೀತಿಸುತ್ತಿದ್ದ ಗೆಳತಿ ಬಸವರಾಜೇಶ್ವರಿ ತನ್ನಿಂದ ದೂರ ಮಾಡಿದ್ದು, ಇದರಿಂದ ನಾನು ತುಂಬಾ ನೋವಾಗಿದ್ದು ಆಕೆಯನ್ನು ಮುಗಿಸುವ ಸಲುವಾಗಿ ತಾನು 16 ವರ್ಷದಿಂದ ಕೆಲಸ ಮಾಡುತ್ತಿದ್ದ ಕುಷ್ಟಗಿ ತಾಲೂಕಿನ ಹನುಮಸಾಗರ ಬಳಿ ಇರುವ ಡಾಲಿನ್ ಇಂಟರ್ ನ್ಯಾಷ್ಯನಲ್ ಗ್ರ್ಯಾನೆಟ್‌ನಲ್ಲಿ ಹೋಗಿ ವಿಚಾರ ಮಾಡಿದ್ದು, ಈ ವೇಳೆ ಗ್ರ್ಯಾನೈಟ್ ಕಲ್ಲು ಒಡೆಯುಲು ಬಳಸುವ ಡಿನೋನೇಟರ್ ಬಳಸಿ ಬಸವರಾಜೇಶ್ವರಿ ಕೊಲೆ ಮಾಡಬೇಕೆಂದು ಒಂದು ಹೇರ್ ಡ್ರೈಯರ್ ಖರೀದಿಸಿ ಅದರಲ್ಲಿ ಸ್ಫೋಟಕ ವಸ್ತು ಅಳವಡಿಸಿ ಕೊಲೆ ಮಾಡುವ ಉದ್ದೇಶದಿಂದ ಆಕೆಯ ವಿಳಾಸಕ್ಕೆ ಆ ಹೇರ್ ಡ್ರೈಯರನು ಕಳಿಸಿದ್ದು ನಂತರ ಆಕೆಯು ಅದರಿಂದ ಸಾಯಲಿಲ್ಲ ಅಂತಾ ಒಪ್ಪಿಕೊಂಡಿದ್ದು, ಸದರಿ ಆರೋಪಿಯಾದ ಸಿದ್ದಪ್ಪ ಶರಣಪ್ಪ ಹುಡೆದಮನಿ (35) ಸಾ|| ಪುರತಗೇರಿ ಕೊಪ್ಪಳ ಜಿಲ್ಲಾನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಹೆಚ್ಚಿನ ತನಿಖೆ ಮುಂದುವರಿಸಿದ್ದಾರೆ. ☯




ಹೆಚ್‌ಸಿಗಳಾದ ಗಣೇಶ್ ಪವಾರ್, ಬಸವರಾಜ್ ಕಟಗಿ


## ನಿಮ್ಮ ಸುತ್ತಮುತ್ತಲಿನ ಸುದ್ದಿ ಹಾಗೂ ಅನ್ಯಾಯ-ಭ್ರಷ್ಟಾಚಾರಗಳನ್ನು ತಿಳಿಸಿ!

ಕರ್ನಾಟಕ ರಾಜ್ಯದ ಮಹಾಜನತೆಗೆ ಇದೋ ಒಂದು ಸುವರ್ಣಾವಕಾಶ. ನಿಮ್ಮ ಸುತ್ತಮುತ್ತ ನಡೆಯುವ ಅನ್ಯಾಯ, ಅಕ್ರಮ, ಅನಾಚಾರ, ಭ್ರಷ್ಟಾಚಾರಗಳನ್ನು ಸಂಕಟ ಪಡುತ್ತಿದ್ದೀರಾ? ಹಾಗಾದರೆ; ಈ ಕೂಡಲೇ ಸವಿವರ ಸಮೇತ ಅವುಗಳನ್ನು ನಮ್ಮ ಕಛೇರಿಗೆ ಕಳುಹಿಸಿ! ನಿಮ್ಮ ಹೆಸರು, ವಿಳಾಸ, ಮೊಬೈಲ್ ನಂಬರ್ ಇತ್ಯಾದಿ ವಿವರಗಳನ್ನು ನಾವು ಅತ್ಯಂತ ಗೌಪ್ಯವಾಗಿಡುತ್ತೇವೆ. ಯಾವುದೇ ಕಾರಣಕ್ಕೂ ಅದನ್ನು ಬಹಿರಂಗಪಡಿಸುವುದಿಲ್ಲ. 'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸುವ ಮೂಲಕ ಸಂಬಂಧಪಟ್ಟ ಇಲಾಖೆಗೆ ತಿಳಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲು ಸೂಚಿಸುವ ಕೆಲಸ ಮಾಡುವ ಹೊಣೆ ನಮ್ಮದು.

ವಿಳಾಸ : ಪೊಲೀಸ್ ನ್ಯೂಸ್, ವಾರಪತ್ರಿಕೆ
ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ,
ಬೆಂಗಳೂರು-560 079. ಮೊ : 9513892666

# ಪಾತಕ ಪ್ರಪಂಚ

## ಕ್ರೇಜಿ ಮನುಷ್ಯ ...!

ರಾಜ್ಯ-ಗುಜರಾತ್. ಘಟನೆಯ ಸ್ಥಳ- ಅಹಮದ್ ನಗರ, ಕಾಲ- 1998ರಿಂದ 2000, ಅವಧಿ- ಎರಡು ವರ್ಷಗಳು.

ಸೂಚನೆ : ಪಾತ್ರಧಾರಿಗಳ ಹೆಸರನ್ನು ಬದಲಾವಣೆ ಮಾಡಿಕೊಳ್ಳಲಾಗಿದೆ.

●●●

ಅವಳ ಹೆಸರು ಆವಂತಿಕ! ಪ್ರಾಯ ಇಪ್ಪತ್ತೆರಡು. ಬೆಳಿಗ್ಗೆ ಹತ್ತು ಗಂಟೆಗೆ ಮನೆ ಬಿಟ್ಟು ಸಂಜೆ ಆರು ಗಂಟೆಗೆ ವಾಪಸ್ ಬರುತ್ತಾಳೆ. ತುಂಬಾ ಸಂಬಳ, ಬೋನಸ್ ಮತ್ತು ಕಮೀಷನ್ ಬರುವ ಕೆಲಸ ನನಗೆ ಸಿಕ್ಕಿದೆ ಎಂದು ಮನೇಲಿ ಹೇಳಿದ್ದಾಳೆ. ಆದರೆ ಎಲ್ಲಾ ಸುಳ್ಳು. ಅವಳು ಆಟೋದಲ್ಲಿ ಆ ಹೋಟೆಲ್‌ಗೆ ಹೋಗುತ್ತಾಳೆ. ಯಾರಾದರೂ ಗಿರಾಕಿ ಇವಳನ್ನು ಇಷ್ಟಪಟ್ಟದ್ದರೆ, ಬೆಳಿಗ್ಗೆ ಹತ್ತರಿಂದ ಸಂಜೆ ಆರು ಗಂಟೆತನಕ ಕಂಪನಿ ಕೊಡುತ್ತಾಳೆ. ಇದೇ ಅವಳ ವೃತ್ತಿ! ಆದರೆ ಮನೇಲಿ ಹೇಳಿಲ್ಲ. ಗಿರಾಕಿ ಯಾರಾದರೂ ಸಿಗದಿದ್ದರೆ ಆ ಹೋಟೆಲ್ ರೂಮಿನಲ್ಲಿ ಕೋಲ್ಡ್ ಬಿಯರ್ ಕುಡಿಯುತ್ತಾ, ಚಿಕನ್ ತಿನ್ನುತ್ತಾ ಟೈಂ ಪಾಸ್ ಮಾಡುತ್ತಾಳೆ.

ಆವಂತಿಕ ಚೆಲುವೆಯರಲ್ಲಿ ಚೆಲುವೆ. ಅವಳ ಆಕರ್ಷಕ ಮೈಮಾಟ, ತಿಳಿಹಳದಿ ಬಣ್ಣದ ಮೈಕಾಂತಿ, ಮುದ್ದಾದ ಮುಖದಲ್ಲಿ ಸೌಂದರ್ಯದ ಸೆಳೆತ ಇದೆ.

ಬೆಳಗಿನ ಒಂಭತ್ತೂವರೆ. ಡ್ರೆಸ್, ಮೇಕಪ್ ಮಾಡಿಕೊಂಡು ಹೊರಡಲು ರೆಡಿಯಾಗುತ್ತಿದ್ದಾಗ ಫೋನ್ ಕಾಲ್ ಬಂದಿತು.

ಬ್ರೋಕರ್ ಸಲೀಂ ಮಾಡಿದ್ದಾನೆ. ಅವಳ ಆಲ್ಬಂನಲ್ಲಿ ಇವಳ ಸೌಂದರ್ಯವನ್ನು ರೋಚಕ ನಗ್ನ ರೀತಿಯಲ್ಲಿ ತೋರಿಸುವ ಫೋಟೋಗಳಿವೆ. ಗಿರಾಕಿನ ಬುಕ್ ಮಾಡಿ ಮಾಮೂಲಿ ಹೋಟೆಲ್‌ಗೆ ಬರಲು ಹೇಳುತ್ತಾನೆ. ಆ ಕಾರಣದಿಂದ ಮಾಡಿರಬಹುದು ಎಂದುಕೊಂಡು ಅಟೆಂಡ್ ಮಾಡಿದಳು.

ಗುಡ್‌ನ್ಯೂಸ್! ಬಂಪರ್ ಹೊಡೆದಿದೆ. ಅವಳಿಗೆ ಪುಳುಕ ಉಂಟಾಯಿತು.

''ಹೇಳು ಸಲೀಂ.''

''ದೊಡ್ಡ ಕಪಂನಿಯೊಂದರ ಶ್ರೀಮಂತ ಉದ್ಯಮಿ, ಪ್ರಭಾವಶಾಲಿ ರಾಜಕಾರಣಿಗೆ ನಿನ್ನ ಫೋಟೋಗಳನ್ನು ತೋರಿಸಿದೆ. ಅವರು ಒಪ್ಪಿಕೊಂಡಿದ್ದಾರೆ. ಬಟ್ ಒಂದು ಕಂಡೀಷನ್ ಹಾಕಿದ್ರು.''

''ಏನಂತೆ ಅದು?''

''ಅವರು ಹೇಳಿದಂತೆ ಕೇಳಬೇಕಂತೆ.''

''ವಯಸ್ಸು ಎಷ್ಟಾಗಿದೆ.''

''ನಲವತ್ತೈದು.''

''ಅಂದ ಮೇಲೆ ಬರೀ ಚಪಲ ಉಳಿದಿರುತ್ತದೆ. ಮೈ ಹಿಂಡಿ, ಎಂಜಲು ಆಟ ಆಡಿ ಹೇಸಿಗೆ ಜೊತೆಗೆ ಸುಸ್ತಾಗಿಬಿಡುತ್ತಾರೆ.''

''ಬಹುಶಃ ಆ ಕಂಡೀಷನ್ ಅಲ್ಲ.''

''ಹಾಗಾದರೆ ಬೇರೆ ಏನು?''

''ಅವರೇ ಹೇಳುತ್ತಾರಂತೆ.''

''ಪೇಮೆಂಟ್ ನಾನು ಕೇಳಿದಷ್ಟು ಕೊಟ್ಟರೆ ಹೋಗ್ತೀನಿ ಸಲೀಂ.''

''ನಿನ್ನ ಡಿಮ್ಯಾಂಡ್ ಎಷ್ಟು?''

''ನೈಟ್‌ಗೆ ಬುಕ್ ಮಾಡಿದ್ದಾರಾ?''

''ಹೌದು ಆವಂತಿಕ.''

''ಹಾಗಾದರೆ ಮುವತ್ತು ಸಾವಿರ ಆಗುತ್ತೆ.''

ಅವನು ನಗಲಾರಂಭಿಸಿದನು.

''ಯಾಕೆ ನಗುತ್ತಿದ್ದೀಯ''

''ನಿನ್ನ ರೇಟಿನ ನಿರೀಕ್ಷೆ ಕಡಿಮೆ. ಫುಲ್ ನೈಟ್‌ಗೆ ಐವತ್ತು ಸಾವಿರ ಕೊಡುತ್ತಾರಂತೆ.''

ಅವಳು ಪುಳುಕಗೊಂಡಳು.

''ಈಗ ಹೋಟೆಲ್‌ಗೆ ಬರುತ್ತಾರಾ?''

''ಅವರು ಹೋಟೆಲ್‌ಗೆ ಬರೋಲ್ಲ.''

''ಹಾಗಾದರೆ ಇನ್ನೆಲ್ಲಿ?'

''ಅವರ ಫಾರಂ ಹೌಸ್ ಇದೆ. ನಾನು ಅಲ್ಲಿಗೆ ನಿನ್ನನ್ನು ರಾತ್ರಿ ಎಂಟು ಗಂಟೆಗೆ ಕರ್ಕೊಂಡು ಹೋಗ್ತೀನಿ. ಬೆಳಿಗ್ಗೆ ಆರು ಗಂಟೆಗೆ ಬಂದು ಪಿಕಪ್ ಮಡ್ತೀನಿ.''

''ಆಗಲಿ ರೆಡಿಯಾಗಿರುತ್ತೀನಿ.''

''ಏ... ಇವತ್ತು ಡೇ ಡ್ಯೂಟಿಗೆ ಒಪ್ಪಬೇಡ.''

''ಇಲ್ಲ... ತುಂಬಾ ಆಯಾಸ ಆಗುತ್ತೆ.''

''ನಾನು ನಿನ್ನ ಮನೆ ಹತ್ತಿರ ಇರೋ ಸರ್ಕಲ್‌ಗೆ ಬಂದು ಮೊದಲು ಫೋನ್ ಮಾಡ್ತೀನಿ. ನೀನು ರೆಡಿಯಾಗಿ ಅಲ್ಲಿಗೆ ಬಾ.''

''ಓಕೆ ಸಲೀಂ.''

●●●

ಗಂಡಸರ ಜೊತೆ ಸೆಕ್ಸ್ ಆಟ ಆಡೋದು ಅವಳಿಗೇನು ಹೊಸ ಅನುಭವ ಅಲ್ಲ. ಬೇಕಾದಷ್ಟು ಗಂಡಸರಿಗೆ ರತಿ ಆಗಿದ್ದಾಳೆ.

ಈ ಶ್ರೀಮಂತನ ಚಪಲಗಳನ್ನು ತೀರಿಸುವ ಮೊದಲೇ ಪೇಮೆಂಟ್ ಜೊತೆಗೆ ಟಿಪ್ಸ್ ಮತ್ತು ಗಿಫ್ಟ್‌ಗಳನ್ನು ವಸೂಲಿ ಮಾಡಿದ ನಂತರ ಸುಖ ಕೊಡಬೇಕು ಎಂದುಕೊಂಡಳು.

●●●

ನಗರದಿಂದ ಸುಮಾರು ಅರ್ಧ ಗಂಟೆಯ ಕಾರಿನಲ್ಲಿ ಪ್ರಯಾಣವಾಯಿತು.

ಗ್ರೀನ್ ಟಾಪ್ ಫಾರಂ ಹೌಸ್.

ಪ್ರಕೃತಿ ರಮಣೀಯವಾಗಿದೆ. ಮೋಡಗಳು ಆವರಿಸುತ್ತಾ ಕತ್ತಲಾಗಿ ತೀವ್ರತೆಯನ್ನು ಜಾಸ್ತಿ ಮಾಡಿದೆ.

ಅವರಿಬ್ಬರು ಕಾರಿನಿಂದ ಇಳಿದರು.

ಅವಳು ಮತ್ತು ಬ್ರೋಕರ್ ಸಲೀಂ ಫಾರಂ ಹೌಸ್‌ನ ಹತ್ತಿರ ಬಂದರು. ಸೆಕ್ಯುರಿಟಿಯವನು ಫೋನ್ ಮಾಡಿ ಸಲೀಂ ಹೆಸರನ್ನು ಹೇಳಿದಾಗ ಒಳಗೆ ಹೋಗಲು ಅನುಮತಿ ಸಿಕ್ಕಿತು.

ಈಗ ಸಲೀಂ ಮತ್ತು ಆವಂತಿಕ ಶ್ರೀಮಂತಿಕೆಯ ವೈಭವದಿಂದ ಕಂಗೊಳಿಸುತ್ತಿರುವ ಬಂಗಲೆಯ ಫ್ರಂಟ್ ಹಾಲ್‌ನಲ್ಲಿ ಇದ್ದಾರೆ. ಅಲ್ಲಿ ಯಾರೊಬ್ಬರೂ ಕಂಡು ಬರುತ್ತಿಲ್ಲ.

ಕ್ಷಣಗಳು ಉರುಳುತ್ತಿವೆ.

ನಗರದಲ್ಲಿರುವ ಪರ್ಮನೆಂಟ್ ಹೋಟೆಲ್‌ನಲ್ಲಿ ಗಿರಾಕಿಗಳ ಜೊತೆ ಇರುತ್ತಿದ್ದಳೇ ವಿನಹ ಈ ರೀತಿ ಬೇರೆ ಪ್ರದೇಶದಲ್ಲಿರುವ ಒಂಟಿ ಬಂಗಲೆಗೆ ಬಂದಿರಲಿಲ್ಲ.

ಮಾಮೂಲಿನಂತೆ ಅವಳು ಬೆಳಿಗ್ಗೆ ಹತ್ತು ಗಂಟೆಯಿಂದ ಸಂಜೆ ಐದು ಗಂಟೆತನಕ ಕಸ್ಟಮರ್ ಜೊತೆ ಇದ್ದರೆ ಹತ್ತರಿಂದ ಹನ್ನೆರಡು ಸಾವಿರ ಸಿಗುತ್ತಿತ್ತು. ಕಸ್ಟಮರ್‌ನಿಂದ ಟಿಪ್ಸ್ ಗಿಫ್ಟ್ ಅಂತ ಒಂದು ಅಥವಾ ಎರಡು ಸಾವಿರ ವಸೂಲಿ ಮಾಡುತ್ತಿದ್ದಳು. ಈಗ ಶ್ರೀಮಂತ ಉದ್ಯಮಿ ಒಂದು ರಾತ್ರಿ ಐವತ್ತು ಸಾವಿರ ರೂಪಾಯಿ ಕೊಡ್ತೀನಿ ಎಂದು ಹೇಳಿದ್ದಾನೆ. ಹಾಗಾಗಿ ಅವಳು ಮೊದಲ ಸಲ ಇಂತಹ ಆಫರ್‌ಗಳನ್ನು ಒಪ್ಪಿಕೊಂಡಿದ್ದಾಳೆ.

ಮಹಡಿಯಲ್ಲಿರುವ ರೂಮಿನಿಂದ ನೈಟ್ ಡ್ರೆಸ್ ಧರಿಸಿದ್ದ ಶ್ರೀಮಂತ ಬಂದನು. ಅವನು ಹೇಗಿದ್ದಾನೆ. ದಡೂತಿ ಶರೀರ. ನಾಲ್ಕೂವರೆ ಅಡಿ ಎತ್ತರ ಇದ್ದಾನೆ. ಮುಖದಲ್ಲಿ ಕಲೆಗಳಿವೆ.

ಅವನು ಪನ್ನಲ್ ಬಾಂಡ! ಗುಜರಾತಿನ ಪ್ರಭಾವಶಾಲಿ ಶ್ರೀಮಂತ. ನಗರದಲ್ಲಿರುವ ಅರಮನೆ ರೀತಿ ಇರುವ ಬಂಗಲೆ ಇದೆ. ಅವನ ವಿಚಿತ್ರ-ವಿಲಕ್ಷಣ ಬಯಕೆಗಳನ್ನು ತೀರಿಸಿಕೊಳ್ಳಲು, ನಿರ್ಜನ ಪ್ರದೇಶದ ಫಾರಂ ಹೌಸ್‌ಗೆ ಬರುತ್ತಾನೆ. ತಿಂಗಳಲ್ಲಿ ಮೂರು ಅಥವಾ ನಾಲ್ಕು ಸಲ ಬಂದು ಉಳಿಯುತ್ತಾನೆ. ಇದು ಟಾಪ್ ಸೀಕ್ರೇಟ್!

ಬಂಗಲೆಯ ಮುಂಭಾಗದಲ್ಲಿ ಗಾರ್ಡನ್ ಇದೆ. ಹಿಂಭಾಗದಲ್ಲಿ ಕಂಡು ಬರುತ್ತಿದೆ ಖಾಲಿ ಜಾಗ. ಸೊಗಸಾಗಿ ಬಹುಲ್ಲು ಬೆಳೆದಿದೆ.

ಅವಳು ಮುಖ ಸಿಂಡರಿಸಿದಳು. ಆದರೆ ಶ್ರೀಮಂತ ಉದ್ಯಮಿಗೆ ಗೊತ್ತಾಗದ ರೀತಿ ಬದಲಾಗಿದ್ದಳು. ಅವನ ಕಡೆ ನೋಡಿ ನಕ್ಕಳು. ಮೋಹಕತೆಯ ಮಾದಕ ನಗು.

ಕ್ಷಣಗಳ ಕಾಲ ಅವಳನ್ನು ನುಂಗುವ ರೀತಿ ನೋಡಿದ ನಂತರ ಬ್ರೋಕರ್ ಕಡೆ ತಿರುಗಿ ''ಏ ಸಲೀಂ... ನೀನು ಐದು ನಿಮಿಷ ಹೊರಗಿರು. ಇವಳ ಜೊತೆ ಮಾತಾಡಿದ ಮೇಲೆ ನಿನ್ನ ಕರಿತೀನಿ'' ಎಂದಾಗ ಅವನು ತಲೆಯಾಡಿಸಿ ಹೊರಗೆ ಬಂದನು.

ಪನ್ನಲ್ ಬಾಂಡ...! ವಿಚಿತ್ರವಾದ ಹೆಸರು. ಅವನೀಗ ಅವಳ ಹತ್ತಿರ ಬಂದು ಕೈ ಹಿಡಿದು ಎಳೆದುಕೊಂಡನು. ಸೊಂಟ ಸವರುತ್ತಾ ಒತ್ತಿದನು. ಅವಳು ನಗುತ್ತಿದ್ದಾಳೆ. ಅವಳ ಬಲು ಮುದ್ದಾದ ಮುಖವನ್ನು ಸವರುತ್ತಾ ಬಾಯೊಳಗೆ ಬೆರಳು ತೂರಿಸಿದಾಗ ಅವಳಿಗೆ ಮುಜುಗರ ಉಂಟಾಯಿತು.

ಅವಳ ಹಲ್ಲುಗಳನ್ನು ಸವರಿದನು. ಎರಡು ನಿಮಿಷಗಳ ಕಾಲ ಅವಳ ಬಾಯೊಳಗೆ ಇವನ ದಪ್ಪ ಬೆರಳು ಹೊರಳಾಡಿತು.

ತುಟಿಗಳನ್ನು ಸವರಿದನು. ಕೆಳ ತುಟಿ ಅದುಮಿದನು.

''ನಿನ್ನ ಹೆಸರೇನು?''

ಬಾಯಿಂದ ಬೆರಳು ತೆಗೆದನು.

'ಆವಂತಿಕ ಅಂತ.''

''ನನ್ನ ಆಸೆ ಹೇಳಲೆ?''

ಅವಳು ಅವನ ಕೈ ಎಳೆದು ತನ್ನ ಮುಖ, ಕತ್ತಿನ ಸುತ್ತಲು ಸವರಿಕೊಳ್ಳುತ್ತಾ ''ಸುಖದ ಆಟ ಪ್ರಾರಂಭ ಮಾಡಿದ ಮೇಲೆ ಹೇಳಿ. ನಿಮ್ಮ ಆಸೆ ತೀರಿಸುತ್ತೇನೆ''

ಎಂದಳು.

''ಆದರೆ ನನ್ನ ಆಸೆ ಡಿಫರೆಂಟ್ ಆಗಿದೆ.''

ಅವಳು ಗಾಬರಿಯಾದಳು.

''ಏನು... ಏನದು?''

''ನಾನು ನಿನ್ನಂತ ಚೆಲುವೆಯರನ್ನು ಎಲ್ಲಾ ಗಂಡಸರ ರೀತಿ ಅನುಭವಿಸೋಲ್ಲ.''

''ಇನ್ಯಾವ ರೀತಿ?''

''ರೇಪ್... ರೇಪ್ ಮಾಡ್ತೀನಿ.''

ಅವಳು ಮೋಹಕವಾಗಿ ನಕ್ಕಳು.

''ಯಾಕೆ ನಗುತ್ತೀಯ?''

''ನನ್ನಂತ ಚೆಲುವೆ ನಿಮಗೆ ಸಂತೋಷದಿಂದ ರತಿಯಾಗಲು ಬಂದಿರುವಾಗ ರೇಪ್ ಮಾಡುವ ಅಗತ್ಯ ಏನಿದೆ?''

''ಅಗತ್ಯ ಅಲ್ಲ ಅತ್ರಾಸೆ... ಹೆಬ್ಬಯಕೆ... ಇದೆ! ನನ್ನ ಸೆಕ್ಸ್ ಟೇಸ್ಟ್.''

''ಅಂದರೆ... ಅಂದರೆ...''

''ನಾನು ರೇಪ್ ಮಾಡುತ್ತಿರುವಾಗ ನೀನು ತೀವ್ರ ರೀತಿಯಿಂದ ವಿರೋಧಿಸಬೇಕು.''

''ಇದರಿಂದ ನನಗೆ ಹಿಂಸೆ ಆಗುತ್ತೆ.''

''ಪ್ರಾರಂಭದಲ್ಲಿ ಮಾತ್ರ. ನೀನು ನಿನ್ನ ಕಾಮಕಲಾ ಚತುರ ಆಟಗಳಿಂದ, ಮೋಹಕ, ಶೃಂಗಾರದ ಪ್ರಚೋದನೆಯಿಂದ ಬದಲಾಗಿ ಮನ್ಮಥನಾಗಿ ಸೇರುತ್ತೇನೆ.''

ಅವಳು ಚಡಪಡಿಸುತ್ತಿದ್ದಾಳೆ.

ತುಂಬಾ ವಿಚಿತ್ರ-ವಿಲಕ್ಷಣ ವರ್ತನೆಯ ಕಸ್ಟಮರ್‌ಗಳನ್ನು ಕಂಡಿದ್ದಳು. ಅಂತಹವರಲ್ಲಿ ಈ ಶ್ರೀಮಂತ ಸಹ ಒಬ್ಬನಾಗಿದ್ದಾನೆ.

ಏನು ಮಾಡಲಿ?

ತಿರಸ್ಕರಿಸಿದರೆ ಐವತ್ತು ಸಾವಿರ ಸಿಗೋಲ್ಲ.''

ಕ್ಷಣಗಳ ಕಾಲ ಆಲೋಚಿಸಿದಳು.

''ಆಗಲಿ... ಆದರೆ ನನಗೆ ನಿಮ್ಮ ವರ್ತನೆಯಿಂದ ಹಿಂಸೆ ಆಗಬಾರದು.''

ಅವನಿಂದ ಪ್ರತಿಕ್ರಿಯೆ ಬರಲಿಲ್ಲ.''

ಐವತ್ತು ಸಾವಿರ ಕೊಟ್ಟರು.''

ಅವಳ ಮುಖ ಅರಳಿತು.

''ನನಗೆ ರೇಪ್ ಆಟದಿಂದ ನೀನು ಖುಷಿ ಕೊಡು. ಪುನಹ ಇಪ್ಪತ್ತೈದು ಸಾವಿರ ರೂಪಾಯಿ ಕೊಡ್ತೀನಿ.''

ಅವಳು ಪುಳುಕಗೊಂಡಳು.

ನಗುತ್ತಾ ಗ್ರೀನ್ ಸಿಗ್ನಲ್ ನೀಡಿದಳು.

ಬ್ರೋಕರ್ ಅಲ್ಲಿಂದ ಹೊರಟನು.

ಪನ್ನರ್ ಬಾಂಡಾ ಅವಳ ಕೈ ಹಿಡಿದು ಸೆಕೆಂಡ್ ಫ್ಲೋರ್‌ನಲ್ಲಿರುವ ಕಾರಿಡಾರ್ ರೂಮಿಗೆ ಹೋದನು.

ರೇಪ್ ಪ್ರಾರಂಭವಾಗಿದೆ.

●●●

ಸಲೀಂ ಬೇರೊಬ್ಬ ಕಸ್ಟಮರ್‌ಗೆ ಚೆಲುವೆ ಕಾಲ್‌ಗರ್ಲ್‌ಗಳ ಫೋಟೋಗಳನ್ನು ತೋರಿಸಿದನು. ಕಸ್ಟಮರ್ ಅವಳನ್ನು ಒಪ್ಪಿದನು.

ಅವಳು ಆವಂತಿಕ...!

ಸಲೀಂ ಅವಳಿಗೆ ಫೋನ್ ಮಾಡಿದನು.

ಅವಳು ಅಟೆಂಡ್ ಮಾಡಲಿಲ್ಲ. ನಾಲ್ಕಾರು ಸಲ ಮಾಡಿದನು. ಅವಳು ರೆಸ್ಪಾನ್ಸ್ ಮಾಡಲಿಲ್ಲ.

ಸಲೀಂ ಈಗ ಬೇರೆ ಕಾಲ್‌ಗರ್ಲ್‌ಳನ್ನು ಆ ಕಸ್ಟಮರ್‌ಗೆ ಬುಕ್ ಮಾಡಿದ.

ರಾತ್ರಿ ಒಂಭತ್ತು ಗಂಟೆ. ಈ ಹಿಂದೆ ಆವಂತಿಕಳನ್ನು ಅನುಭವಿಸಿದ್ದ ಕಸ್ಟಮರ್‌ಗಳಲ್ಲಿ ಒಬ್ಬ ಬ್ರೋಕರ್‌ಗೆ ಫೋನ್ ಮಾಡಿ ''ಸಲೀಂ... ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ಆವಂತಿಕಗಳನ್ನು ಮಾಮೂಲಿ ಹೋಟೆಲ್‌ಗೆ ಬರಲು ಹೇಳು.''

''ಸಾರ್... ಅವಳ್ಯಾಕೋ ಫೋನ್ ತಗೋತಾ ಇಲ್ಲ. ಈಗ ಪುನಹ ಫೋನ್ ಮಾಡಿ ನಿಮಗೆ ಕನ್‌ಫರ್ಮ್ ಮಾಡ್ತೀನಿ.''

ಆವಂತಿಕಳ ಫೋನ್ ಈಗ ಸ್ವಿಚ್ ಆಫ್ ಆಗಿದೆ.

ಆವಂತಿಕ ಎಚ್ಚರಿಸಿದ್ದಳು.

ನನ್ನ ಮನೆಯವರಿಗೆ ಈ ವ್ಯವಹಾರದ ಬಗ್ಗೆ ಗೊತ್ತಿಲ್ಲ, ಆದ್ದರಿಂದ ನೀನು ಮನೆಗೆ ಬರಬೇಡ ಎಂದಿದ್ದಳು.

ಆವಂತಿಕಳಿಗೆ ಏನಾಗಿದೆ?

●●●

ಆವಂತಿಕ ಬೆಡ್‌ರೂಮಲ್ಲಿ ಮಲಗಿದ್ದಾಳೆ. ಡಾಕ್ಟರ್ ಬಂದು ಟ್ರೀಟ್‌ಮೆಂಟ್ ಕೊಟ್ಟಿದ್ದಾರೆ. ಅವಳ ದೇಹದ ತುಂಬಾ ಕಚ್ಚಿರುವ ಮತ್ತು ಪರಚಿರುವ ಗಾಯಗಳಾಗಿ ರಕ್ತಹೆಪ್ಪುಗಟ್ಟಿದೆ. ಮನೆಯವರು ಗಾಬರಿಯಾಗಿದ್ದಾರೆ.

ಆಟೋದಲ್ಲಿ ಬಂದಿದ್ದ ಆವಂತಿಕ ತುಂಬಾ ಕಷ್ಟದಿಂದ ಮನೆಯೊಳಗೆ ಬಂದಿದ್ದಳು.

ಮನೆಯವರು ಗಾಬರಿಯಾಗಿದ್ದರು.

ಅವಳು ಸುಳ್ಳು ಹೇಳಿದ್ದಳು.

ಕೆಲಸ ಮುಗಿಸಿಕೊಂಡು ಬರುತ್ತಿದ್ದಾಗ ಯಾರೋ ಒಬ್ಬ ಕಿಡ್ನಾಪ್ ಮಾಡಿ ರೇಪ್ ಮಾಡಿದ. ಬೆಳಗಿನ ಜಾವದಲ್ಲಿ ಅವನಿಂದ ತಪ್ಪಿಸಿಕೊಂಡು ಬಂದೆ'' ಎಂದು ನರಳುತ್ತಾ ಹೇಳಿದ್ದಳು.

ಅರೆಪ್ರಜ್ಞಾಶೂನ್ಯಳಾದಳು.

ಕೂಡಲೇ ಡಾಕ್ಟರ್‌ರನ್ನು ಕರೆಸಿ ಟ್ರೀಟ್‌ಮೆಂಟ್ ಕೊಡಿಸಿದರು. ಪ್ರಜ್ಞೆಬಂದ ಮೇಲೆ ಯಾರೋ ಅಪರಿಚಿತ ಕಿಡ್ನಾಪ್ ಮಾಡಿ ರೇಪ್ ಮಾಡಿದ್ದಾನೆ ಎಂದು ಹೇಳಿದ್ದಳೇ ವಿನಹ, ತಾನು ದಂಧೆ ಮಾಡುತ್ತಿರುವ ಸಂಗತಿ ಹೇಳಲಿಲ್ಲ.

ತಂದೆ-ತಾಯಿ ಮತ್ತು ಅಣ್ಣ ತೀರ್ಮಾನ ಮಾಡಿದರು. ಈ ಸಂಗತಿ ಬಹಿರಂಗ ಆಗದ ರೀತಿ ಎಚ್ಚರಿಕೆ ವಹಿಸಿದ್ದರು.

ಆವಂತಿಕಳಿಗೆ ಚೇತರಿಸಿಕೊಳ್ಳಲು ಒಂದು ವಾರ ಬೇಕಾಯಿತು. ಅವಳ ದೇಹದಲ್ಲಿ ಅಲ್ಲಲ್ಲಿ ಗಾಯದ ಕಲೆಗಳಿರೋದ್ರಿಂದ ದಂಧೆಗೆ ಹೋಗಲಿಲ್ಲ.

ಸಲೀಂ ಫೋನ್ ಮಾಡುತ್ತಲೇ ಇದ್ದನು. ಹಾಗಾಗಿ ಅವನಿಗೆ ಹೇಳಿದ್ದಳು. ನನ್ನ ಆರೋಗ್ಯ ಸರಿ ಇಲ್ಲ. ಎರಡು ವಾರ ನನಗೆ ಫೋನ್ ಮಾಡ್ಬೇಡ ಎಂದಿದ್ದಳು.

ಅವಳಿಗೆ ಆ ಘಟನೆ ನೆನಪಾದರೆ ಚಳಿ ಬಂದಂತೆ ನಡುಗುತ್ತಾಳೆ. ಇನ್ನು ಮುಂದೆ ಕಸ್ಟರ್‌ಮ್ ಯಾರೇ ಆಗಿದ್ದರೂ ಅವರು ಇರುವ ಜಾಗಕ್ಕೆ ಹೋಗುವುದಿಲ್ಲ. ಇಂತಹ ವಿಕೃತ-ವಿಕಲ್ಪ ಕಾಮುಕರ ಕೈಗೆ ಸಿಕ್ಕಿದರೆ ಜೀವ ಉಳಿಯೋಲ್ಲ, ಪ್ರಾಣ ಉಳಿಸಿಕೊಂಡರೂ ನರಕಯಾತನೆ ಅನುಭವಿಸ ಬೇಕಾಗುತ್ತದೆ ಎಂದುಕೊಂಡಳು.

ಅವಳು ಏಕಾಂತದಲ್ಲಿರುವಾಗಲೆಲ್ಲಾ ಆ ಘಟನೆ

☞ 14

13 ☜

ನೆನಪಾಗುತ್ತದೆ. ಅವನು ಕಾಮುಕ ಮಾತ್ರ ಅಲ್ಲ. ಅಬ್ಬ ರಾತ್ರಿ ಹತ್ತು ಗಂಟೆಯಿಂದ ಬೆಳಗಿನ ಜಾವದ ತನಕ ನನಗೆ ನರಕ ದರ್ಶನ ಮಾಡಿಸಿದ್ದನು. ಬೆತ್ತಲೆ ಕುಣಿಸಿದ್ದನು. ಅವನೂ ಸಹ ಕುಣಿದಿದ್ದನು. ಹುಚ್ಚು ಹುಚ್ಚಾಗಿ ಕುಣಿಯುತ್ತಾ ಇವಳ ನಗ್ನದೇಹವನ್ನು ಕಚ್ಚುತ್ತಿದ್ದನು. ಎಲ್ಲೆಲ್ಲೋ ಕೈ ತೂರಿಸಿ ಹಿಂಡುತ್ತಿದ್ದನು ಮತ್ತು ಪರಚುತ್ತಿದ್ದನು. ಕೆನ್ನೆ ಮೇಲೆ ಹಲ್ಲಿನ ಗುರುತುಗಳ ಗಾಯ ಆಗಿತ್ತು. ತುಟಿಗಳಲ್ಲಿ ರಕ್ತ ಬಂದಿತ್ತು. ಅವಳನ್ನು ಎತ್ತಿ ಭುಜದ ಮೇಲೆ ಕೂರಿಸಿಕೊಂಡು ಹುಚ್ಚನಂತೆ ಕುಣಿದಾಡಿದ್ದನು. ಮೇಲಿಂದ ಎತ್ತಿ ಎಲ್ಲಿ ಗೋಡೆಗೆ ಅಪ್ಪಳಿಬಿಡುತ್ತಾನೋ ಎಂಬ ಭಯ ಆಗಿತ್ತು. ಆದರೆ ಆ ರೀತಿ ಮಾಡಿರಲಿಲ್ಲ. ಅವಳನ್ನು ಮಂಚದ ಮೇಲೆ ಎತ್ತಿ ಎಸೆದಿದ್ದನು. ದಬಾಲನೆ ಬಿದ್ದಿದ್ದಳು. ಬೆನ್ನಿನ ಮೂಳೆ ಅಲ್ಲಾಡಿದಂತೆ ಆಗಿ ಪರಮಯಾತನೆಯಿಂದ ಕಿರುಚಿದಳು. ಅವಳ ಮೇಲೆ ಬಿದ್ದನು. ತಬ್ಬಿಕೊಂಡು ಉರುಳಾಡುತ್ತಿದ್ದಾನೆ.

ಸೈಕೋ ಉನ್ಮಾದತೆ ಅವನ ಕಾಮದ ಆಟದಲ್ಲಿ ಕಂಡು ಬರುತ್ತಿದೆ "ಏ... ಏ... ನಿನಗೆ ಹಣ ಕೊಟ್ಟಿಲ್ವ? ನಾನು ರೇಪ್ ಮಾಡ್ತಾ ಇದ್ದೀನಿ. ನೀನು ವಿರೋಧಿಸಬೇಕು ಮತ್ತು ನನ್ನನ್ನು ತಳ್ಳಬೇಕು, ಎದೆಗೆ ಗುದ್ದಬೇಕು ಇತ್ತು ಪರಚಬೇಕು... ಹೂಂ... ಮಾಡು... ಅದೇ ರೀತಿ ಮಾಡು" ಎಂದು ಅಬ್ಬರಿಸುತ್ತಾ ಅವಳ ಬಲ ತೋಳನ್ನು ಕಚ್ಚಿದನು.

ಕಿಟಾರನೆ ಕಿರುಚಿದಳು.

ಅವಳಲ್ಲಿ ಶಕ್ತಿ ಇರಲಿಲ್ಲ.

ಅವನು ಎಲ್ಲೆಂದರಲ್ಲಿ ಬಾಯಿ ತೂರಿಸಿ ಕಚ್ಚುತ್ತಿದ್ದನು. ಅವಳ ಸುಖದ ತಳದಲ್ಲಿ ರಭಸದಿಂದ ಇಳಿದಾಗ, ಪ್ರಾಣ ಹೋಗುತ್ತಿರುವಂತೆ ಯಾತನೆ ಉಂಟಾಗಿ ಪ್ರಜ್ಞಾಶೂನ್ಯ ಳಾಗಿದ್ದಳು.

ಎಚ್ಚರವಾದಾಗ ಅವನು ಇರಲಿಲ್ಲ.

ಕುಡಿದು ಬೇರೊಂದು ಕಡೆ ಮಲಗಿದ್ದನು. ಅವಳಿಗೆ ದೇಹ ಅಲ್ಲಾಡಿಸಲು ಸಹ ಶಕ್ತಿ ಇರಲಿಲ್ಲ. ನಿತ್ರಾಣ ಆವರಿಸಿದೆ. ಅವಳು ತುಂಬಾ ಕಷ್ಟದಿಂದ ಎದ್ದು ಡ್ರೆಸ್ ಮಾಡಿಕೊಂಡು ವ್ಯಾನಿಟಿ ಬ್ಯಾಗನ್ನು ಎತ್ತಿಕೊಂಡಳು. ಐವತ್ತು ಸಾವಿರ ಇರಲಿಲ್ಲ. ಕೊಟ್ಟಿದ್ದನ್ನು ತೆಗೆದುಕೊಂಡಿದ್ದಾನೆ. ಸಧ್ಯ... ಹಣ ಸಿಗದಿದ್ದರೂ ಪರವಾಗಿಲ್ಲ. ಜೀವ ಉಳಿದಿದೆಯಲ್ಲ ಎಂದು ಅವಳು ಸಮಾಧಾನ ಮಾಡಿಕೊಂಡಳು. ಅಲ್ಲಿಂದ ಹೊರಗೆ ಬಂದು ಮುಖ್ಯರಸ್ತೆಯಲ್ಲಿ ಆಟೋ ಹಿಡಿದು ಮನೆ ತಲುಪುವುದರಲ್ಲಿ ಸಾಕು, ಸಾಕಾಗಿ ಹೋಗಿತ್ತು.

ಸಲೀಂ ನೆನಪಾದನು. ಅವನಿಗೆ ಗೊತ್ತಿರಲಿಲ್ಲವೆ? ಗೊತ್ತಿದ್ದು ನನ್ನನ್ನು ಯಾಕೆ ಅವನ ಹತ್ತಿರ ಕಳಿಸಿದ? ತುಂಬಾ ಕಮೀಷನ್ ಸಿಗುತ್ತದೆ ಎಂಬ ಆಸೆಯಿಂದ ಇರಬಹುದೆ?

●●●

ಅವಳು ಅಖಿಲೇಶ್ವರಿ. ಎರಡು ವರ್ಷಗಳ ಹಿಂದೆ 'ಮಿಸ್ ಗುಜರಾತ್' ಎಂಬ ಸೌಂದರ್ಯ ಸ್ಪರ್ಧೆಯಲ್ಲಿ ಗೆದ್ದಿದ್ದಳು. ಅವಳ ಸೌಂದರ್ಯದಲ್ಲಿ ಸೂಜಿಗಲ್ಲಿನ ಸೆಳೆತ ಇತ್ತು. ಒಂದು ಸಲ ನೋಡಿದರೆ ದೃಷ್ಟಿಯನ್ನು ಬದಲಿಸಲು ಆಗುತ್ತಿರಲಿಲ್ಲ.

ಅಖಿಲಾ... ಅಖಿಲೇಶ್ವರಿ. ಸೌಂದರ್ಯ ಸ್ಪರ್ಧೆಯಲ್ಲಿ ಗೆದ್ದು ಒಂದು ವರ್ಷದ ನಂತರ ವಿವಾಹವಾದಳು.

ಶ್ರೀಮತಿ ಪನ್ನರ್ ಬಾಂಡಾ! ಸಿನಿಮಾ ಹೀರೋಯಿನ್ ಅಪಿಯರೆನ್ಸ್ ಮತ್ತು ಆ ಸೌಂದರ್ಯದಲ್ಲಿ ಗ್ಲಾಮರ್ ಇರುವ ಅವಳು ಗಿಡ್ಡನೆಯ ಆಕೃತಿಯ, ವಿಲಕ್ಷಣ ರೂಪದ ಅವನನ್ನು ಮದುವೆ ಆಗಲು ವಿರೋಧಿಸಿದ್ದಳು. ಆದರೆ ಈ ಶ್ರೀಮಂತ ಅವಳ ತಂದೆ-ತಾಯಿ ಮತ್ತು ಸಂಬಂಧಿಕರಿಗೆ ಆಮಿಷ ತೋರಿಸಿದ್ದನು. ಬೆದರಿಕೆ ಹಾಕಿದ್ದನು. ಅವಳ ಮೇಲೆ ಹೆತ್ತವರಿಂದ ಮತ್ತು ಸಂಬಂಧಿಕರಿಂದ ಒಂದು ತಿಂಗಳು ಒತ್ತಡ ಬಂದಿತು. ಆತ್ಮಹತ್ಯೆ ಪ್ರಸಂಗ ನಡೆಯಿತು.

ಅಖಿಲೇಶ್ವರಿ ಬದಲಾಗಿದ್ದಳು.

ಅದ್ಧೂರಿಯಾಗಿ ವಿವಾಹವಾಯಿತು. ವಿವಾಹವಾಗಿ ಕೇವಲ ಒಂದು ತಿಂಗಳಲ್ಲಿ ಗಂಡನನ್ನು ತೊರೆದು ಬಂದಿದ್ದಳು. ಹಲವಾರು ಸಲ ತವರಿನವರಿಗೆ ಫೋನ್ ಮಾಡಿ ಎಲ್ಲಾ ಹೇಳಿಕೊಂಡು ಅತ್ತು ಗೋಳಾಡಿದ್ದಳು.

ಅವರಿಗೆ ಶ್ರೀಮಂತಿಕೆ ಮುಖ್ಯ. ಅವನಿಂದ ಲಕ್ಷಗಳ ಲೆಕ್ಕದಲ್ಲಿ ಸಹಾಯ ಆಗುತ್ತಿದ್ದರಿಂದ ಬುದ್ಧಿ ಹೇಳಿದ್ದರು. ಗಂಡನ ವಿಲಕ್ಷಣ ವರ್ತನೆ ಸಹಿಸಿಕೊಂಡು ಸಂಸಾರ ಮಾಡು. ಇಲ್ಲದಿದ್ದರೆ ಅವನನ್ನು ಬದಲಿಸಲು ಪ್ರಯತ್ನಿಸು ಎಂದು ಬುದ್ಧಿ ಹೇಳಿದ್ದರು.

ಅಂತಿಮ ಸಂದೇಶ ಏನು? ತವರು ಮನೆಗೆ ಬರಬೇಡ. ಯಾಕೆ ಅಂದರೆ 'ಪನ್ನರ್ ಬಾಂಡಾ' ಇವಳ ತವರಿನವರಿಗೆ ಬೆದರಿಕೆ ಹಾಕಿದ್ದನು. ಅವಳು ತವರುಮನೆಗೆ ಬಂದರೆ ಸೇರಿಸಬಾರದು. ನೀವೇ ಅವಳನ್ನು ಇಲ್ಲಿಗೆ ಕರೆದುಕೊಂಡು ಬರಬೇಕು. ಇಲ್ಲದಿದ್ದರೆ ನೀವ್ಯಾರೂ ಜೀವಂತವಾಗಿರು ವುದಿಲ್ಲ! ಈ ಸಂಗತಿ ತಿಳಿದ ಅಖಿಲೇಶ್ವರಿ ತವರುಮನೆಗೆ ಹೋಗಲಿಲ್ಲ. ಆತ್ಮೀಯ ಗೆಳತಿಯೊಬ್ಬಳ ಮನೆಯಲ್ಲಿ ಆಶ್ರಯ ಪಡೆದಳು. ಇವಳ ಬ್ಯಾಂಕ್ ಬ್ಯಾಲೆನ್ಸ್ ಲಕ್ಷಗಳ ಲೆಕ್ಕದಲ್ಲಿ ಇತ್ತು. ಹಾಗಾಗಿ ಜೀವನಕ್ಕೆ ತೊಂದರೆ ಆಗಲಿಲ್ಲ ಎಂದು ಹೇಳಬಹುದು.

ಅವಳೀಗ ಗಂಡನಿಗೆ ಸುಳಿವು ಕೊಡದ ರೀತಿ ಗೆಳತಿಯ ಮನೆಯಲ್ಲಿದ್ದಾಳೆ. ನಗರದ ಯಾವುದೋ ಭಾಗದಲ್ಲಿ ಇರೋದ್ರಿಂದ ಪನ್ನಾರ್ ಬಾಂಡಾನ ದೃಷ್ಟಿಗೆ ಅವಳು ಬಿದ್ದಿಲ್ಲ.

●●●

ಪನ್ನಾರ್ ಬಾಂಡಾ ವಿಸ್ಕಿ ಕುಡಿಯುತ್ತಾ ಮಟನ್ ತಿನ್ನುತ್ತಿದ್ದಾನೆ. ಮೊಬೈಲ್ ಲೈಟ್ ಬ್ಲಿಂಕ್ ಆಯಿತು. ವಾಟ್ಸಾಪ್ ಮೆಸೇಜ್ ಬಂದಿದೆ. ವೀಡಿಯೋ ಕಳಿಸಲಾಗಿದೆ. ಅವನು ವಿಸ್ಕಿ ಚಪ್ಪರಿಸುತ್ತಾ ವೀಡಿಯೋ ಆಪರೇಟ್ (ವಾಟ್ಸಾಪ್) ಮಾಡಿದನು. ಮೈ ಪುಳುಕಗೊಂಡಿತು.

ಆಕರ್ಷಕ ರೂಪಿನ ಚೆಲುವೆಯೊಬ್ಬಳು ಕಾಮ ಪ್ರಚೋದಕ ಭಂಗಿಗಳಲಲ್ಲಿ ನರ್ತಿಸುತ್ತಾ ನಗುತ್ತಿದ್ದಾಳೆ. ಅವಳು ಸೀರೆ ಕಳಚಿದಳು. ಬಲು ವಿಶಿಷ್ಟವಾದ ದೇಹದ ಸೊಬಗು ಈಗ ಇವನನ್ನು ಕೆರಳಿಸಿತು. ಮೈ ಬಿಸಿಯಾಗುತ್ತಿದೆ. ವಿಕೃತ ಬಯಕೆ ಕೆರಳುತ್ತಿದೆ. ಇವಳ ಒಳ ಉಡುಪುಗಳನ್ನು ಒಂದೊಂದಾಗಿ ತೆಗೆಯುತ್ತಿದ್ದಾಳೆ. ಕ್ಯಾಬರೆ ನರ್ತಕಿಯಂತೆ ಅವಳು ಡ್ಯಾನ್ಸ್ ಮಾಡುತ್ತಿದ್ದಾನೆ. ನಾಲ್ಕು ನಿಮಿಷಗಳ ಕಾಮಪ್ರಚೋದಕ ನರ್ತನ ಮುಗಿಯಿತು. ಅವಳು ಮಾತಾಡುತ್ತಿದ್ದಾಳೆ.

"ಶ್ರೀಮಂತ ಉದ್ಯಮಿ ಪನ್ನಾರ್ ಬಾಂಡಾ ಅವರಿಗೆ ಸೌಂದರ್ಯ ಲೋಕಕ್ಕೆ ಸ್ವಾಗತ. ನನ್ನ ಹೆಸರೇನು ಗೊತ್ತಾ?"

"ಮಂದಸ್ಮಿತೆ."

"ಮತ್ತೊಂದು ಹೆಸರು ಕೇಸರಿ.'

"ರೂಪಕಲಾ ಕೇಸರಿ."

"ನನಗೆ ತುಂಬಾ ದಿನಗಳಿಂದ ಆಸೆ ಇದೆ. ನನ್ನ ಮೊದಲ ಅನುಭವ ಡಿಫರೆಂಟ್ ಆಗಿ ಆಗ್ಬೇಕು."

"ಯಾವ ರೀತಿ ಗೊತ್ತೆ?"

"ಬಲಿಷ್ಠ ಗಂಡಸು ನನ್ನ ಮೇಲೆ ಅತ್ಯಾಚಾರ ಮಾಡಬೇಕು."

"ನಾನು ಪ್ರತಿಭಟಿಸಬೇಕು."

"ಪ್ರತಿಭಟಿಸುತ್ತಾ ಸುಖ ಅನುಭವಿಸಬೇಕು."

"ನನಗೆ ನಿಮ್ಮ ವಿಚಾರ ತಿಳಿಯಿತು. ಹೇಳಿ... ನೀವು ನನ್ನನ್ನು ರೇಪ್ ಮಾಡ್ತೀರ?"

"ಯಾವಾಗ ಎಲ್ಲಿಗೆ ಬರಲಿ?"

ಅವನು ವಿಲಕ್ಷಣ ಕಲ್ಪನೆಗಳಿಂದ ನಡುಗುತ್ತಿದ್ದಾನೆ. ಕಾಮದ ಕಂಪನ ಆಗುತ್ತಿದೆ.

ಮೆಸೇಜ್ ಮಾಡಿದನು.

"ನನಗೆ ಒಪ್ಪಿಗೆ ಇದೆ."

ಮಂದಸ್ಮಿತೆ ಅಲಿಯಾಸ್ ಕೇಸರಿ ನನಗೆ ತನ್ನ ಫೋನ್ ನಂಬರ್ ಮೆಸೇಜ್ ಮಾಡಿದಳು.

●●●

ಅವಳು ನಗುತ್ತಾ "ನಿಮ್ಮಿಂದ ಫೋನ್ ಫೋನ್‌ಕಾಲ್ ನಿರೀಕ್ಷೆ ಮಾಡಿದ್ದೆ. ಥ್ಯಾಂಕ್ ಯೂ ಸಾರ್" ಎಂದು ಹೇಳಿದಳು.

"ರೇಪ್ ಬಯಕೆ ನಿನಗ್ಯಾಕೆ ಬಂತು?"

"ಅದೇ ಪ್ರಶ್ನೆನಾ ನಿಮ್ಮನ್ನ ಕೇಳ್ತೀನಿ. ನಿಮಗ್ಯಾಕೆ ರೇಪ್ ಮಾಡಿ ಸುಖ ಅನುಭವಿಸುವ ಆಸೆ ಬಂದಿದೆ."

ಅವಳು ಗಾಬರಿಯಾದಳು.

"ಇದನ್ನ ನಿನಗ್ಯಾರು ಹೇಳಿದ್ರು?"

"ನಿಮ್ಮ ಹೆಂಡತಿ ಅಖಿಲೇಶ್ವರಿ."

ಪನ್ನಾರ್ ಬಾಂಡಾ ಬೆಚ್ಚಿಬಿದ್ದನು. ಅವನು ಈಗ ಚಡಪಡಿಸುತ್ತಾ "ಎಲ್ಲಿ... ಎಲ್ಲಿ ಅಖಿಲೇಶ್ವರಿ ಎಲ್ಲಿ... ಎಲ್ಲಿದ್ದಾಳೆ" ಎಂದನು.

"ಅವಳು ಎಲ್ಲಿದ್ದಾಳೆ ಅಂತ ಗೊತ್ತಿಲ್ಲ. ನನ್ನ ಗೆಳತಿ ಅವಳು. ಆಕಸ್ಮಿಕವಾಗಿ ಸಿಕ್ಕಿದ್ದಳು. ಅವಳು ಗಂಡನನ್ನು ಬಿಟ್ಟು ದೂರಾಗಿರಲು ಕಾರಣ ಹೇಳಿದಳು. ಆಗ ನನಗೆ ಅನುಕಂಪ ಆಗಲಿಲ್ಲ. ತುಂಬಾ ದಿನಗಳಿಂದ ನನ್ನಲ್ಲಿದ್ದ ಸುತ್ತ ಆಸೆ ಗರಿ ಕೆದರಿತು. ನಿಮ್ಮಂತ ಗಂಡಸಿಂದ ನನ್ನ ಬಯಕೆ ಈಡೇರುತ್ತದೆ ಅಂತ ತಿಳಿದು ಫೋನ್ ಮಾಡಿದ್ದೀನಿ. ನನ್ನ ಸೌಂದರ್ಯ ಹೇಗಿದೆ ಅಂತ ವೀಡಿಯೋ ಕಳಿಸಿದ್ದೇನೆ. ಇದು ಅಸಲು ಸಂಗತಿ."

"ಅಖಿಲೇಶ್ವರಿ ಎಲ್ಲಾ ಹೇಳಿದ್ಲಾ?"

"ಅವಳು ಎಲ್ಲಾ ಹೇಳಿಕೊಂಡು ಅಳುತ್ತಿದ್ದರೆ ನಾನು ನನ್ನ ವಿಲಕ್ಷಣ ಆಸೆ ತೀರಿಸಕೊಳ್ಳುವಂತ ಕನಸು ಕಾಣುತ್ತಿದ್ದೆ. ಹೇಳಿ... ನಾವಿಬ್ಬರು ಎಲ್ಲಿ ಯಾವಾ ಸೇರೋಣ."

"ನಾನು ನಾಳೆ ಫೋನ್ ಮಾಡ್ತೀನಿ."

●●●

ಬುರ್ಕಾ ಧರಿಸಿಕೊಂಡು ಬಂದಿದ್ದ ಯುವತಿ ಆಟೋದಿಂದ ಇಳಿದು, ಆ ಮನೆಯ ಕಾಲಿಂಗ್ ಬಝರ್ ಒತ್ತಿದಳು. ಡೋರ್ ಓಪನ್ ಆಯಿತು.

ಅಪರಿಚಿತ ಯುವತಿ ನಿಂತಿದ್ದಾಳೆ.

"ನೀವು... ನೀವು... ಯಾರು?'

ಅವಳು ಗಡುಸಾಗಿ "ನನ್ನ ಮನೆಗೆ ಬಂದು ನನ್ನನ್ನೇ ಯಾರು ಅಂತ ಕೇಳುತ್ತಿದ್ದೀರ" ಎಂದು ರೇಗಿದಳು.

"ಓ... ಐಯಾಮ್ ಸಾರಿ. ನೀವು ಶ್ರೀಲತಾ ಅಲ್ವ?"

"ನೀವ್ಯಾರು ನಿಮಗೆ ಯಾರು ಬೇಕು?"

ಅವಳು "ನಿಮ್ಮ ಆತ್ಮೀಯ ಗೆಳತಿ ಅಖಿಲೇಶ್ವರಿ ನಿಮ್ಮ ಮನೇಲಿ ಇದ್ದಾಳೆ ಅಂತ ಗೊತ್ತಿದೆ. ಹಾಗಾಗಿ ಅವಳನ್ನು ಮೀಟ್ ಮಾಡಲು ಬಂದೆ" ಎಂದಳು.

"ಅಖಿಲೇಶ್ವರಿ ಅನ್ನೋವ್ರು ಇಲ್ಲಿ ಯಾರೂ ಇಲ್ಲ."

ಅವಳು ಬುರ್ಕಾ ತೆಗೆದು ಮುಖ ದರ್ಶನ ಮಾಡಿಸಿದಳು. ನಂತರ ತನ್ನ ಮೊಬೈಲ್‌ನಲ್ಲಿರುವ ತನ್ನ ಫೋಟೋ ತೋರಿಸುತ್ತಾ "ಇದನ್ನು ಅವಳಿಗೆ ತೋರಿಸಿ. ಅವಳು ಒಪ್ಪಿದರೆ ಮಾತಾಡಲು ಅವಕಾಶ ಮಾಡಿಕೊಡಿ" ಎಂದಳು.

ಶ್ರೀಲತಾ ಅವಳ ಕಡೆ ಅನುಮಾನದಿಂದ ನೋಡುತ್ತಾ ಈಗ ಫೋಟೋ ಎತ್ತಿಕೊಂಡು ಒಳಗೆ ಹೋದಳು.

ಐದು ನಿಮಿಷಗಳಾಯಿತು.

"ಒಳಗೆ ಬಾ ರೂಪಕಲಾ ಕೇಸರಿ."

ಆ ರೀತಿ ರೂಮಿನ ಒಳಗಿಂದ ಕೂಗಿದ್ದ ಶ್ರೀಲತಾ ಅಲ್ಲ... ಅಖಿಲೇಶ್ವರಿ.

ಅವರಿಬ್ಬರು ಮಾತಾಡುತ್ತಿದ್ದಾರೆ.

ರೂಮಿನ ಡೋರ್ ಲಾಕ್ ಆಗಿದೆ.

●●●

"ರೂಪಕಲಾ ಕೇಸರಿ... ಸ್ವೀಟ್ ನೇಮ್.'

"ಬರೀ ಹೆಸರು ಮಾತ್ರನಾ?

"ನಿನ್ನ ಸೌಂದರ್ಯ ಮಾರ್ವಲಸ್ ಆಗಿದೆ. ನಿನ್ನ ಪ್ರತಿ ಅಂಗ, ಅಂಗಗಳು ಗುಲಾಬ್ ಜಾಮೂನ್ ರೀತಿ ಇದೆ. ಸೂಪರ್... ಎಲ್ಲಾ ಸೂಪರ್ ಆಗಿದೆ" ಎಂದು ಪನ್ನಾರ್ ಬಾಂಡಾ ಉನ್ಮಾದಗೊಂಡವನಂತೆ ಹೇಳಿದನು.

"ಮತ್ತಾಕೆ ಬೇಗ ಫೋನ್ ಮಾಡ್ಲಿಲ್ಲ."

"ನಾನೊಬ್ಬ ಬಿಸಿನೆಸ್‌ಮ್ಯಾನ್. ಅಷ್ಟೇ ಅಲ್ಲ ರಾಜಕೀಯದ ಹಿನ್ನಲೆ ಮತ್ತು ಪ್ರಭಾವ ಇರುವಂತ ರಾಜಕಾರಣಿ. ನೂರಾರು ಕಾರ್ಯ ಒತ್ತಡಗಳಿರುತ್ತೆ. ನಿನ್ನ ಸೌಂದರ್ಯದ ಸೆಳೆತಕ್ಕೆ ಒಳಗಾಗಿದ್ದರೂ ಸಹ ಫೋನ್ ಮಾಡಲು ಆಗಿರಲಿಲ್ಲ."

"ಯಾವಾಗ ಫ್ರೀ ಆಗ್ತೀರ?'

"ನಾಳೆ ರಾತ್ರಿ ಎಂಟು ಗಂಟೆಗೆ ಬಾ."

'ಎಲ್ಲಿಗೆ ಬರಬೇಕು ಅಂತ ಗೊತ್ತಿಲ್ಲ. ನಾನು ಒಬ್ಬಳೇ ನಿರ್ಜನ ಪ್ರದೇಶಕ್ಕೆ ಬರಲಾರೆ."

"ಹಾಗಾದರೆ ಏನು ಮಾಡೋಣ?"

"ನಾನು ರೇಮಂಡ್ ಸರ್ಕಲ್‌ನಲ್ಲಿ ಬುರ್ಕಾ ಹಾಕಿಕೊಂಡು ನಿಂತಿರುತ್ತೇನೆ. ನನ್ನ ಕೈಯಲ್ಲಿ ಗುಲಾಬಿ ಹೂವುಗಳ ಬೊಕೆ ಇರುತ್ತೆ. ನಿಮ್ಮ ಕಾರಿನ ನಂಬರ್, ಕಲರ್ ಹೇಳಿದರೆ ನಾನು ಐಡೆಂಟಿಫೈ ಮಾಡಿ ಹತ್ತಿರ ಬರ್ತೀನಿ."

"ಹಾಗಾದರೆ ನಾಳೆ ಸಂಜೆ ಆರು ಗಂಟೆಗೆ ನೀನು ರೇಮಂತ್ ಸರ್ಕಲ್‌ನಲ್ಲಿರೋ ಗಾಂಧೀಜಿ ಮಂಟಪದ ಹತ್ತಿರ ಇರಬೇಕು."

"ಆಗಲಿ ಸಾರ್."

"ನಿನ್ನ ಸೌಂದರಕ್ಯೆ ಸೆಕ್ಸ್ ಅಪೀಲ್ ಬರುವ ರೀತಿ ಮೇಕಪ್ ಮತ್ತು ಡ್ರೆಸ್ ಮಾಡಿಕೊಂಡು ಬಂದಿರಬೇಕು.

ಅವಳು ಮಾದಕವಾಗಿ ನಕ್ಕಳು.

"ರಸಿಕ... ಮಹಾ ರಸಿಕ ನೀವು?"

●●●

ಪನ್ನಾರ್ ಬಾಂಡಾ ಈಗ ಕಾರಲ್ಲಿ ಆ ಸರ್ಕಲ್‌ಗೆ ಬಂದಿದ್ದಾನೆ. ಅವಳಿಗಾಗಿ ಹುಡುಕುತ್ತಿದ್ದಾನೆ. ಅವಳು ಕಂಡು ಬರುತ್ತಿಲ್ಲ. ಅವನ ಉದ್ರೇಕ, ಆತುರ ಜಾಸ್ತಿಯಾಗುತ್ತಿದೆ.

ಅವನ ಡ್ರೈವರ್ "ಸಾರ್... ಇಲ್ಲಿಂದ ಯಾವ ಕಡೆ ಹೋಗ್ಬೇಕು' ಎಂದನು.

"ಗಾಂಧಿ ಮಂಟಪದ ಹತ್ತಿರ ಹೂವಿನ ಬೊಕೆ ಹಿಡಿದು ನಿಂತಿರುವ ಲೇಡಿ ಕಂಡು ಬಂದರೆ ನನ್ನ ಹೆಸರು ಹೇಳಿ ಕರ್ಕೊಂಡು ಬಾ."

ಡ್ರೈವರ್ ಅದೇ ರೀತಿ ಮಾಡಿದನು.

ಹತ್ತು ನಿಮಿಷಗಳಾಯಿತು.

ಅವನು ಹಿಂತಿರುಗಿ ಬಂದು "ಸಾರಿ ಸಾರ್... ನೀವು ಹೇಳಿದ ಲೇಡಿ ಯಾರೂ ಇರಲಿಲ್ಲ" ಎಂದು ಹೇಳುತ್ತಿರುವಾಗಲೇ ಉದ್ಯಮಿಯ ಪಕ್ಕದಲ್ಲಿ ಬುರ್ಕಾ ಲೇಡಿ ಬೊಕೆ ಹಿಡಿದು ಕೂತಿರೋದು ಕಂಡು ಬಂದಿತು. "ನೀವು ಆ ಕಡೆ ಹೋದ ಕೂಡಲೇ ಇವಳು ಇಲ್ಲಿಗೆ ಬಂದಳು. ಇನ್ನು ನೀನು ಹೊರಡು."

ಕಾರು ಚಲಿಸುತ್ತಿದೆ!

●●●

ಫಾರಂ ಹೌಸ್‌ನ ಮೊದಲ ಮಹಡಿಯಲ್ಲಿರುವ ರೂಮಿನಲ್ಲಿ ಮಲಗಿದ್ದ ಅವರಿಗೆ ಎಚ್ಚರವಾಯಿತು.

ತೇಲುಗಣ್ಣು ಮಾಡುತ್ತಿದ್ದಾರೆ. ಮಂಪರು ಆವರಿಸುತ್ತಿದೆ.

ಅವನನ್ನು ಬಂಧಿಸಲಾಗಿದೆ.

ತುಂಬಾ ಕಷ್ಟದಿಂದ ಕಣ್ಣುಗಳನ್ನು ಅಗಲಿಸಿ ನೋಡಿದರು. ಎದುರಿಗೆ ಬುರ್ಕಾ ಧರಿಸಿರುವ ಇಬ್ಬರು ಹೆಂಗಸರು ನಿಂತಿದ್ದಾರೆ.

ಅವರಿಗೆ ಭಯಾಶ್ಚರ್ಯವಾಯಿತು.

ಒಬ್ಬಳು ಬುರ್ಕಾ ತೆಗೆದಳು.

ಇವನ ಪತ್ನಿ... ಇವನಿಂದ ದೂರಾಗಿರುವ ಪತ್ನಿ ಅಖಿಲೇಶ್ವರಿ...!

ಮತ್ತೊಬ್ಬಳು ಬುರ್ಕಾ ತೆಗೆದಳು.

"ನಾನೇ ರೂಪಕಲಾ ಕೇಸರಿ."

ಅವನು ಬೆಚ್ಚಿಬಿದ್ದನು. ಇಡೀ ಶರೀರದಲ್ಲಿ ಕಂಪನ ಉಂಟಾಯಿತು. ವೀಡಿಯೋ ದೃಶ್ಯಗಳಲ್ಲಿ, ಫೋಟೋಗಳಲ್ಲಿದ್ದ ಅಪ್ಸರೆ ರೂಪಿನ ಮಾದಕ ಚೆಲುವೆ ಅಲ್ಲ.

ದಢೂತಿ ಶರೀರದ ಕುರೂಪಿ ಹೆಂಗಸು.

ಮುಖದಲ್ಲಿ ಸಿಡುಬಿನ ಕಲೆಗಳಿವೆ.

ದಪ್ಪ ತುಟಿಗಳು ಸೀಳಿವೆ.

ಅಖಿಲೇಶ್ವರಿ ಕೋಪ, ಆವೇಶದಿಂದ "ಮದುವೆಯಾದ ದಿನದಿಂದ ನಿಮ್ಮಿಂದ ದೂರಾಗುವತನಕ ಅರವತ್ತೆಂಟು ಸಲ ನನ್ನ ಮೇಲೆ ಅತ್ಯಾಚಾರ ಮಾಡಿ ಮರುಹಿಂಸೆ ಕೊಟ್ಟಿದ್ದೀರ. ನಿಮ್ಮ ವಿಚಿತ್ರ-ವಿಲಕ್ಷಣ ತೆವಲುಗಳನ್ನು ತೀರಿಸಿಕೊಳ್ಳಲು ಹೆಂಡತಿ ಮೇಲೆ ನಿರಂತರವಾಗಿ ಅತ್ಯಾಚಾರ ಮಾಡಿದ್ದೀರ. ರೂಪವತಿಯರಾದ ಕಾಲೇಜಿನ ಯುವತಿಯರು, ಕಾಲ್ ಗರ್ಲ್‌ಗಳು ರೇಪ್ ಆಟಕ್ಕೆ ಬಲಿಯಾಗಿದ್ದಾರೆ. ನಾನು ಸೇಡು ತೀರಿಸಿಕೊಳ್ಳಲು ಮತ್ತು ಇನ್ನು ಮುಂದೆ ನಿಮಗೆ ಕಾಮದಾಹಕ್ಕೆ ಹೆಣ್ಣುಗಳು ಬಲಿಯಾಗಬಾರದು ಅಂತ ನಿಮ್ಮನ್ನು ಈ ಲೋಕದಿಂದಲೇ ಕಳಿಸುತ್ತೇನೆ" ಎಂದು ಕುರೂಪಿ ಹೆಂಗಸಿನ ಕಡೆ ನೋಡಿದಳು. ಆ ಕ್ಷಣದಲ್ಲಿ ಬೆತ್ತಲಾದ ಇವನ ಮೇಲೆ ಬಿದ್ದು ಅತ್ಯಾಚಾರದ ಆಟ ಆಡಿ ಕೊನೆಗೆ ಕತ್ತನ್ನು ಹಿಸುಕಿ ಕೊಲೆ ಮಾಡಿದಳು. ಇವರಿಬ್ಬರು ಬುರ್ಕಾ ಧರಿಸಿ ಬ್ಯಾಕ್ ಡೋರ್ ಮೂಲಕ ಹೊರಟು ಹೋದರು. ☯

## ವಿಲನ್ ಪಾತ್ರಕ್ಕೆ ಅತಿಹೆಚ್ಚು ಸಂಭಾವನೆ ಪಡೆದ ಯಶ್



ಭಾರತೀಯ ಚಿತ್ರರಂಗದ ಇತಿಹಾಸದಲ್ಲಿಯೇ ಖಳನಾಯಕ ಪಾತ್ರಕ್ಕಾಗಿ ಮೊದಲಬಾರಿಗೆ ಬರೋಬ್ಬರಿ 200 ಕೋಟಿ ರೂ. ಸಂಭಾವನೆ ಪಡೆಯುತ್ತಿದ್ದಾರೆ ಎಂದು ತಿಳಿದುಬಂದಿದೆ. ಈ ಮೂಲಕ ಕನ್ನಡದ ಸ್ಟಾರ್ ನಟನೊಬ್ಬ ಇದೀಗ ಭಾರತೀಯ ಚಿತ್ರರಂಗದಲ್ಲಿ ಹೊಸ ದಾಖಲೆಯನ್ನೇ ಬರೆಯುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ನಟರ ಪಾತ್ರಕ್ಕಿಂತ ವಿಲನ್ ಪಾತ್ರಗಳಿಗೇ ಹೆಚ್ಚಿನ ಪ್ರಾಮುಖ್ಯತೆ ಬಂದಿದೆ. ಅಷ್ಟೇ ಅಲ್ಲ, ನಾಯಕರ ಸಂಭಾವನೆಯೂ ಹೆಚ್ಚಾಗಿರುವುದರಿಂದ ಖಳನಾಯಕರ ಸಂಭಾವನೆಯೂ ಹೆಚ್ಚಿದೆ. ಈಗ ಹೈ-ಬಜೆಟ್ ಚಿತ್ರಗಳಲ್ಲಿ ಮುಖ್ಯವಾಹಿನಿಯ ಹೀರೋಗಳು ವಿಲನ್ ಆಗುವ ಸಂಖ್ಯೆಯೂ ಸಹ ಹೆಚ್ಚುತ್ತಿದೆ. ಅವರಲ್ಲಿ ಕನ್ನಡದ ನಟರೊಬ್ಬರು ಚಿತ್ರವೊಂದಕ್ಕೆ ಬರೋಬರಿ 200 ಕೋಟಿ ರೂಪಾಯಿ ಸಂಭಾವನೆ ಪಡೆದಿದ್ದಾರೆ ಎಂದು ತಿಳಿದುಬಂದಿದೆ. ಚಿತ್ರರಂಗದಲ್ಲಿ ಸಾಮಾನ್ಯವಾಗಿ ಬಿ-ಟೌನ್ ಮಂದಿಯೇ ಅತಿಹೆಚ್ಚು ಸಂಭಾವನೆ ಪಡೆದುಕೊಳ್ಳುತ್ತಿದ್ದರು. ಬಳಿಕ ದಕ್ಷಿಣದ ಸ್ಟಾರ್ ಗಳಾದ ರಜನಿಕಾಂತ್, ಕಮಲ್‌ಹಾಸನ್ ಮತ್ತು ಪ್ರಭಾಸ್ ಸೇರಿದಂತೆ ಹಲವು ನಟರು ದುಪಟ್ಟು ಸಂಭಾವನೆ ಪಡೆಯುತ್ತಿರುವುದು ವರದಿಯಾಗಿದೆ. ಇದೀಗ ಬಾಲಿವುಡ್‌ನ ಶಾರುಖ್‌ಖಾನ್, ಸಲ್ಮಾನ್ ಖಾನ್, ರಣಬೀರ್ ಕಪೂರ್ ಸೇರಿದಂತೆ ದಕ್ಷಿಣದ ಹಲವಾರು ನಟರ ಸಂಭಾವನೆಯನ್ನು ಮೀರಿಸಿ ನಮ್ಮ ಕನ್ನಡ ಚಿತ್ರರಂಗದ ಸ್ಟಾರ್ ನಟರೊಬ್ಬರು ನವ ಇತಿಹಾಸವನ್ನು ಬರೆಯುತ್ತಿದ್ದಾರೆ. ಅವರು ಬೇರೆ ಯಾರೂ ಅಲ್ಲ, ನಮ್ಮ ಚಿತ್ರರಂಗದ ಖ್ಯಾತಿಯನ್ನು ವಿಶ್ವಾದ್ಯಂತ ಪಸರಿಸಿದ ಕೆಜಿಎಫ್ ಖ್ಯಾತಿಯ ನಟ ರಾಕಿಂಗ್ ಸ್ಟಾರ್ ಯಶ್. ಬಾಲಿವುಡ್‌ನ ನಿತೇಶ್ ತಿವಾರಿ ಅವರ ನಿರ್ದೇಶದಲ್ಲಿ ಮೂಡಿಬರುತ್ತಿರುವ ರಾಮಾಯಣ ಎನ್ನುವ ಚಿತ್ರದಲ್ಲಿ ನಟ ಯಶ್ ಅವರು ರಾವಣನ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ, ಈ ಪಾತ್ರಕ್ಕೆ ಯಶ್ ಅವರು ಬರೋಬ್ಬರಿ 200 ಕೋಟಿ ರೂ. ಗಳ ಸಂಭಾವನೆ(ವಿತರಣೆಯ ಪಾಲು ಮತ್ತು ಸಿನಿಮಾದ ಶುಲ್ಕ) ಪಡೆದಿದ್ದಾರೆ ಎಂದು ವರದಿಯಾಗಿದೆ. ಅಲ್ಲದೇ, ಈ ಚಿತ್ರದಲ್ಲಿನ ರಾಮನ ಪಾತ್ರಧಾರಿ ರಣಬೀರ್ ಕಪೂರ್‌ಗಿಂತ ಯಶ್ ಸಂಭಾವನೆಯೇ ದುಪಟ್ಟು ಎಂದು ಹೇಳಲಾಗುತ್ತಿದೆ.

## ಸಂಜು ಗೀತಾ ಮಳೆ ಹಾಡಿಗೆ ಸುದೀಪ್ ಸಾಥ್

ಪವಿತ್ರ ಇಂಟರ್ ನ್ಯಾಷನಲ್ ಮೂವೀಮೇಕರ್ಸ್ ಅಡಿಯಲ್ಲಿ ಚಲವಾದಿ ಕುಮಾರ್ ಅವರ ನಿರ್ಮಾಣದ ಬಹು ನಿರೀಕ್ಷಿತ ಸಂಜು ವೆಡ್ಸ್ ಗೀತಾ-2 ಚಿತ್ರ, ಜನವರಿ ಹತ್ತರಂದು ಪ್ರಪಂಚದಾದ್ಯಂತ ಬಿಡುಗಡೆಯಾಗಲಿದೆ. ರೇಶ್ಮೆ ಬೆಳೆಗಾರರ ಸಮಸ್ಯೆಯ ಜತೆಗೊಂಡು ನವಿರಾದ ಪ್ರೇಮಕಥೆಯನ್ನು ನಾಗಶೇಖರ್ ಅವರು ಈ ಚಿತ್ರದಲ್ಲಿ ಹೇಳಲು ಪ್ರಯತ್ನಿಸಿದ್ದಾರೆ. ಈಗಾಗಲೇ ಆನಂದ ಆಡಿಯೋ ಮೂಲಕ ರಿಲೀಸಾಗಿರುವ ಈ ಚಿತ್ರದ ಹಾಡುಗಳು ಕೇಳುಗರ ಮನ ಗೆದ್ದಿವೆ. ಇದೀಗ ಈ ಚಿತ್ರದ ಮತ್ತೊಂದು ಹಾಡನ್ನು ಕಿಚ್ಚ ಸುದೀಪ್ ಅವರು ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದ್ದಾರೆ, ಈ ಕುರಿತು ಮಾಹಿತಿ ಹಂಚಿಕೊಳ್ಳಲು ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ನಿರ್ದೇಶಕ ನಾಗಶೇಖರ್, ನಾಯಕ ಶ್ರೀನಗರ ಕಿಟ್ಟಿ, ಸಂಗೀತ ನಿರ್ದೇಶಕ ಶ್ರೀಧರ್ ವಿ. ಸಂಭ್ರಮ್, ನಿರ್ಮಾಪಕ ಚಲವಾದಿ ಕುಮಾರ್ ಹಾಜರಿದ್ದು ಚಿತ್ರದ ಕುರಿತಂತೆ ಮಾತನಾಡಿದರು,



ಈ ಸಂದರ್ಭದಲ್ಲಿ ಮಾತು ಆರಂಭಿಸಿದ ನಾಗಶೇಖರ್, ರೇಶ್ಮೆ ಬೆಳೆಗಾರರ ಬಗ್ಗೆ ಒಂದು ಗಹನವಾದ ವಿಚಾರ ಇಟ್ಟುಕೊಂಡು ಈ ಚಿತ್ರವನ್ನು ಮಾಡಿದ್ದೇನೆ, ಅದರ ಜತೆಗೊಂಡು ಲವ್ ಸ್ಟೋರಿಯೂ ಸಾಗುತ್ತದೆ, ಶಿಡ್ಲಘಟ್ಟದಲ್ಲಿ ಪ್ರಾರಂಭವಾಗುವ ಈ ಚಿತ್ರದಕಥೆ ಸ್ವಿಟ್ ಝರ್‌ಲ್ಯಾಂಡ್ ವರೆಗೂ ಹೋಗುತ್ತದೆ, ಚಿತ್ರದಲ್ಲಿ ರೇಶ್ಮೆ ಬೆಳೆಗಾರ ಸಂಜು ಪಾತ್ರದಲ್ಲಿ ನಟ ಶ್ರೀನಗರ ಕಿಟ್ಟಿ ಅವರು ಕಾಣಿಸಿಕೊಂಡಿದ್ದು, ನಾಯಕಿ ಗೀತಾ ಪಾತ್ರದಲ್ಲಿ ರಚಿತಾರಾಮ್ ಅಭಿನಯಿಸಿದ್ದಾರೆ. ಶಿಡ್ಲಘಟ್ಟದಲ್ಲಿ ಅತಿಹೆಚ್ಚು ರೇಶ್ಮೆ ಬೆಳೆಯುತ್ತಾರೆ, ಆದರೆ ಅದರ ಕ್ರೆಡಿಟ್ ಬೇರೊಂದು ಕಡೆ ಹೋಗುತ್ತದೆ, ಇದು ಬೇರೆಯದೇ ಪ್ಯಾಟ್ರನ್ ಸಿನಿಮಾ, ಒಂದು ಸಿನಿಮಾಗೆ ಹಾಡುಗಳೇ ಇನ್‌ವಿಟೇಶನ್, ಚಿತ್ರದಲ್ಲಿ ಪ್ರತಿ ಹಾಡಿಗೂ ಅದರದೇ ಆದ ಪ್ರಾಮುಖ್ಯತೆಯಿದೆ, ಈ ಹಿಂದೆ 2 ಸಾಂಗ್ ಬಿಟ್ಟಿದ್ದೆವು, ಅವು ನಮ್ಮ ನಿರೀಕ್ಷೆಗೂ ಮೀರಿ ಹಿಟ್ ಆಗಿವೆ, ಈ ಹಿಂದೆ ಗಗನವೇ ಬಾಗಿ ಸಾಂಗ್ ಹಾಡಿದ್ದ ಶ್ರೇಯಾ ಘೋಷಾಲ್ ಕೈಲಿ ಹಾಡಿಸಬೇಕೆಂದಿತ್ತು, ಇತ್ತೀಚೆಗೆ ಅವರು ಕನ್ನಡದಲ್ಲಿ ಹಾಡಲ್ಲ ಎಂದು ಗೊತ್ತಾಗಿ ಅಚ್ಚ ಕನ್ನಡದ ಪ್ರತಿಭೆ ಸಂಗೀತಾ ಅವರ ಕೈಲಿ ಹಾಡಿಸಿದೆವು, ತುಂಬಾ ಚೆನ್ನಾಗಿ ಬಂತು, ಹಾಗಾಗಿ ಅವರಿಂದಲೇ ಮತ್ತೆ 3 ಹಾಡುಗಳನ್ನು ಹಾಡಿಸಿದೆವು, ಜತೆಗೆ ನಂದಿತಾ ಕೂಡ ಹಾಡಿದ್ದಾರೆ, ಸ್ವಿಟ್ಜರ್‌ಲ್ಯಾಂಡ್‌ನಲ್ಲಿ 11 ಲೊಕೇಶನ್ ಗಳನ್ನು ಗುರ್ತಿಸಿದೆ, ನಿರ್ಮಾಪಕರು ಯಾವುದಕ್ಕೂ ಬೇಡ ಎನ್ನದೆ ಒಂದೊಳ್ಳೇ ಚಿತ್ರವನ್ನು ಕನ್ನಡಿಗರಿಗೆ ನೀಡಬೇಕೆಂದು ಧಾರಾಳವಾಗಿ ಖರ್ಚು ಮಾಡಿದ್ದಾರೆ. ಇವತ್ತು ಅವರ ಬರ್ತ್‌ಡೇ, ಈ ಹಾಡನ್ನು ಅವರಿಗೆ ಡೆಡಿಕೇಟ್ ಮಾಡುತ್ತಿದ್ದೇವೆ ಎಂದು ಹೇಳಿದರು, ಈಗಾಗಲೇ ರಿಲೀಸಾಗಿರುವ ಅವನು ಸಂಜು ಅವಳು ಗೀತಾ, ಅವರಿಬ್ಬರು ಸೇರಲೂ ಸಂಗೀತಾ ಎಂಬ ಮೆಲೋಡಿ ಹಾಡು ಸಂಗೀತ ಪ್ರಿಯರ ಮೆಚ್ಚಿನ ಗೀತೆಯಾಗಿ ಹೊರಹೊಮ್ಮಿದೆ.

ನಂತರ ನಿರ್ಮಾಪಕ ಛಲವಾದಿ ಕುಮಾರ್ ಮಾತನಾಡುತ್ತ ನಿರ್ದೇಶಕರಿದ್ದಾಗ ನಾವು ಮಾತನಾಡಲು ಅವಕಾಶ ಇರಲ್ಲ, ಈಹಿಂದೆ ನಾನೊಂದು ಸಿನಿಮಾ ಮಾಡಿದ್ದೆ, ಕಾರಣಾಂತರಗಳಿಂದ ಅದು ರಿಲೀಸಾಗಲಿಲ್ಲ, ಇದು ನನ್ನ ನಿರ್ಮಾಣದ 2ನೇ ಚಿತ್ರ, ಈ ಮೊದಲು ನನ್ನದೇ ಒಂದು ಕಥೆ ಮಾಡಿಕೊಂಡಿದ್ದೆ, ನಂತರ ನಾಗಶೇಖರ ಹೇಳಿದ ಈ ಸ್ಟೋರಿ ನನಗೆ ತುಂಬಾ ಇಷ್ಟವಾಯಿತು, ಎಲ್ಲರೂ ಸೇರಿ ಚಿತ್ರವನ್ನು ಪ್ರಾರಂಭಿಸಿದೆವು, ಸ್ವಿಟ್ಜರ್ ಲ್ಯಾಂಡ್‌ನಲ್ಲಿ ಶೂಟ್ ಮಾಡಿದ್ದು ಒಂದು ಟ್ರಿಪ್ ಹೋಗಿಬಂದಂಗಾಯ್ತು, ಇದೊಂದು ಅಪ್ಪಟ ಫ್ಯಾಮಿಲಿ ಸ್ಟೋರಿ, ಜತೆಗೊಂಡು ನವಿರಾದ ಪ್ರೇಮದ ಎಳೆಯೂ ಸಹ ಸಾಗುತ್ತದೆ. ಕ್ಯಾಮೆರಾ ಮ್ಯಾನ್ ಸತ್ಯ ಹೆಗಡೆ, ಸಂಗೀತ ನಿರ್ದೇಶಕ ಶ್ರೀಧರ ವಿ. ಸಂಭ್ರಮ್ ಎಲ್ಲರೂ ಸಪೋರ್ಟ್ ಮಾಡಿದ್ದರಿಂದ ಸಿನಿಮಾ ತುಂಬಾ ಚೆನ್ನಾಗಿ ಬಂದಿದೆ, ಬಂಗಾರದ ಮನುಷ್ಯ ಥರದ ಚಿತ್ರ, ಮೊನ್ನೆಯಷ್ಟೇ ಸೆನ್ಸಾರಾಯಿತು, ಒಂಚೂರೂ ಕಟ್ ಹೇಳದೆ ಯು ಕೊಟ್ಟಿದ್ದಾರೆ ಎಂದು ಹೇಳಿದರು.

ನಾಯಕ ಶ್ರೀನಗರ ಕಿಟ್ಟಿ ಅವರು ಈ ಚಿತ್ರದಲ್ಲಿ ಮೊದಲಬಾರಿಗೆ ಒಬ್ಬ ರೇಶ್ಮೆ ಬೆಳೆಗಾರನಾಗಿ ಕಾಣಿಸಿಕೊಂಡಿದ್ದಾರೆ. ವಿಶೇಷವಾಗಿ ಈ ಚಿತ್ರದಲ್ಲಿ ನಟ ಚೇತನ್ ಚಂದ್ರ ಅವರು ಗೆಸ್ಟ್ ಅಪೀಯರೆನ್ಸ್ ಆಗಿ ಕಾಣಿಸಿಕೊಂಡಿದ್ದಾರೆ, ರಾಗಿಣಿ ದ್ವಿವೇದಿ ಅವರ ಡ್ಯಾನ್ಸ್ ನಂಬರ್ ಸಾಂಗ್ ಈಗಾಗಲೇ ಎಲ್ಲರಿಗೂ ಇಷ್ಟವಾಗಿದೆ. ಉಳಿದಂತೆ ಸತ್ಯ ಹೆಗಡೆ ಅವರ ಛಾಯಾಗ್ರಹಣ, ಶ್ರೀಧರ ವಿ. ಸಂಭ್ರಮ್ ಅವರ ಸಂಗೀತ ನಿರ್ದೇಶನ, ಡಿಫರೆಂಟ್ ಡ್ಯಾನಿ ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ, ರಾಗಿಣಿ ದ್ವಿವೇದಿ, ಚೇತನ್ ಚಂದ್ರ, ರಂಗಾಯಣ ರಘು, ಸಾಧು ಕೋಕಿಲ, ತಬಲಾನಾಣಿ, ಗಿಚ್ಚಿಗಿಲಿಗಿಲಿ ವಿನೋದ್ ಅಲ್ಲದೆ ಖಳನಟ ಸಂಪತ್ ಕುಮಾರ್ ಹೆಸರಾಂತ ಕಲಾವಿದರೇ ಚಿತ್ರದಲ್ಲಿ ಅಭಿನಯಿಸಿದ್ದಾರೆ.

## ದರ್ಶನ್ ಜಾಮೀನು ರದ್ದತಿಗೆ ಸುಪ್ರೀಂ ಕೋರ್ಟಿಗೆ ಮನವಿ

ದರ್ಶನ್‌ಗೆ ನೀಡಿರುವ ಜಾಮೀನು ರದ್ದು ಕೋರಿ ಸುಪ್ರಿಂ ಕೋರ್ಟಿಗೆ ಮೇಲ್ಮನವಿ ಸಲ್ಲಿಸಲು ರಾಜ್ಯ ಗೃಹ ಇಲಾಖೆ ಪೊಲೀಸರಿಗೆ ಅನುಮತಿ ಕೊಟ್ಟಿದೆ. ದರ್ಶನ್‌ಗೆ ರಾಜ್ಯ ಹೈಕೋರ್ಟು ರೆಗ್ಯುಲರ್ ಜಾಮೀನು ನೀಡಿದ ಹಿನ್ನೆಲೆಯಲ್ಲಿ, ಅದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಬೆಂಗಳೂರು ಪೊಲೀಸ್ ಆಯುಕ್ತ ದಯಾನಂದ್ ಅವರು ಎರಡು ವಾರದ ಹಿಂದೆ ಪ್ರಕಟಿಸಿದ್ದರು. ಈ ಹಿನ್ನೆಲೆಯಲ್ಲಿ ಈ ಪ್ರಕರಣದ ತನಿಖಾಧಿಕಾರಿಗಳು ಇದ್ದ ಸಭೆಯನ್ನು ಕರೆದು ಎಲ್ಲಾ ದಾಖಲೆಯನ್ನು ಸಂಗ್ರಹಿಸಲು ಆದೇಶಿಸಿದ್ದರು. ಅದರಂತೆ ಪೊಲೀಸರು ಕಾರ್ಯಪ್ರವೃತ್ತರಾಗಿದ್ದಾರೆ.



ಸುಪ್ರೀಂ ಕೋರ್ಟಿಗೆ ಮೇಲ್ಮನವಿ ಸಲ್ಲಿಸಲು ಪೊಲೀಸ್ ಇಲಾಖೆ ನಿರ್ಧರಿಸಿರುವುದರಿಂದ ದರ್ಶನ್‌ಗೆ ಮತ್ತೆ ಆತಂಕ ಸೃಷ್ಠಿ ಆಗಲಿದೆ; ಇಲ್ಲಿ ಆತ ಹೇಗೆ ಪಾರಾಗಲಿದ್ದಾರೆ ಎಂಬುದನ್ನು ಮುಂದಿನ ದಿನಗಳಲ್ಲಿ ಕಾದು ನೋಡಬೇಕು. ದರ್ಶನ್ ಪರ ವಾದ ಮಾಡುವ ವಕೀಲರು ಸಾಕ್ಷಾಧಾರಗಳನ್ನು ಬಲವಾಗಿ ಪ್ರಶ್ನಿಸುವ ಸಾಧ್ಯತೆ ಇದೆ. ರಾಜ್ಯದ ಹಿರಿಯ ವಕೀಲ ಸಿ. ವಿ. ನಾಗೇಶ್ ಸಾಕ್ಷಿಗಳನ್ನು ಪ್ರಶ್ನಿಸಿದ್ದರಿಂದಲೇ ದರ್ಶನ್ ಹಾಗೂ ಪವಿತ್ರಾಗೌಡ ಮತ್ತು ಇತರರಿಗೆ ಜಾಮೀನು ಸಿಕ್ಕಿರುವುದು.

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಹಿನ್ನೆಲೆಯಲ್ಲಿ ದರ್ಶನ್ ಹಾಗೂ ಪವಿತ್ರಾಗೌಡ ದಸ್ತಗಿರಿ ಆಗಿದ್ದರು. ಇಬ್ಬರೂ ಆರು ತಿಂಗಳು ಜೈಲಿನಲ್ಲೂ ಕಳೆದಿದ್ದರು. ಈ ಸಮಯದಲ್ಲಿ ದರ್ಶನ್‌ಗೆ ಆರೋಗ್ಯಸಮಸ್ಯೆ ಹಿನ್ನಲೆಯಲ್ಲಿ ಆರು ವಾರಗಳ ಮಧ್ಯಂತರ ಜಾಮೀನು ಸಿಕ್ಕಿತ್ತು. ಆದರೆ ನ್ಯಾಯಾಲಯಕ್ಕೆ ಮನವಿ ಮಾಡಿದಂತೆ ದರ್ಶನ್ ಈ ಅವಧಿಯಲ್ಲಿ ಸರ್ಜರಿಯೂ ಸೇರಿದಂತೆ ಯಾವುದೇ ಚಿಕಿತ್ಸೆ ಪಡೆದಿರಲಿಲ್ಲ. ಫಿಸಿಯೋಥೆರಪಿಯಿಂದ ದರ್ಶನ್ ಜಾಮೀನು ರದ್ದತಿಗೆ ಸುಪ್ರೀಂ ಕೋರ್ಟಿಗೆ ಮನವಿ ಆರೋಗ್ಯ ಸುಧಾರಿಲು ಸಾಧ್ಯವಿದೆ ಎಂದು ವೈದ್ಯರು ಸೂಚಿಸಿದ್ದರು. ಈ ಮೂಲಕ ದರ್ಶನ್ ಚಿಕಿತ್ಸೆಯಲ್ಲಿ ಮಾಹಿತಿ ದಾರಿ ತಪ್ಪಿದೆ ಎಂದು ಪೊಲೀಸರು ವಾದ ಮಂಡಿಸುವ ಸಾಧ್ಯತೆ ಈಗ ಬಲವಾಗಿದೆ. ಅದನ್ನು ನ್ಯಾಯಾಲಯ ಹೇಗೆ ಪರಿಗಣಿಸುತ್ತದೆ ಎಂದು ಕಾದು ನೋಡಬೇಕು.

ದರ್ಶನ್ ತಾತ್ಕಾಲಿಕ ಜಾಮೀನು ಅವಧಿ ಮುಗಿಯುವ ಹಂತದಲ್ಲಿ ಹೈಕೋರ್ಟು ಆತನಿಗೆ ರೆಗ್ಯುಲರ್ ಜಾಮೀನು ಕೊಟ್ಟಿತು. ಅನಂತರ ದರ್ಶನ್, ಪವಿತ್ರಾಗೌಡ ಜೈಲಿನಿಂದ ಬಿಡುಗಡೆಗೊಂಡರು. ಇದು ಹೈಪ್ರೊಫೈಲ್ ಸೆಲೆಬ್ರಿಟಿ ಪ್ರಕರಣ ಆಗಿದ್ದುದರಿಂದ, ಪೊಲೀಸರು ಈಗ ಜಾಮೀನು ರದ್ದು ಕೋರಿ ಸುಪ್ರೀಂ ಕೋರ್ಟಿಗೆ ಮೇಲ್ಮನವಿ ಸಲ್ಲಿಸಲು ನಿರ್ಧರಿಸಿದ್ದಾರೆ. ಅದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆ ಹಾಗೂ ಅರೋಪ ಪಟ್ಟಿಯನ್ನು ಪೊಲೀಸರು ಸಂಗ್ರಹಿಸಿದ್ದಾರೆ. ಅದು ಎಷ್ಟರಮಟ್ಟಿಗೆ ಪರಿಣಾಮಕಾರಿ ಆಗಿದೆ ಎಂಬುದನ್ನು ಕಾದುನೋಡಬೇಕು. ಸುಪ್ರೀಂ ಕೋರ್ಟು ಸಾಕ್ಷ್ಯಾಧಾರಗಳಿಗೆ ಮಾತ್ರ ಗಮನ ಕೊಡುತ್ತದೆ.

ಸುಪ್ರೀಂ ಕೋರ್ಟಿಗೆ ರಾಜ್ಯ ಪೊಲೀಸರು ಯಾವಾಗ ಮೇಲ್ಮನವಿ ಸಲ್ಲಿಸುತ್ತಾರೆ ಎಂಬುದು ಇನ್ನೂ ಅಕೃತವಾಗಿಲ್ಲ . ಈಗ ಲಭ್ಯ ಇರುವ ಮಾಹಿತಿ ಪ್ರಕಾರ ಮೇಲ್ಮನವಿ ಮುಂದಿನವಾರ ಸಲ್ಲಿಕೆ ಆಗಬಹುದು. ಸರ್ಕಾರದ ಪರವಾಗಿ ದೆಹಲಿಯಲ್ಲಿರುವ ವಕೀಲರು ವಾದಿಸಲಿದ್ದಾರೆ. ಸುಪ್ರೀಂ ಕೋರ್ಟಿಗೆ ಮೇಲ್ಮನವಿ ಸಲ್ಲಿಸಿದ ನಂತರ ಅದು ಬೆಂಚ್‌ಗೆ ಬರಲು ಎರಡುವಾರ ಬೇಕಾಗಬಹುದು. ದರ್ಶನ್ ಪರವಾಗಿ ಯಾರು ವಾದಿಸಲಿದ್ದಾರೆ ಎಂಬುದನ್ನು ಕಾದುನೋಡಬೇಕು. ಇನ್ನು ಸುಪ್ರೀಂ ಕೋರ್ಟಿನಲ್ಲಿ ಏಕಸದಸ್ಯ ಪೀಠ ಇರುವುದಿಲ್ಲ. ಇಬ್ಬರಾದರೂ ನ್ಯಾಯಾಧೀಶರು ಇರುತ್ತಾರೆ. ಇವರು ವಾದ-ವಿವಾದ ಆಲಿಸುತ್ತಾರೆ. ಅನಂತರ ತೀರ್ಪು ಕೊಡುತ್ತಾರೆ. ಒಟ್ಟಿನಲ್ಲಿ ದರ್ಶನ್‌ಗೆ ಜನವರಿ ತಿಂಗಳು ಗಂಡಾಂತರದ ದಿನಗಳು ಎನ್ನಬಹುದು.

ಹೈಕೋರ್ಟಿನ ತೀರ್ಪನ್ನು ಸುಪ್ರೀಂ ಕೋರ್ಟು ಎತ್ತಿ ಹಿಡಿದಿದ್ದೇ ಆದಲ್ಲಿ ಮತ್ತೆ ಬಂಧನದ ಭೀತಿಯಿಂದ ದರ್ಶನ್ ಹೊರಬರಬಹುದು: ಹಾಗಾಗದಿದ್ದಲ್ಲಿ ದರ್ಶನ್ ಮತ್ತೆ ಜೈಲಿಗೆ ಎಂಟ್ರಿ ಹಾಕಬೇಕಾಗುತ್ತದೆ. ಒಟ್ಟಿನಲ್ಲಿ ಕರ್ನಾಟಕ ಪೊಲೀಸರು ದರ್ಶನ್ ಪ್ರಕರಣವನ್ನು ಬಹು ಗಂಭೀರವಾಗಿ ತೆಗೆದುಕೊಂಡಂತಿದೆ.

# ಪೊಲೀಸ್ ಅಧಿಕಾರಿಯಾಗಿ ಕಿಚ್ಚ ಸುದೀಪ್ ಮಾಸ್ ಅವತಾರ!

ಬಹು ನಿರೀಕ್ಷಿತ ಕನ್ನಡದ ಆಕ್ಷನ್-ಥ್ರಿಲ್ಲರ್, ಮ್ಯಾಕ್ಸ್ ಕ್ರಿಸ್‌ಮಸ್‌ನಲ್ಲಿ ಥಿಯೇಟರ್‌ಗಳಲ್ಲಿ ರಿಲೀಸ್ ಆಗಿದೆ. ಸುಮಾರು ಎರಡು ವರ್ಷಗಳ ನಂತರ ಕಿಚ್ಚ ಸುದೀಪ್ ಮುಖ್ಯ ಪಾತ್ರದಲ್ಲಿ ದೊಡ್ಡ ಪರದೆಗೆ ಮರಳಿದ್ದಾರೆ. ಚಿತ್ರವನ್ನು ವಿಜಯ್ ಕಾರ್ತಿಕೇಯನ್ ನಿರ್ದೇಶಿಸಿದ್ದಾರೆ. ಈ ಸುದೀರ್ಘ ಕಾಯುವಿಕೆಯ ನಂತರ ಮ್ಯಾಕ್ಸ್ ತೃಪ್ತಿದಾಯಕ ಸಿನಿಮೀಯ ಅನುಭವವನ್ನು ನೀಡುತ್ತದೆಯೇ?



ಒಳ್ಳೆಯ ಕೆಲಸ ಮಾಡಿದಕ್ಕೂ ಪದೇ ಪದೇ ಸಸ್ಪೆಂಡ್ ಎಂಬ ಶಿಕ್ಷೆ ಅನುಭವಿಸಿರುವ ಅರ್ಜುನ್ ಮಹಾಕ್ಷಯ್ ಅಲಿಯಾಸ್ ಮ್ಯಾಕ್ಸ್ (ಸುದೀಪ್) ಹಳೆಯ ಪೊಲೀಸ್ ಸ್ಟೇಷನ್‌ವೊಂದಕ್ಕೆ ಹೊಸದಾಗಿ ಇನ್ಸ್‌ಪೆಕ್ಟರ್ ಆಗಿ ಚಾರ್ಜ್ ತೆಗೆದುಕೊಳ್ಳಬೇಕಿರುತ್ತದೆ. ಆದರೆ ಡ್ಯೂಟಿಗೆ ರಿಪೋರ್ಟ್ ಮಾಡಿಕೊಳ್ಳುವ ಹಿಂದಿನ ರಾತ್ರಿಯೇ ಆಗಬಾರದ್ದೆಲ್ಲಾ ಆಗಿಹೋಗುತ್ತದೆ. ಕೆಲಸಕ್ಕೆ ಹಾಜರಾಗುವ ದಿನದ ಹಿಂದಿನ ಸಂಜೆ ಆತ ಪೊಲೀಸ್ ಠಾಣೆ ಇರುವ ಊರಿಗೆ ಬರುತ್ತಾನೆ. ಅದೇ ಸಂದರ್ಭದಲ್ಲಿ ರಾಜಕಾರಣಿಗಳಿಬ್ಬರ ಮಕ್ಕಳು ಕುಡಿದು ಕಾರು ಚಾಲನೆ ಮಾಡಿ, ರಸ್ತೆಯಲ್ಲಿ ಗಸ್ತಿನಲ್ಲಿದ್ದ ಪೊಲೀಸರ ಮೇಲೆ ಕೈ ಮಾಡುತ್ತಾರೆ. ಇದನ್ನು ತಡೆಯುವ ನಾಯಕ ಅವರಿಬ್ಬರನ್ನು ಹಿಡಿದು ಪೊಲೀಸ್ ಠಾಣೆಗೆ ಕರೆದೊಯ್ದು ಎಫ್‌ಐಆರ್ ಹಾಕಲು ಹೇಳುತ್ತಾನೆ. ಇಲ್ಲಿಂದ ಕಥೆ ತೆರೆದುಕೊಳ್ಳುತ್ತದೆ, ಒಂದಿಡೀ ರಾತ್ರಿಯಲ್ಲಿ ಏನೆಲ್ಲಾ ಅವಘಡಗಳು ನಡೆಯುತ್ತವೆ ಮತ್ತು ಅದನ್ನು ಅರ್ಜುನ್ ಮಹಾಕ್ಷಯ್ ಹೇಗೆಲ್ಲಾ ಎದುರಿಸುತ್ತಾನೆ ಎಂಬುದನ್ನು ರೋಚಕವಾಗಿ ಹೇಳುವ ಪ್ರಯತ್ನ ಮಾಡಿದ್ದಾರೆ ನಿರ್ದೇಶಕ ವಿಜಯ್ ಕಾರ್ತಿಕೇಯ.

ಮೈಮೇಲೆ ಖಾಕಿ, ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಸುದೀಪ್ ಮಸ್ತ್ ಆಗಿ ಪ್ರೇಕ್ಷಕರನ್ನು ರಂಜಿಸಿ ಅಭಿಮಾನಿಗಳಿಗೆ ಮೃಷ್ಟಾನ್ನ ಬಡಿಸಿದ್ದಾರೆ. ನಿರ್ದೇಶಕ ವಿಜಯ್ ಕಾರ್ತಿಕೇಯ ಅವರು ಮ್ಯಾಕ್ಸ್‌ನೊಂದಿಗೆ ಚೊಚ್ಚಲ ಸಿನಿಮಾದಲ್ಲಿ ಭರವಸೆ ಮೂಡಿಸಿದ್ದಾರೆ. ಕಥೆ ವಿಚಾರಕ್ಕೆ ಬಂದರೆ, ವಾವ್ ಎನ್ನಿಸುವ ಟ್ವಿಸ್ಟ್‌ಗಳಿವೆ. 'ಮ್ಯಾಕ್ಸ್' ಸಿನಿಮಾವನ್ನು ಪ್ರೆಸೆಂಟ್ ಮಾಡಿರುವ ರೀತಿ ಪ್ರೇಕ್ಷಕರ ಚಪ್ಪಾಳೆ ಗಿಟ್ಟಿಸಿಕೊಳ್ಳುತ್ತದೆ. ಒಂದೇ ರಾತ್ರಿಯಲ್ಲಿ ನಡೆಯುವ ಕಥೆಗಳನ್ನು ತೆರೆಗೆ ತರುವುದು ಸಾಮಾನ್ಯ ವಿಷಯವಲ್ಲ, ಸಿನಿಮಾ ಮೊದಲರ್ಧ ಮುಗಿದಿದ್ದೇ ಗೊತ್ತಾಗುವುದಿಲ್ಲ, ಕಥೆ ಅಷ್ಟೊಂದು ವೇಗವಾಗಿ ಸಾಗಿಸಿಕೊಂಡು ಹೋಗುತ್ತದೆ.

ದ್ವಿತೀಯಾರ್ಧದಲ್ಲಿ ಮಾಸ್ ಅಭಿಮಾನಿಗಳನ್ನು ಕೇಂದ್ರೀಕರಿಸಿ ಕಥೆ ಹೆಣೆಯಲಾಗಿದೆ. ಸಿನಿಮಾ ಕಥೆಗೆ ನಾಯಕಿಯಿಲ್ಲ, ಅನಗತ್ಯ ಹಾಡುಗಳಿಲ್ಲ, ಎಳೆದಾಟವಿಲ್ಲ, ಸಿನಿಮಾದಲ್ಲಿ ಸೆಂಟಿಮೆಂಟ್ ಇಲ್ಲ, ಕೇವಲ ಆ್ಯಕ್ಷನ್. ಸುದೀಪ್ ಅವರು ತಮ್ಮ ಬ್ಯಾರಿಟೋನ್ ಧ್ವನಿಯಲ್ಲಿ ಹಾಡಿರುವ 'ಬಾ ಬಾ ಬ್ಲ್ಯಾಕ್ ಶೀಪ್' ಆಸಕ್ತಿದಾಯಕ ಅಂಶವಾಗಿದೆ. ಇದು ಚಿತ್ರಕ್ಕೆ ಮತ್ತೊಂದು ಪ್ಲಸ್ ಪಾಯಿಂಟ್ ಆಗಿದೆ. ಸುದೀಪ್ ಇಡೀ ಸಿನಿಮಾವನ್ನು ಆವರಿಸಿಕೊಂಡಿದ್ದಾರೆ. ಆ್ಯಕ್ಷನ್ ದೃಶ್ಯಗಳಲ್ಲಿ ಅವರ ಸ್ಟೈಲ್, ಸಂಭಾಷಣೆಗಳು 'ಮ್ಯಾಕ್ಸ್'ಗೆ ಹೊಸ ರೂಪ ನೀಡಿದ್ದು ಇಡೀ ಸಿನಿಮಾ ಒನ್ ಮ್ಯಾನ್ ಶೋನಂತೆ ಭಾಸವಾಗುತ್ತದೆ. ಕನ್ನಡದ ನಿರ್ದೇಶಕರಿಗಿಂತ ಚೆನ್ನಾಗಿ ಸುದೀಪ್ ಅವರನ್ನು ಹೇಗೆ ಬಳಸಿಕೊಳ್ಳಬೇಕು ಎಂದು ತಿಳಿದಿರುವ ನಿರ್ದೇಶಕ ವಿಜಯ ಕಾರ್ತಿಕೇಯ ಸುದೀಪ್ ವಿಶ್ವರೂಪ ದರ್ಶನ ಮಾಡಿಸಿದ್ದಾರೆ.

ಮ್ಯಾಕ್ಸ್‌ನಲ್ಲಿ ವರಲಕ್ಷ್ಮಿ ಶರತ್‌ಕುಮಾರ್, ಸಂಯುಕ್ತಾ ಹೊರ್ನಾಡ್, ಪ್ರಮೋದ್ ಶೆಟ್ಟಿ, ಸುನಿಲ್ ಸೇರಿದಂತೆ ಹಲವರು ನಟಿಸಿದ್ದಾರೆ. ಎಲ್ಲರೂ ತಮ್ಮ ತಮ್ಮ ಪಾತ್ರಗಳನ್ನು ಉತ್ತಮವಾಗಿ ನಿರ್ವಹಿಸಿದ್ದಾರೆ. ಪ್ರತಿ ಪಾತ್ರಕ್ಕೂ ಅರ್ಹ ಸ್ಕ್ರೀನ್ ಸ್ಪೇಸ್ ನೀಡಲಾಗಿದೆ. ಆದರೆ ಸುನಿಲ್ ಅವರ ಚಿತ್ರಣವು ಅವರ ಪುಷ್ಪಾ ಪಾತ್ರವಾದ ಮಂಗಳಂ ಶ್ರೀನುವನ್ನು ನೆನಪಿಸುತ್ತದೆ. ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಹಿನ್ನೆಲೆ ಸಂಗೀತದ ಮೂಲಕ ಮತ್ತೊಮ್ಮೆ ತಮ್ಮ ಸಾಮರ್ಥ್ಯ ಸಾಬೀತು ಮಾಡಿದ್ದಾರೆ. ಮ್ಯಾಕ್ಸ್ ಕೇವಲ ಆ್ಯಕ್ಷನ್‌ಗೆ ಸೀಮಿತವಾಗಿಲ್ಲ, ನೈತಿಕ ಅಸ್ಪಷ್ಟತೆ, ಅಧಿಕಾರದ ಭ್ರಷ್ಟಾಚಾರ ಮತ್ತು ನ್ಯಾಯದ ನಿರಂತರ ಶೋಧನೆಯ ಕಥೆಯಾಗಿದೆ. ರಾಜಕೀಯ ಪಿತೂರಿ, ಅಪರಾಧ ಮತ್ತು ವೈಯಕ್ತಿಕ ಲಾಭಕ್ಕಾಗಿ ನಡೆಯುವ ಅವ್ಯವಹಾರ ಸೇರಿದಂತೆ ಎಲ್ಲಾ ಅಂಶಗಳನ್ನು ಒಟ್ಟಿಗೆ ತರುತ್ತದೆ. ಸಿನಿಮಾ ಕ್ಲೈಮ್ಯಾಕ್ಸ್ ಪ್ರೇಕ್ಷಕರ ಮೇಲೆ ಶಾಶ್ವತವಾದ ಪ್ರಭಾವವನ್ನು ಬೀರುತ್ತದೆ. ಒಟ್ಟಾರೆ 2024ರ ಅಂತ್ಯಕ್ಕೆ ಪ್ರೇಕ್ಷಕ ಮಹಾಪ್ರಭುಗಳಿಗೆ ಒಂದೊಳ್ಳೆ ಸಿನಿಮಾ ಸಿಕ್ಕಂತಾಗಿದೆ.

# ಕರಾವಳಿ ಟೀಸರ್‌ನಲ್ಲಿ ಪಿಶಾಚಿಯ ಕುರ್ಚಿ



ಗುರುದತ್ ಗಾಣಿಗ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ, ಭಾರಿ ನಿರೀಕ್ಷೆ ಮೂಡಿಸಿರುವ ಚಿತ್ರ ಕರಾವಳಿ. 2025ರ ಬಹು ನಿರೀಕ್ಷೆಯ ಭಾರತೀಯ ಸಿನಿಮಾಗಳ ಪಟ್ಟಿಯಲ್ಲಿ ಕರಾವಳಿ ಸಿನಿಮಾ ಕೂಡ ಜಾಗ ಗಿಟ್ಟಿಸಿಕೊಂಡಿರುವುದು ವಿಶೇಷ. ತನ್ನ ವಿಭಿನ್ನ ಶೈಲಿಯ ಪೋಸ್ಟರ್ಸ್ ಮತ್ತು ಟೀಸರ್ ಮೂಲಕ ಈಗಾಗಲೇ ಕುತೂಹಲ ಹೆಚ್ಚಿಸಿರುವ ಕರಾವಳಿ ಚಿತ್ರವು ಇದೀಗ ಹೊಸ ವರ್ಷದ ಪ್ರಯುಕ್ತ ಮತ್ತೊಂದು ಭರ್ಜರಿ ಟೀಸರ್ ಮೂಲಕ ಸಿನಿರಸಿಕರ ಮುಂದೆ ಬಂದಿದೆ. ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ ನಾಯಕನಾಗಿ ನಟಿಸಿರುವ, ಗುರುದತ್ ಗಾಣಿಗ ಅವರ ನಿರ್ದೇಶನದ ಕರಾವಳಿಯ ವಿಭಿನ್ನವಾದ ಟೀಸರ್ ಆಕರ್ಷಕವಾಗಿದ್ದು ಚಿತ್ರದ ಮೇಲಿನ ನಿರೀಕ್ಷೆಯನ್ನು ದುಪ್ಪಟ್ಟು ಮಾಡಿದೆ.

ಸಾಮಾನ್ಯವಾಗಿ ಟೀಸರ್ ಎಂದರೆ ನಾಯಕ, ನಾಯಕಿ ಅಥವಾ ಚಿತ್ರದ ಒಬ್ಬ ವ್ಯಕ್ತಿಯ ಮೇಲೆ ಕೇಂದ್ರೀಕೃತವಾಗಿರುತ್ತದೆ. ಆದರೆ ಕರಾವಳಿಯಿಂದ ಬಂದಿರುವ ಹೊಸ ಟೀಸರ್‌ನಲ್ಲಿ ಒಂದು ಪ್ರತಿಷ್ಠೆಯ ವಸ್ತುವಿನ ಮೇಲೆ ಕೇಂದ್ರೀಕೃತ ವಿಷಯ ಇರುವುದು ವಿಶೇಷ. ಸದ್ಯ ರಿಲೀಸ್ ಆಗಿರುವ ಕರಾವಳಿ ಟೀಸರ್‌ನಲ್ಲಿ ಪ್ರತಿಷ್ಠೆಯ ಕುರ್ಚಿಯೇ ಹೈಲೈಟ್. ಅದು ಬರೀ ಕುರ್ಚಿಯಲ್ಲ, ಪ್ರತಿಷ್ಠೆಯ ಪಿಚಾಚಿ ಎನ್ನುವ ಸಂಭಾಷಣೆಯಿಂದ ಈ ಚಿತ್ರದ ಟೀಸರ್ ಪ್ರಾರಂಭವಾಗುತ್ತದೆ. ಪ್ರತಿಷ್ಠೆಯ ಕುರ್ಚಿಯ ಮೇಲೆ ಕೂರುವುದಿರಲಿ, ಅದರಮೇಲೆ ಕಣ್ಣಿಟ್ಟವರನ್ನು ಸಹ ಬಿಡಲ್ಲ ಎಂದು ನಟ ಮಿತ್ರ ಅವರ ಧ್ವನಿಯಲ್ಲಿ ಮೂಡಿಬಂದಿರುವ ಈ ಟೀಸರ್ ಮೈ ಜುಮ್ ಎನ್ನುವಂತಿದೆ. ಅಂದಹಾಗೆ ಕರಾವಳಿ ಕಂಬಳ ಪ್ರಪಂಚದ ಸುತ್ತವ ಹೆಣೆಯಲಾಗಿರುವ ಕಥಾಹಂದರ ಹೊಂದಿರುವ ಚಿತ್ರ.



ಈ ಮೊದಲು ರಿಲೀಸ್ ಆಗಿರುವ ಚಿತ್ರದ ಟೀಸರ್‌ನಲ್ಲಿ ಒಂದು ಮಗು ಜನಿಸುತ್ತದೆ, ಅದೇ ಸಮಯಕ್ಕೆ ಕೊಟ್ಟಿಗೆಯಲ್ಲಿ ಒಂದು ಕರುವಿನ ಜನನವೂ ಆಗುತ್ತೆ. ಸದ್ಯ ರಿಲೀಸ್ ಆಗಿರುವ ಟೀಸರ್‌ನ ಮುಂದುವರೆದ ಭಾಗ ಎನ್ನುವಂತೆ ಆ ಮಗು ಹುಟ್ಟಿದಾಗಿನಿಂದ ಪ್ರತಿಷ್ಠೆಯ ಕುರ್ಚಿಯನ್ನು ನೋಡುತ್ತಾ ಬೆಳೆದವನು, ಆ ಕುರ್ಚಿಯ ಮೇಲೆ ಎಲ್ಲರ ಕಣ್ಣು ಬಿದ್ದಿರುವುದು ಈ ಟೀಸರ್‌ನಲ್ಲಿ ಗೊತ್ತಾಗುತ್ತದೆ. ನಟ ಮಿತ್ರ ಅವರ ಘರ್ಜನೆ, ರಮೇಶ್ ಇಂದಿರ ಅವರ ಕ್ರೌರ್ಯತ್ವವನ್ನು ಕೂಡ ಈ ಟೀಸರ್‌ನಲ್ಲಿ ಕಾಣಬಹುದು. ಕೆಕೆ ಮಠ ಹಾಗೂ ಟೀಸರ್‌ನ ಕೊನೆಯ ಒಂದು ಫ್ರೇಮ್‌ನಲ್ಲಿ ಕಾಣಿಸಿಕೊಳ್ಳುವ ನಾಯಕ ಪ್ರಜ್ವಲ್ ದೇವರಾಜ್ ಕೂಡ ತುಂಬಾ ಇಂಟ್ರೆಸ್ಟಿಂಗ್ ಎನಿಸುತ್ತಾರೆ.

ಪ್ರಜ್ವಲ್ ದೇವರಾಜ್‌ಗೆ ಮೂರು ಲುಕ್ ಈಗಾಗಲೇ ಈ ಸಿನಿಮಾದಲ್ಲಿನ ಪ್ರಜ್ವಲ್ ದೇವರಾಜ್ ಅವರ ಮೂರು ರೀತಿಯ ಲುಕ್ ರಿವೀಲ್ ಆಗಿದೆ. ಯಕ್ಷಗಾನ, ಕಂಬಳ, ಮಹಿಷಾಸುರ ಹೀಗೆ 3 ವೆರೈಟಿ ಗೆಟಪ್‌ನಲ್ಲಿ ಪ್ರಜ್ವಲ್ ಅವರು ಕಾಣಿಸಿಕೊಂಡಿದ್ದು, ಪ್ರಜ್ವಲ್ ಇಲ್ಲಿ ಯಕ್ಷಗಾನ ಕಲಾವಿದನಾ ಅಥವಾ ಕಂಬಳ ಕೊಡಿಸುವವನಾ ? ಎನ್ನುವ ಗೊಂದಲವಿದ್ದು, ಡೈನಮಿಕ್ ಪ್ರಿನ್ಸ್ ಪ್ರಜ್ವಲ್ ಪಾತ್ರ ಯಾವುದು ಎನ್ನುವ ಕುತೂಹಲವನ್ನು ಮೂಡಿಸಿದೆ.

ಕರಾವಳಿ ಚಿತ್ರಕ್ಕೆ ಈಗಾಗಲೇ ಶೇ.80ರಷ್ಟು ಭಾಗದ ಚಿತ್ರೀಕರಣ ಯಶಸ್ವಿಯಾಗಿ ಮುಗಿದಿದೆ. ಈ ಸಿನಿಮಾದಲ್ಲಿ ಪ್ರಜ್ವಲ್ ದೇವರಾಜ್ ಅವರ ಜತೆ ನಾಯಕಿಯಾಗಿ ಕನ್ನಡದ ನಟಿ ಸಂಪದಾ ಅವರು ಕಾಣಿಸಿಕೊಂಡಿದ್ದಾರೆ. ಕರಾವಳಿ ಚಿತ್ರದ ಬಹುತೇಕ ಚಿತ್ರೀಕರಣವನ್ನು ಕರಾವಳಿ ಭಾಗದ ಸುತ್ತಮುತ್ತಲ ಪ್ರದೇಶಗಳಲ್ಲೇ ನಡೆಸಲಾಗಿದೆ. ಈ ಸಿನಿಮಾಗೆ ಗುರುದತ್ ಗಾಣಿಗ ಅವರು ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡುವ ಜೊತೆಗೆ ಅವರದೇ ಆದ ಗಾಣಿಗ ಫಿಲಂಸ್ ಹಾಗೂ ವಿಕೆ ಫಿಲಂಸ್ ಅಸೋಸಿಯೇಷನ್‌ನಲ್ಲಿ ನಿರ್ಮಾಣ ಸಹ ಮಾಡುತ್ತಿದ್ದಾರೆ. ಮನುಷ್ಯ ಹಾಗೂ ಪ್ರಾಣಿಯ ಮಧ್ಯೆ ನಡೆಯುವ ಸಂಘರ್ಷದ ಕಥೆಯನ್ನು ಹೇಳುವ ಕರಾವಳಿ ಪಕ್ಕಾ ಹಳ್ಳಿಯ ಬ್ಯಾಕ್‌ಡ್ರಾಪ್‌ನಲ್ಲಿ ನಡೆಯೋ ಕಥಾಹಂದರವನ್ನು ಒಳಗೊಂಡ ಚಿತ್ರ. ಈ ಚಿತ್ರಕ್ಕೆ ಸಚಿನ್ ಬಸ್ರೂರು ಅವರ ಸಂಗೀತ ಸಂಯೋಜನೆ, ಅಭಿಮನ್ಯು ಸದಾನಂದನ್ ಅವರ ಕ್ಯಾಮರಾ ವರ್ಕ್ ಇದೆ.

# 'ನೀ ನಂಗೆ ಅಲ್ಲವಾ'ಗೆ ಕಾಶಿಮಾ!

ಮನೋಜ್ ಪಿ. ನಡಲುಮನೆ ನಿರ್ದೇಶನದ 'ನೀ ನಂಗೆ ಅಲ್ಲವಾ' ಚಿತ್ರಕ್ಕೆ ನಾಯಕಿಯಾಗಿ ನಟಿ ಕಾಶಿಮಾ ಆಯ್ಕೆಯಾಗಿದ್ದಾರೆ. ರಾಹುಲ್ ಅರ್ಕಾಟ್ ಅವರು ನಾಯಕರಾಗಿ ಈ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪದಾರ್ಪಣೆ ಮಾಡುತ್ತಿದ್ದಾರೆ.

ನೀ ನಂಗೆ ಅಲ್ಲವಾ ಚಿತ್ರವನ್ನು ನಟ ಶ್ರೀಮುರಳಿ ಮತ್ತು ವಿದ್ಯಾ ಶ್ರೀಮುರಳಿ ಅವರು ಅರ್ಪಿಸುತ್ತಿದ್ದಾರೆ. ಈ ಹಿಂದೆ ಎಫ್3 ಪ್ರೊಡಕ್ಷನ್ಸ್ ಲಾಂಛನದಲ್ಲಿ ಸತೀಶ್ ನೀನಾಸಂ ನಟನೆಯ 'ಮ್ಯಾಟ್ನಿ' ಚಿತ್ರವನ್ನು ನಿರ್ಮಿಸಿದ್ದ ಎಸ್. ಪಾರ್ವತಿ ಗೌಡ, ಪವನ್ ಪರಶಿವಂ ಹಾಗೂ ಮನೋಹರ್ ಕ್ಯಾಂಪಲ್ಲಿ ಈ ಚಿತ್ರ ನಿರ್ಮಾಣದ ಹೊಣೆ ಹೊತ್ತಿದ್ದಾರೆ. ರಾಹುಲ್ ಅವರಿಗೆ ಇದು ಚೊಚ್ಚಲ ಸಿನಿಮಾವಾಗಿದ್ದು, ಚಿತ್ರತಂಡ ಪೋಸ್ಟರ್ ಮೂಲಕ ನಾಯಕಿಯನ್ನು ಪರಿಚಯಿಸಿದೆ. ಚಿತ್ರಕ್ಕೆ ಸೂರಜ್ ಜೋಯಿಸ್ ಅವರ ಸಂಗೀತ ನಿರ್ದೇಶನವಿದೆ. ರಾಷ್ಟ್ರಪ್ರಶಸ್ತಿ ವಿಜೇಯ ನಾಗೇಂದ್ರ ಉಜ್ಜನಿ ಅವರ ಸಂಕಲನವಿದ್ದು, ಸಂಕ್ರಾಂತಿ ಹಬ್ಬದ ನಂತರ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ. 'ಸೌತ್ ಇಂಡಿಯನ್ ಹೀರೋ' ಚಿತ್ರದಲ್ಲಿನ ತಮ್ಮ ಅಭಿನಯದ ಮೂಲಕ ಹೆಸರುವಾಸಿಯಾದ ಕಾಶಿಮಾ ಸದ್ಯ 'ವಿಕ್ಟೋರಿಯಾ ಮ್ಯಾನ್ಷನ್' ಚಿತ್ರ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ.

Vol. 40 No. 30 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com